ರಂಜನೆ ಬೋಧನೆ ಪ್ರಚೋದನೆ

ಗೌರಿ

ಲಂಕೇಶ್

ಆಗಸ್ಟ್ 20, 2008 ರೂ. 12/-





2,500 ಕೋಟಿ ಆಸ್ತಿಗೆ ಉತ್ತರಾಧಿಕಾರಿ ಯಾರು?

ರಿಶಂಕರ ಸ್ವಾಮಿ

ತ್ಯಾಯತ್ನ?

ಯೋತ್ಪಾದನೆ, ಬುದ್ಧಿಜೀವಿಗಳು ಮತ್ತು ಬಿಜೆಪಿ



ಶ್ರೀರಾಮ ಸೇನೆಯ ಆಪರೇಷನ್ ಹಂದಿ ತಲೆ



ಾನಾಪುರ: ಮಂತ್ರವಾದಿ ಶಾಸಕನಾದ!

ವಣಗೆರೆ

ೋತದ ಹಾಲು ಎಂಬ ವಂಚನೆ

ಮೈಸೂರು ದಸರಾ... ಕಲಾವಿದರಿಗೆ ಬ್ಯಾಸರ!

ಕೆರುಳಿನ ಕಳೆ ಪಿಕ್ಚರಿನಲ್ಲಿ ನಮ್ಮ ಅಣ್ಣಾವ್ರು 'ಮೈಸೂರು ದಸರಾ.... ಎಷ್ಟೊಂದು ಸುಂದರ...' ಎಂದು ಹಾಡುತ್ತಾ ಕುಣಿದದ್ದು ನೆನಪಿರಬಹುದು. ಈಗಲೂ ದಸರೆಗೆಂದು ಹೋದವರಿಗೆ ಅದರ ವೈಭವ, ನೃತ್ಯ ಗಾಯನ, ಜನಪದ ಕಲೆಗಳ ವೈವಿಧ್ಯತೆ ನೋಡಿ ಆನಂದವಾಗಲಿಕ್ಕೂ ಸಾಕು. ಆದರೆ ದೀಪದ ಕೆಳಗೆ ಕತ್ತಲು ಅನ್ನುವಂತೆ ಜಾನಪದ ಕಲಾವಿದರ ಪಾಲಿಗೆ ದಸರಾ ಅನ್ನುವುದು ಶೋಷಣೆ, ಅವಮಾನ, ಚಿತ್ರ ಹಿಂಸೆಗಳ ಹಬ್ಬವಾಗಿ ಬಿಟ್ಟಿದೆ.

ಹೇಳಿಕೊಳ್ಳಲಿಕ್ಕೆ ಈ ದಸರಾ ಒಂದು ನಾಡಹಬ್ಬ. ಇದಕ್ಕೆಂದು ಸರ್ಕಾರ ಪ್ರತಿವರ್ಷ ಹತ್ತಾರು ಕೋಟಿ ಖರ್ಚು ಮಾಡುತ್ತಿದೆ. ದಸರಾ ನಡೆಸಲು ವಾರ್ತಾ ಇಲಾಖೆ, ಕನ್ನಡ ಸಂಸ್ಕೃತಿ ಇಲಾಖೆ, ಪೊಲೀಸ್ ಇಲಾಖೆ, ಮೈಸೂರು ನಗರ ಪಾಲಿಕೆ ಹೀಗೆ ಹತ್ತಾರು ತರದ ದೊಡ್ಡ ಅಧಿಕಾರಿಗಳು ಧಡಗರಿಯುತ್ತಾ ಓಡಾಡುತ್ತಿರುತ್ತಾರೆ. ಪ್ರಚಾರವೂ ಭರ್ಜರಿಯಾಗಿರುತ್ತದೆ.

ಆದರೆ ಜಾನಪದ ಕಲಾವಿದರು ಮಾತ್ರ ಇಲ್ಲಿ ಕಾಲಕಸಕ್ಕಿಂತ ಕಡೆಯಾಗಿದ್ದಾರೆ. ನೀವು ನಂಬುತ್ತೀರೋ ಇಲ್ಲವೋ ದಸರಾ ಉತ್ಸವಕ್ಕೆಂದು ರಾಜ್ಯದ ಬೇರೆ ಬೇರೆ ಭಾಗಗಳಿಂದ ಮೈಸೂರಿಗೆ ಬಂದು ಮೂರು ದಿನ ಪ್ರದರ್ಶನ ನೀಡಿ ಹೋಗುವ ಡೊಳ್ಳು ಕುಣಿತ, ನಂದಿ ಕೋಲು ಕುಣಿತ, ವೀರಗಾಸೆ, ಕಂಸಾಳೆ ನೃತ್ಯಗಾರರಂತಹ ಜಾನಪದ ಕಲಾವಿದರಿಗೆ ಹಾಲಿ ಬಿಜೆಪಿ ಸರ್ಕಾರ ನಿಗದಿ ಮಾಡಿರುವ ಸಂಭಾವನೆ ಎಷ್ಟು ಗೊತ್ತೇ?

ನೂರು ರೂಪಾಯಿಗಳು!



ಇದರೊಳಗೆ ಪ್ರಯಾಣ ವೆಚ್ಚ ಹಾಗೂ ಸಂಭಾವನೆ ಮೊತ್ತವೂ ಸೇರಿಕೊಂಡಿದೆ!!

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆ ಪ್ರತಿದಿನ ಸೆಂಟು ಪೌಡರಿಗೆಂದು ಬಹುಶಃ ಇದಕ್ಕಿಂತ ಜಾಸ್ತಿ ದುಡ್ಡು ಖರ್ಚು ಮಾಡಬಹುದು, ಆದರೆ ಜಾನಪದ ಕಲಾವಿದರು ಮಾತ್ರ ಪಾಪಿಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಷ್ಟು ಕೊಳೆತು ನಾರುತ್ತಿದೆಯೆಂದರೆ 30ರಿಂದ 40 ಮಂದಿ ಜಾನಪದ




ಡೊಳ್ಳು ಕುಣಿತ

ಕಲಾವಿದರ ತಂಡ ಶಿವಮೊಗ್ಗ, ಸೊರಬದಂತಹ ದೂರದ ಸ್ಥಳಗಳಿಂದ ಬಂದರೂ ಇಡೀ ತಂಡಕ್ಕೆ ಮೂರೋ ನಾಲ್ಕೋ ಸಾವಿರ ಕೈಗಿಟ್ಟು ಕಳಿಸುತ್ತಿದ್ದಾರೆ. ಜೊತೆಗೆ ಈ ಕಲಾವಿದರು ಪ್ರತಿದಿನ ಎಂಟು ಹತ್ತು ಗಂಟೆ ಕಾಲ ಸತತವಾಗಿ ಪ್ರದರ್ಶನ ನೀಡಿ ಸುಸ್ತಾಗಿ ಹೋಗಬೇಕು... ಹಾಗಿರುತ್ತದೆ ವ್ಯವಸ್ಥಾಪಕರ ಕತ್ತೆತನ.

ಅತೀ ಬೇಸರದ ಸಂಗತಿ ಏನೆಂದರೆ ಸುಗಮ ಸಂಗೀತ, ಶಾಸ್ತ್ರೀಯ ಸಂಗೀತದವರನ್ನು ಉತ್ತಮ ಹೋಟೆಲ್‌ಗಳಲ್ಲಿ ಉಳಿಸುವ ವ್ಯವಸ್ಥಾಪಕರು, ಜಾನಪದ ಕಲಾವಿದರನ್ನು ಛತ್ರಗಳಲ್ಲಿ ತಂದು ಬಿಸಾಡುತ್ತಾರೆ. ಅಲ್ಲಿ ನೀರು, ಶೌಚ, ಸ್ನಾನಕ್ಕೆ ಅನುಕೂಲವಿದೆಯಾ ಇಲ್ಲವಾ ಅಂತಲೂ ಗಮನಿಸಿಕೊಳ್ಳುವುದಿಲ್ಲ. ಅಂದಹಾಗೆ ಈ ಜಾನಪದ ಕಲಾವಿದರ ಯೋಗಕ್ಷೇಮ ನೋಡಿಕೊಳ್ಳುವ ಹೊಣೆಯನ್ನು ಮೈಸೂರು ಪೊಲೀಸರಿಗೆ ವಹಿಸಿಬಿಟ್ಟಿದೆ ಸರ್ಕಾರ. ಪ್ರತಿವರ್ಷ ಕನಿಷ್ಠ ಒಂದೂವರೆ ಸಾವಿರ ಜಾನಪದ ಕಲಾವಿದರು ಮೈಸೂರಿಗೆ ಬಂದಿಳಿಯುತ್ತಾರೆ. ಇವರ ಊಟದ ಸಮಸ್ಯೆ ಬಗೆಹರಿಸಲು ಮೈಸೂರು ಪೊಲೀಸರು ಒಂದು ಅದ್ಭುತ ಐಡಿಯಾ ಕಂಡುಕೊಂಡಿದ್ದಾರೆ.



ವೀರೇಶ ಬಳ್ಳಾರಿ



ನಲ್ಲೂರು ಪ್ರಸಾದ್

ಅದು ಮೈಸೂರು ಜೈಲಿನಿಂದ ಊಟ ತರಿಸಿಕೊಡುವುದು!

ಸರ್ಕಾರದ ದೃಷ್ಟಿಯಲ್ಲಿ ಜಾನಪದ ಕಲಾವಿದರೆಂದರೆ ಜೈಲುವಾಸಿಗಳಿಗೆ ಸಮ ಅಂತಾಯಿತು.

ನಿಮಗೆ ಇದೇ ಸಮಯದಲ್ಲಿ ಇನ್ನೊಂದು ಹೋಲಿಕೆ ನೀಡಿ ದಸರಾದ ಮೋಸಗಳನ್ನು ವಿವರಿಸಬಹುದು.

ಇದೇ ದಸರಾದಲ್ಲಿ ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ, ಪಿಟೀಲು, ತಬಲಾ, ಭರತ ನಾಟ್ಯಗಳ ಕಾರ್ಯಕ್ರಮವೂ ಇರುತ್ತದೆ. ಇವರಿಗೆಲ್ಲಾ ಸಂಭಾವನೆ ಶುರುವಾಗುವುದೇ 10 ಸಾವಿರದಿಂದ!

ಯಾವ ದಸರಾ ಕಾರ್ಯಕ್ರಮಕ್ಕೆಂದು ದೂರದ ಕೊಲ್ಕತ್ತ ಚೆನ್ನೈ, ದೆಹಲಿಗಳಿಂದ ದೊಡ್ಡ ಕಲಾವಿದರನ್ನು ವಿಮಾನದಲ್ಲಿ ಕರೆಸಿ, ಸ್ಟಾರ್ ಹೋಟೆಲ್‌ನಲ್ಲಿ ಉಳಿಸಿ, ಒಂದೂವರೆ ಲಕ್ಷದ ತನಕ ಸಂಭಾವನೆ ಕೊಟ್ಟು ಕಳಿಸುವ ಸಂಸ್ಕೃತಿಯೂ ಸರ್ಕಾರಕ್ಕಿದೆ.

ಅಂದರೆ ಮೇಲ್ಜಾತಿಗಳವರ ಕಲೆಗೆ ರಾಜಾಥಿತ್ಯ!

ಅನ್ಯಜಾತಿ ವರ್ಗಗಳ ಕಲೆಗೆ ಭಕ್ಷಾಥಿತ್ಯ!!

ಇದು ಬಿಜೆಪಿ ಸರ್ಕಾರದ ಹೊಸ ಸಾಂಸ್ಕೃತಿಕ ಪಾಲಿಸಿ.

ಈ ತಾರತಮ್ಯ ಅವಮಾನಗಳನ್ನು ಜಾನಪದ ಕಲಾವಿದರು ಪ್ರತಿಭಟಿಸಲು ಈಗ ತಯಾರಾಗುತ್ತಿದ್ದಾರೆ. ವೀರೇಶ ಬಳ್ಳಾರಿ, ನಲ್ಲೂರು ಪ್ರಸಾದ್, ಜನ್ನಿ, ಬಿ.ಕೆ.ಸುಮಿತ್ರ, ಸಿದ್ದರಾಜು, ನರಸಿಂಹಮೂರ್ತಿ ಮುಂತಾದವರು ಜಾನಪದ ಕಲಾವಿದರ ಒಕ್ಕೂಟ ರಚಿಸಿಕೊಂಡು ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ.

ಸರ್ಕಾರಕ್ಕೆ ರವಷ್ಟಾದರೂ ಮಾನ ಮರ್ಯಾದೆ ಇದ್ದರೆ ಜಾನಪದ ಕಲಾವಿದರನ್ನೂ ಮೊದಲು ಮನುಷ್ಯರೆಂಬಂತೆ ಘನತೆಯಿಂದ ನಡೆಸಿಕೊಳ್ಳುವುದನ್ನು ಕಲಿಯಲಿ. ಇಲ್ಲದಿದ್ದರೆ ಈ ಬಾರಿಯ ದಸರಾ ಸುಸೂತ್ರವಾಗಿ ನಡೆಯುವುದು ಕಷ್ಟಸಾಧ್ಯವಾಗಬಹುದು.

ಕೇಳಿಸಿತ್ತಾ ಶೋಭಾ ಮೇಡಂ...? ■

ಮಾಜಿ ರಾಜರುಗಳೂ ಬರುತ್ತಿದ್ದಾರೆ!

ಮೈಸೂರು ದಸರಾ ಈಗ ಪೂರ್ತಿ ಸಂಘ ಪರಿವಾರದ ಹಿಡಿತಕ್ಕೆ ಹೋಗಿದೆ. ಅದಕ್ಕೆ ಇನ್ನೊಂದು ಸಾಕ್ಷಿ ಏನೆಂದರೆ ಈ ಬಾರಿ ಭಾರತದ ಹಲವು ರಾಜವಂಶಸ್ಥರನ್ನು ಮೈಸೂರಿನ ನವರಾತ್ರಿ ಉತ್ಸವಕ್ಕೆ ಬಿಜೆಪಿ ಸರ್ಕಾರ ಆಹ್ವಾನಿಸಲು ಹೊರಟಿದೆ.

ರಾಜರುಗಳ ಪುರೋಹಿತರ ಕಾಯಂ ಸೇವಕರಾದ ಬಿಜೆಪಿಗಳಿಗೆ ಪ್ರಜಾಪ್ರಭುತ್ವದ ಯಾವ ಮೌಲ್ಯಗಳೂ ಬೇಕಿಲ್ಲ. ಇಷ್ಟಕ್ಕೂ ಇವರು ಆಹ್ವಾನಿಸಬಹುದಾದ ಗ್ವಾಲಿಯರ್, ಬರೋಡ, ಉದಯಪುರ, ತಿರುವಾಂಕೂರ್ ರಾಜಮನೆತನಗಳು ಬ್ರಿಟಿಷರ ಸೇವಕರಾಗಿದ್ದವರು. ಮೈಸೂರು ಒಡೆಯರ್ ಸೇರಿದಂತೆ ಇವರೆಲ್ಲರೂ ಭಾರತದ ಜನತೆಯ ಸ್ವಾತಂತ್ರ್ಯ ಹೋರಾಟದ ಶತ್ರುಗಳಾಗಿದ್ದವರು.

ಸ್ವಾತಂತ್ರ್ಯ ಬಂದನಂತರ ನಮ್ಮ ಸಂವಿಧಾನದ ನೀತಿ ಆಶಯಗಳಂತೆ ಈ ರಾಜಮಹಾರಾಜರುಗಳ ಬಿರುದು, ಬಾವಲಿ, ಆಸ್ತಿ, ಸ್ಥಾನಮಾನ ರದ್ದು ಮಾಡಿ, ಸಾಮಾನ್ಯ ಪ್ರಜೆಗಳ ಹಂತಕ್ಕೆ ಇಳಿಸಲಾಗಿತ್ತು.

ಆದರೆ ಬಿಜೆಪಿಗಳ ಪರಂಪರೆಗೆ ತಕ್ಕ ಹಾಗೆ ಇತಿಹಾಸದ ಕಸದಬುಟ್ಟಿ ಸೇರಿರುವ ಈ ಜನರನ್ನು ಈಗ ಮತ್ತೆ ಮೆರೆಸಲು ಹೊರಟಿದ್ದಾರೆ. ■




ಮಂಪರು ಪರೀಕ್ಷೆ: ತಮಗೆ ಬೇಕಾದದ್ದು ಮಾತ್ರ ಸತ್ಯವೆ?

■ ಕುಮಾರ್ ಬುರಡಿಕಟ್ಟೆ

ಆರೋಪಿಗಳ ಆರೋಪವನ್ನು ಪತ್ತೆ ಹಚ್ಚುವುದಕ್ಕಾಗಿ ಇತ್ತೀಚೆಗೆ ಪೊಲೀಸರು ಹಿಂದೆಂದಿಗಿಂತಲೂ ಹೆಚ್ಚಾಗಿ ಮಂಪರು ಪರೀಕ್ಷೆಯ ಮೊರೆ ಹೋಗುತ್ತಿದ್ದಾರೆ. ಮಂಪರು ಪರೀಕ್ಷೆಯಲ್ಲಿ ಹೇಳಿದ್ದನ್ನೇ ನ್ಯಾಯಾಲಯದಲ್ಲಿ ಸಾಕ್ಷಿಯಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಸ್ವತಃ ಕೋರ್ಟುಗಳೇ ಹೇಳಿದ್ದರೂ ಮಂಪರು ಪರೀಕ್ಷೆಯು ಪ್ರಕರಣವೊಂದರ ತನಿಖೆಯಲ್ಲಿ ಸಹಕಾರಿಯಾಗುತ್ತದೆ ಎಂಬ ಮೊಂಡುವಾದವನ್ನಿಟ್ಟುಕೊಂಡು ಪೊಲೀಸರು ಈ ಪರೀಕ್ಷಾ ವಿಧಾನವನ್ನು ಅನುಸರಿಸುತ್ತಿದ್ದಾರೆ.

ಮಂಪರು ಪರೀಕ್ಷೆಗಾಗಲೀ, ಬ್ರೇನ್ ಮ್ಯಾಪಿಂಗ್‌ಗೆ ಆಗಲೀ ಅಥವ ಸುಳ್ಳು ಪತ್ತೆ ವಿಧಾನಕ್ಕಾಗಲೀ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ. ವಾಸ್ತವದಲ್ಲಿ ಅವೆಲ್ಲ ಟಾರ್ಚರ್‌ನ (ಚಿತ್ರಹಿಂಸೆಯ) ಆಧುನಿಕ ಮತ್ತು ಕ್ರೂರ ರೂಪ ಎಂಬುದನ್ನು ಬಹುತೇಕ ಪಾಶ್ಚಿಮಾತ್ಯ ರಾಷ್ಟ್ರಗಳು ಒಪ್ಪಿಕೊಂಡು ತಮ್ಮ ತಮ್ಮ ದೇಶಗಳಲ್ಲಿ ಇವುಗಳನ್ನು ನಿಷೇಧಿಸಿವೆ. ಬಾಂಬೆ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಹೊಸ್ಬೆಟ್ಟು ಸುರೇಶ್ ಅವರೇ ಖುದ್ದಾಗಿ "ಮಂಪರು ಪರೀಕ್ಷೆ ಎಂಬುದೇ ಚಿತ್ರಹಿಂಸೆಯ ಒಂದು ವಿಧಾನ. ಸುದ್ದಿವಾಹಿನಿಯೊಂದು ಈ ಪರೀಕ್ಷೆಯ ವಿವರಗಳನ್ನು ಬಿತ್ತರಿಸಿದೆ. ಇದು ಚಿತ್ರಹಿಂಸೆಯ ಸಾರ್ವಜನಿಕ ಪ್ರದರ್ಶನ. ಇದಕ್ಕೆ ಕೋರ್ಟುಗಳು ಅನುಮತಿ ನೀಡುತ್ತಿರುವುದು ಸರಿಯಲ್ಲ" ಎಂದು ಪ್ರತಿಭಟಿಸಿದ್ದಾರೆ. ಆದರೂ, ನಮ್ಮ ದೇಶದಲ್ಲಿ ಮಾತ್ರ ಅವುಗಳನ್ನು ಯಾವ ಅಡೆತಡೆಯೂ ಇಲ್ಲದೇ ಮಾಡಲಾಗುತ್ತಿದ್ದು ನ್ಯಾಯಾಲಯಗಳೂ ಕೂಡ ಹಿಂದುಮುಂದು ನೋಡದೆ ಇದಕ್ಕೆ ಅನುಮತಿ ನೀಡುತ್ತಿವೆ.


AN OPEN LETTER TO THE DIRECTOR, FORENSIC SCIENCE LABORATORY (FSL), BANGALORE

To,
The Director
Forensic Science Laboratory,
Madivala, Bangalore - 68.

Dear Sir,
In September 2007, The Maharashtra Police ground myself and my co-accused Mr. Ashok Reddy with the 'affliction' of experiencing the practice of your instruction. Having failed to conjuring any sadistic intent in our minds during the Narco-analysis at the Mumbai FSL in May 2007, the Maharashtra Police assigned this challenge to its Bangalore counterpart. The reasons were obvious. Out of the various FSL's situated across the country, the Bangalore one along with its Assistant Director Dr. S. Malini is reputed for having a high track record in solving the most mysterious of so-called terrorist crimes. So thus we became subjects on the Forensic Psycho-analyst's couch ready to be given the Ultimate Scientific Certificate in the absence of any other incriminating evidence. The various legal permissions were duly 'managed' from the judiciary

ಮಂಪರು ಪರೀಕ್ಷೆಯ ಸಮಯದಲ್ಲಿ ಅರೆಪ್ರಜ್ಞಾವಸ್ಥೆಯಲ್ಲಿರುವ ವ್ಯಕ್ತಿಯು ಪೊಲೀಸರಿಗೆ ಇಷ್ಟವಾದ ಹೇಳಿಕೆ ನೀಡಿದರೆ ಅದೇ ಸತ್ಯ ಎಂದು ಬೊಂಬಡಾ ಹೊಡೆಯುತ್ತಾರೆ. ಆದರೆ, ಒಂದು ವೇಳೆ ಪೊಲೀಸರಿಗೆ ಇಷ್ಟವಿಲ್ಲದ ವಿಚಾರವನ್ನು ಆ ವ್ಯಕ್ತಿ ಹೇಳಿದರೆ ಮಂಪರು ಪರೀಕ್ಷೆಯಲ್ಲಿ ಹೇಳಿದ್ದೆಲ್ಲಾ ಸತ್ಯವಲ್ಲ ಎಂದು ಉಲ್ಟಾ ಹೊಡೆಯುತ್ತಾರೆ. ಇದಕ್ಕೆ ಒಂದು ನಿದರ್ಶನ ಇಲ್ಲಿದೆ ನೋಡಿ.

2007ರ ಮೇ ತಿಂಗಳಲ್ಲಿ ಮಹಾರಾಷ್ಟ್ರದ ಪೊಲೀಸರು ಅರುಣ್ ಫೆರ್ರೈರಾ ಎಂಬ ವ್ಯಕ್ತಿಯನ್ನು ಆತ ನಕ್ಸಲೈಟ್ ಚಟುವಟಿಕೆಯಲ್ಲಿ ಭಾಗವಹಿಸಿದ್ದ ಎಂಬ ಆರೋಪದ ಮೇಲೆ ಬಂಧಿಸಿದ್ದರು. ಅತ್ಯಂತ ಸುಶಿಕ್ಷಿತನಾಗಿದ್ದ ಉನ್ನತ ವ್ಯಾಸಂಗ ಮಾಡಿದ್ದ ಮುಂಬಯಿಯ ಪ್ರತಿಷ್ಠಿತ ಕಾಲೇಜುಗಳಲ್ಲಿ ಓದಿದ್ದ ಅರುಣ್ ಫೆರ್ರೈರಾ ನಕ್ಸಲ್ ಚಳವಳಿಯಲ್ಲಿದ್ದ ಎಂಬ ಈ ಸುದ್ದಿ ಬಾಂಬೆ ಮಾತ್ರವಲ್ಲ, ಇಡೀ ಮಹಾರಾಷ್ಟ್ರದಾದ್ಯಂತ ಬಹುದಿನಗಳವರೆಗೆ ಚರ್ಚಾವಿಷಯವಾಗಿತ್ತು. ಆತ ನಕ್ಸಲ್ ವಿಧ್ವಂಸಕ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ ಎಂಬುದನ್ನು ಸಾಬೀತುಪಡಿಸುವುದಕ್ಕೆ ಪೊಲೀಸರ ಬಳಿ ಯಾವುದೇ ಸಾಕ್ಷ್ಯಾಧಾರಗಳಿರಲಿಲ್ಲ. ಹಾಗಾಗಿ, ಅರುಣ್ ಫೆರ್ರೈರಾನನ್ನು ಮಂಪರು ಪರೀಕ್ಷೆಗೊಳಪಡಿಸಿ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಮುಂದಾದ ಪೊಲೀಸರು 2007 ಮೇ ತಿಂಗಳಿನಲ್ಲಿ ಕೋರ್ಟಿನಿಂದ ಅನುಮತಿ ಪಡೆದು ಮುಂಬೈನಲ್ಲಿ ಮಂಪರು ಪರೀಕ್ಷೆ ನಡೆಸಿದರು. ಈ ಪರೀಕ್ಷೆಯಿಂದಲೂ ಪೊಲೀಸರಿಗೆ ಯಾವ ಮಾಹಿತಿಯೂ ಸಿಗಲಿಲ್ಲ. ನಂತರ ಮತ್ತೆ ಅರುಣ್ ಅವರನ್ನು ಬೆಂಗಳೂರಿನ ಪ್ರಯೋಗಾಲಯದಲ್ಲಿ ಮಂಪರು ಪರೀಕ್ಷೆಗೊಳಪಡಿಸುವುದಕ್ಕೆ ಕೋರ್ಟಿನಿಂದ ಅನುಮತಿ ಪಡೆದುಕೊಂಡರು. ಏಕೆಂದರೆ, ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿರುವ ಸಹಾಯಕ ನಿರ್ದೇಶಕಿ ಡಾ. ಎಸ್.ಮಾಲಿನಿಯವರು ಯಾವುದೇ ಸಾಕ್ಷ್ಯಾಧಾರಗಳಿಲ್ಲದಿದ್ದಾಗಲೂ ಬಹುತೇಕ ಭಯೋತ್ಪಾದಕ ಅಪರಾಧಗಳ ಕಗ್ಗಂಟುಗಳನ್ನು ಬಿಡಿಸಿದ (ಕು)ಖ್ಯಾತಿ ಹೊಂದಿದವರು. ಹಾಗಾಗಿ, ಮಹಾರಾಷ್ಟ್ರದ ಪೊಲೀಸರೂ ಡಾ. ಎಸ್.ಮಾಲಿನಿಯ ಮೊರೆ ಹೋದರು. 2007ರ ಸೆಪ್ಟೆಂಬರ್‌ನಲ್ಲಿ ಡಾ. ಎಸ್.ಮಾಲಿನಿ ನೇತೃತ್ವದಲ್ಲಿ ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಯಿತು. ಆದರೆ, ಪರೀಕ್ಷೆಯ ವಿವರವಾದ ವರದಿಯನ್ನು ಕೋರ್ಟಿಗೆ ಸಲ್ಲಿಸಲಾಗಿತ್ತೇ ವಿನಃ ಈತನಕ ಬಹಿರಂಗಪಡಿಸಿರಲಿಲ್ಲ. ಖುದ್ದು ಅರುಣ್ ಫೆರ್ರೈರಾ ಎಷ್ಟೋ ಬಾರಿ ಮನವಿ ಮಾಡಿಕೊಂಡಾಗಲೂ ಅದರ ಪ್ರತಿಯನ್ನು ಅವರಿಗೆ ಕೊಡಲಿಲ್ಲ. ಅನಿವಾರ್ಯವಾಗಿ ಮಾಹಿತಿ ಹಕ್ಕು ಕಾಯ್ದೆಯನ್ವಯ ಈಗ ಅದನ್ನು ತೆಗೆದುಕೊಳ್ಳಲಾಗಿದೆ. ಪರೀಕ್ಷೆಯ ಸಮಯದಲ್ಲಿ ಕಡ್ಡಾಯವಾಗಿ ವಿಡಿಯೋ ಚಿತ್ರೀಕರಣ ಮಾಡಬೇಕು. ಆದರೆ, ಅದರ ಸಿಡಿಯನ್ನು ಒದಗಿಸಲು ನಿರಾಕರಿಸಲಾಗಿದೆ. ಅದಕ್ಕೆ ಕೊಟ್ಟ ಕಾರಣ ಎಂದರೆ ಸಿಡಿಯು ಹಾಳಾಗಿದೆ ಎಂದು!



ವಾಸ್ತವ ಏನೆಂದರೆ, ಈ ಸಿಡಿಯನ್ನು ಕೋರ್ಟಿನಲ್ಲಿ ಹಾಜರುಪಡಿಸಲಾಗಿದೆ. ಅದರ ಒಂದು ನಕಲನ್ನು ತಮ್ಮ ಬಳಿ ಇಟ್ಟುಕೊಂಡಿಲ್ಲ ಎಂಬುದು ಸತ್ಯವಲ್ಲ. ಕೊಟ್ಟರೆ ಪ್ರಖ್ಯಾತ ಮಾಲಿನಿಯ ಹುಳುಕು ಬಯಲಾಗುತ್ತದೆ ಎಂಬ ಹೆದರಿಕೆಯಿಂದಲೇ ಕುಂಟು ನೆಪವೊಡ್ಡಿ ಅದನ್ನು ನಿರಾಕರಿಸಲಾಗಿದೆ.

ಈಗ ಕೊಟ್ಟಿರುವ ವರದಿಯನ್ನು ನೋಡಿದರೇನೇ ಮಂಪರು ಪರೀಕ್ಷೆ ಎಂಬುದು ಎಷ್ಟೊಂದು ಅಸಂಬದ್ಧವಾಗಿರುತ್ತದೆ ಎಂಬುದು ಅರ್ಥವಾಗುತ್ತದೆ. ಈ ಕೆಳಗಿನ ಒಂದು ಉದಾಹರಣೆಯನ್ನೇ ನೋಡಿ.

ಮಂಪರು ಪರೀಕ್ಷಾ ಸಮಯದಲ್ಲಿ ಡಾ.ಮಾಲಿನಿ ಅವರು ಅರುಣ್ ಫೆರ್ರೈರಾ ಅವರಿಗೆ ಕೇಳಿದ ಹಲವಾರು ಪ್ರಶ್ನೆಗಳಲ್ಲಿ ಮಾವೋವಾದಿ ನಕ್ಸಲ್ ಚಳವಳಿಗೆ ಹಣ ಒದಗಿಸುತ್ತಿರುವವರು ಯಾರು ಎಂಬ ಪ್ರಶ್ನೆಯೂ ಒಂದು. ಅದಕ್ಕೆ ಉತ್ತರವಾಗಿ ಅರುಣ್ ಅವರು "ಮಾವೋವಾದಿ ಚಳವಳಿಗೆ ರಾಜಕೀಯ ಪಕ್ಷಗಳು ಹಣ ಕಾಸು ನೆರವು ಕೊಡುವುದಿಲ್ಲ, ಮುಂಬೈನಲ್ಲಿರುವ ಮಾವೋವಾದಿ ಚಟುವಟಿಕೆಗಳಿಗೆ ಶಿವಸೇನೆ, ಅದರ ಪರಮೋಚ್ಚ ನಾಯಕ ಭಾಳ ಠಾಕ್ರೆ, ಬಿಜೆಪಿಯ ವಿದ್ಯಾರ್ಥಿ ಘಟಕ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ)ಗಳು ಹಣ ಒದಗಿಸುತ್ತಿದ್ದಾರೆ" ಎಂದು ಹೇಳಿದ್ದಾರೆಂದು ವರದಿಯಲ್ಲಿ ತಿಳಿಸಲಾಗಿದೆ.

ಮಂಪರು ಪರೀಕ್ಷೆಯಲ್ಲಿ ಅರೆಪ್ರಜ್ಞಾವಸ್ಥೆಯಲ್ಲಿರುವ ವ್ಯಕ್ತಿಯೊಬ್ಬ ಹೇಳಿದ್ದೆಲ್ಲಾ ಸತ್ಯ ಎಂದು ಬೊಬ್ಬಿಡುವ ಪೊಲೀಸರು ಇದನ್ನು ಒಪ್ಪಿಕೊಳ್ಳುತ್ತಾರೆಯೇ? ಖಂಡಿತ ಇಲ್ಲ. ಏಕೆಂದರೆ, ಆ ವ್ಯಕ್ತಿ ತಮಗೆ ಬೇಕಾದಂತೆ ಹೇಳಿದರೆ ಮಾತ್ರ ಒಪ್ಪಿಕೊಳ್ಳುತ್ತಾರೆ. ಇಲ್ಲದಿದ್ದರೆ ಅದನ್ನು ತಳ್ಳಿಹಾಕುತ್ತಾರೆ. ಅರುಣ್ ಫೆರ್ರೈರಾ ಅವರನ್ನು ನಾಗಪುರದಲ್ಲಿ ಬಂಧಿಸಿದ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ದೇಶಪಾಂಡೆ ಕೂಡಲೇ ಇದಕ್ಕೆ ಪ್ರತಿಕ್ರಿಯಿಸುತ್ತಾ "ಪರೀಕ್ಷೆಯಲ್ಲಿ ಬಾಯ್ಬಿಟ್ಟಿರುವ ವಿಚಾರಗಳನ್ನು ಪರಿಶೀಲಿಸಿ ನೋಡಬೇಕು. ಅರೆಪ್ರಜ್ಞಾವಸ್ಥೆಯಲ್ಲಿರುವ ವ್ಯಕ್ತಿ ಹೇಳಿದ್ದೆಲ್ಲವನ್ನೂ ಸತ್ಯ ಎಂದು ಪರಿಗಣಿಸಲಾಗುವುದಿಲ್ಲ" ಎಂದಿದ್ದಾರೆ.

ಮಾವೋವಾದಿ ಚಳವಳಿಗೆ ಶಿವಸೇನೆ ಮತ್ತು

▶▶▶4

ಭೇದಗಳನ್ನು ಮೀರಿದ ಮಾತೃತ್ವ




ಕಂಡಹಾಗೆ

■ ಗೌರಿ ಲಂಕೇಶ್

ಭಾರತದ 61 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಈ ಬಾರ ಅಮೆರಿಕದ ನ್ಯೂಯಾರ್ಕ್ ನಗರದಿಂದ ಹಿಡಿದು ನಮ್ಮ ದೇಶದ ಅದೆಷ್ಟೋ ನಿರ್ಗತಿಕ ಹಳ್ಳಿಗಳಲ್ಲಿನ ಶಾಲೆಗಳಲ್ಲೂ ಆಚರಿಸಲಾಗುತ್ತಿದೆ.

ಮೂಢನಂಬಿಕೆ, ಭ್ರಷ್ಟಾಚಾರ, ಕೋಮುವಾದ ಹೆಚ್ಚಾಗುತ್ತಿರುವ ಈ ಸಂದರ್ಭದಲ್ಲಿ, ಅದೆಷ್ಟೋ ಬಡ ಭಾರತೀಯ ಮಹಿಳೆಯರು ಹೊಟ್ಟೆಪಾಡಿಗಾಗಿ ತಮ್ಮ ಗರ್ಭವನ್ನೇ ಬಾಡಿಗೆಗೆ ನೀಡುತ್ತಿರುವ ಇಂದಿನ ಕಾಲದಲ್ಲಿ, ತಮ್ಮ ಭೂಮಿ ಮತ್ತು ಬದುಕನ್ನು ಕಳೆದುಕೊಂಡು ಲಕ್ಷಾಂತರ ರೈತರು ಕಂಗಾಲಾಗಿರುವ ದಿನಗಳಲ್ಲಿ ನನಗೆ ನೆನಪಾಗುತ್ತಿರುವುದು "ಯಾರಿಗೆ ಬಂತು 47ರ ಸ್ವಾತಂತ್ರ್ಯ" ಎಂಬ ಪ್ರಗತಿಪರ ಮತ್ತು ಎಡಪಂಥೀಯ ಹೋರಾಟಗಾರರ ಒಂದು ಹಾಡು.



ವಿವೇಕ್ ಆದ ಮುಜಫರ್

ಆದರೆ ನಾನು ಸಿನಿಕಳಲ್ಲ. ಆದ್ದರಿಂದ ನಮ್ಮ ದೇಶಕ್ಕೆ ಇನ್ನೂ ಭವಿಷ್ಯವಿದೆ, ಇಲ್ಲಿ ಜಾತಿ ಧರ್ಮದಂತಹ ಭೇದಗಳನ್ನು ಮೀರುವ ಜನರಿದ್ದಾರೆ, ಮಮತೆ ಮತ್ತು ಮಾನವೀಯತೆಗೆ ಇನ್ನೂ ಮೌಲ್ಯವಿದೆ ಎಂದು ಸಾರುವ ಒಂದು ನಿಜಕತೆಯನ್ನು ಇಲ್ಲಿ ಹೇಳುತ್ತೇನೆ. ಈ ಕತೆಯ ಕೇಂದ್ರಬಿಂದು ವಿವೇಕ್ ಅಲಿಯಾಸ್ ಮುಜಫರ್ ಎಂಬ ಎಂಟು ವರ್ಷದ ಬಾಲಕ. ಮುಖ್ಯ ಪಾತ್ರಧಾರಿಗಳು ಆತನಿಗೆ ಜನ್ಮ ಕೊಟ್ಟ ತಾಯಿ ಜಬುನ್ನೀಸಾ ಮತ್ತು ತಂದೆ ಸಲೀಂ ಎಂಬ ಮುಸ್ಲಿಂ ದಂಪತಿ ಹಾಗೂ ಆತನನ್ನು ಕಳೆದ ಆರು ವರ್ಷಗಳಿಂದ ಅಕ್ಕರೆಯಿಂದ ಸಾಕಿರುವ ವೀಣಾ ಪಟ್ನಿ ಎಂಬ ಹಿಂದೂ ತಾಯಿ.

ಈ ವಿವೇಕ್ ಅಲಿಯಾಸ್ ಮುಜಫರ್‌ನ ಕತೆ ಪ್ರಾರಂಭವಾಗುವುದು ಆರು ವರ್ಷಗಳ ಹಿಂದೆ. ಅದು 2002 ರ ಫೆಬ್ರುವರಿ 28. ಅದರ ಹಿಂದಿನ ದಿನವೇ ಗೋಧ್ರಾದಲ್ಲಿ ಸಬರಮತಿ ರೈಲಿನ ಹಲವು ಬೋಗಿಗಳಿಗೆ ಬೆಂಕಿ ಬಿದ್ದು 59 ಅಮಾಯಕರು ಅಗ್ನಿಗೆ ಆಹುತಿಯಾಗಿದ್ದರು. ಅದಕ್ಕೆ ಪ್ರತ್ಯುತ್ತರ ಎಂಬಂತೆ ಗುಜರಾತಿನ ಅಮಾಯಕ ಮುಸಲ್ಮಾನರ ಮೇಲೆ ಹಿಂದೂತ್ವವಾದಿಗಳು ದಾಳಿ ಪ್ರಾರಂಭಿಸಿದರು.

ಅವತ್ತು ಸಲೀಂ ತನ್ನ ಎರಡು ವರ್ಷದ ಮಗ ಮುಜಫರ್‌ನೊಂದಿಗೆ ಅಹಮದಾಬಾದಿನ ಗುಲ್ಬರ್ಗ್ ಸೊಸೈಟಿಗೆ ಹೋಗಿದ್ದರು. ಆಗ ಅಲ್ಲೇ ಇದ್ದ ಕಾಂಗ್ರೆಸ್‌ನ ಮಾಜಿ ಸಂಸದ ಈಶಾನ್ ಜಾಫ್ರಿಯವರ ಮನೆ ಮೇಲೆ ಹಿಂದೂತ್ವವಾದಿಗಳ ಗುಂಪೊಂದು ದಾಳಿ ಇಟ್ಟು ಜಾಫ್ರಿಯವರನ್ನು ತುಂಡುತುಂಡಾಗಿ ಕತ್ತರಿಸಿ ಕೊಂದಿತಲ್ಲದೆ, ಅವರ ಮನೆಗೆ ಬೆಂಕಿ ಇಟ್ಟು ಅವತ್ತು ಅವರೊಂದಿಗಿದ್ದ ಅದೆಷ್ಟೋ ಜನರನ್ನು ಕೊಂದುಹಾಕಿತು.

ಇಂತಹ ಅಮಾನುಷ ಗುಂಪಿನಿಂದ ತಪ್ಪಿಸಿಕೊಳ್ಳಲು ಸಲೀಂ ಓಡಿದರು. ಅವರು ವಾಪಸ್ಸು ಬಂದಾಗ, ಹಿಂದೂತ್ವವಾದಿಗಳ ಗುಂಪು ಕೊಂದುಹಾಕಿದ್ದ ಅವರ ಅಜ್ಜಿಯ ಹೆಣ ಇತ್ತೇ ಹೊರತು ಅವರ ಮಗ ಮುಜಫರ್‌ನ ಸುಳಿವಿರಲಿಲ್ಲ.

ಅವತ್ತು ಮತ್ತು ಆನಂತರ ಸುಮಾರು ಎರಡು ತಿಂಗಳ ಕಾಲ ನಡೆದ ಮಾರಣಹೋಮದಲ್ಲಿ ಸುಮಾರು ಮೂರು ಸಾವಿರ ಮುಸಲ್ಮಾನರು ಸಾವನ್ನಪ್ಪಿದ್ದಲ್ಲದೆ ಮುಜಫರ್‌ನಂತೆ ನಾನೂರಕ್ಕೂ ಹೆಚ್ಚು ಜನ ಮತ್ತು ಮಕ್ಕಳು ನಾಪತ್ತೆಯಾದರು.

ಅವತ್ತಿನಿಂದ ಮುಜಫರ್‌ಗಾಗಿ ಸಲೀಂ ಮತ್ತು ಜಬುನ್ನೀಸಾ ತುಂಬಾ ಹುಡುಕಾಡಿದರು, ಪೊಲೀಸರಿಗೆ ದೂರು ನೀಡಿದರು, ತಮ್ಮ ಮಗ ಎಲ್ಲೋ ಸುರಕ್ಷಿತವಾಗಿದ್ದಾನೆ, ಆತ ತಮಗೆ ಸಿಕ್ಕೇ ಸಿಗುತ್ತಾನೆ ಎಂಬ ಆಶೆಯಲ್ಲಿ ಬದುಕುತ್ತಿದ್ದರು.

ಅವರಿಗೆ ಗೊತ್ತಿಲ್ಲದಿದ್ದದ್ದು ಏನೆಂದರೆ ಪ್ರವೀಣ್ ಪಟ್ನಿ ಎಂಬ ಪೊಲೀಸ್ ಪೇದೆ ಮುಜಫರ್‌ನನ್ನು ತನ್ನ ಸಂಬಂಧಿಕರಾದ ವಿಕ್ರಮ್ ಮತ್ತು ವೀಣಾ ಪಟ್ನಿ ಎಂಬ ದಂಪತಿಗಳಿಗೆ ನೀಡಿದ್ದ. ಪಟ್ನಿ ದಂಪತಿಗಳು ಮಕ್ಕಳಿಲ್ಲದವರಾಗಿರಲಿಲ್ಲ, ಶ್ರೀಮಂತರೂ ಆಗಿರಲಿಲ್ಲ, ಅವರಿಬ್ಬರಿಗೆ ಬೆಳೆದು ನಿಂತಿದ್ದ ನಾಲ್ಕು ಮಕ್ಕಳಿದ್ದರು. ವಿಕ್ರಮ್ ಕೂಲಿ ಕೆಲಸ ಮಾಡುತ್ತಿದ್ದರೆ, ವೀಣಾ ಪಿಸು ಮಾರಿ ಹಣ ಸಂಪಾದಿಸುತ್ತಿದ್ದರು.

ತಾನು ಯಾರು, ಎಲ್ಲಿಂದ ಬಂದೆ ಎಂಬುದು ಗೊತ್ತಿರದ ಎರಡು ವರ್ಷದ ಬಾಲಕ ತಮ್ಮ ಸುಪರ್ದಿಗೆ ಬಂದನಂತರ ಆತನಿಗೆ ವಿವೇಕ್ ಎಂದು ಮರುನಾಮಕರಣ ಮಾಡಿದ ಪಟ್ನಿ ದಂಪತಿಗಳು ಅವನನ್ನು ಪ್ರೀತಿಯಿಂದಲೇ ಸಲಹಲಾರಂಭಿಸಿದರು. ಆತನಿಗೆ ಕೈತುತ್ತು ನೀಡುತ್ತಾ, ಕೈಹಿಡಿದು ನಡೆಸುತ್ತಾ, ಜೋಗುಳ ಹಾಡುತ್ತಾ, ಆತ ತನಗೇ ಹುಟ್ಟಿದ ಮಗು ಎಂಬಷ್ಟು ಅಕ್ಕರೆಯಿಂದ ವೀಣಾ ಬೆಳೆಸಿದರು.

ಇತ್ತ ಟೀಸ್ತಾ ಸೆಟಲ್‌ವಾದ್‌ರವರ ನೆರವಿನೊಂದಿಗೆ ತಮ್ಮ ಮಗನಿಗಾಗಿ ಹುಡುಕಾಟವನ್ನು ಸಲೀಂ ತಮ್ಮ ಜಬುನ್ನೀಸಾ ಮುಂದುವರೆಸಿದ್ದರು. ಕೊನೆಗೂ ಮುಜಫರ್ ಎಲ್ಲಿದ್ದಾನೆಂದು ಪತ್ತೆಹಚ್ಚಿದ ಅವರು ಆತನನ್ನು ಹಿಂದಿರುಗಿಸುವಂತೆ ಕೇಳಿಕೊಂಡರು. ವಿವೇಕ್ ಅವರ ಮಗ ಎಂಬುದಕ್ಕೆ ಸಾಕ್ಷಿ ಏನೆಂದು ವೀಣಾ ಪ್ರಶ್ನಿಸಿದಾಗ ಸಲೀಂ ಮತ್ತು ವಿವೇಕ್ ಅಲಿಯಾಸ್ ಮುಜಫರ್‌ನ ಡಿಎನ್‌ಎ ಪರೀಕ್ಷಿಸಲಾಯಿತು. ಅದರಿಂದ ವಿವೇಕ್ ನಿಜವಾಗಲೂ ಸಲೀಂ ಮತ್ತು ಜಬುನ್ನೀಸಾರ ಮಗು ಎಂದು ಸಾಬೀತಾಯಿತು.

ಆದರೆ ಆರು ವರ್ಷಗಳ ಕಾಲ ಆತನನ್ನು ತನ್ನ ಮಗನೆಂದೇ ಬೆಳೆಸಿದ್ದ ವೀಣಾ ಅವನನ್ನು ಹೆತ್ತವರಿಗೆ ಹಿಂದಿರುಗಿಸಲು ಒಪ್ಪಲಿಲ್ಲ. ಆಗ ಸಲೀಂ ಮತ್ತು ಜಬುನ್ನೀಸಾ ನ್ಯಾಯಾಲಯದ ಮೆಟ್ಟಿಲೇರಿದರು. ಅವರ ದುರಂತಕ್ಕೆ ವಿವೇಕನಿಗೆ ತನಗೆ ಜನ್ಮ ನೀಡಿರುವವರ ನೆನಪೇ ಇರಲಿಲ್ಲ ಮಾತ್ರವಲ್ಲ, ನ್ಯಾಯಾಧೀಶರ ಮುಂದೆ ತಾನು ವೀಣಾ ಅಮ್ಮನೊಂದಿಗೇ ಇರುತ್ತೇನೆ ಎಂದ.



ದತ್ತು ತಾಯಿ ವೀಣಾರೊಂದಿಗೆ...

ಕಾನೂನಿನ ಪ್ರಕಾರ ಆತ ತನ್ನನ್ನು ಹೆತ್ತವರಿಗೆ ಸೇರಬೇಕಿದ್ದರೂ ಆ ಬಾಲಕನ ಮನಸ್ಸನ್ನು ನೋಯಿಸಬಾರದು ಎಂದು ಸದ್ಯಕ್ಕೆ ಅವನನ್ನು ವೀಣಾರೊಂದಿಗೆ ಬಿಡಲಾಗಿದೆ.

ಸಲೀಂ ಮತ್ತು ಜಬುನ್ನೀಸಾರಿಗೆ ತಮ್ಮ ಮಗನ ಮೇಲೆ ವೀಣಾರವರಿಗಿರುವ ಪ್ರೀತಿ ಅರ್ಥವಾಗುತ್ತದೆ. ಅಂದಮಾತ್ರಕ್ಕೆ ಅವರು ತಾವು ಹೆತ್ತ ಕುಡಿಯನ್ನೇ ಮರೆತು ಸುಮ್ಮನಿರಲಾಗುವುದಿಲ್ಲ. ಈಗ ಹೈಕೋರ್ಟ್ ಮೊರೆಹೋಗಲು ನಿರ್ಧರಿಸಿರುವ ಸಲೀಂ "ವೀಣಾ ನನ್ನ ಮಗನ ದೊಡ್ಡಮ್ಮನಾಗಿರಲಿ, ನನ್ನ ಹೆಂಡತಿಯೇ ಆತನಿಗೆ ಚಿಕ್ಕಮ್ಮನಾಗಿರಲಿ. ಅವರನ್ನು ನಾನು ನನ್ನ ಅತ್ತಿಗೆಯಂತೆ ನೋಡಿಕೊಳ್ಳುತ್ತೇನೆ. ಆದರೆ ನಮಗೆ ನಮ್ಮ ಮಗು ಬೇಕು" ಎನ್ನುತ್ತಾರೆ.



ದತ್ತು ತಂದೆ ವಿ.ವಿಕ್ರಮ್‌ರ ಫೋಟೋದೊಂದಿಗೆ

ಬರ್ಟೋಲ್ಡ್ ಬ್ರೆಕ್ಟ್ ರವರ ಖ್ಯಾತ 'ಕಕೇಶಿಯನ್ ಚಾಕ್ ಸರ್ಕಲ್' ಎಂಬ ನಾಟಕದಲ್ಲಿ ಹೆತ್ತ ತಾಯಿಯೇ ತನ್ನ ಮಗನನ್ನು ಎಳೆದಾಡಲು ಸಿದ್ಧವಾಗಿರುತ್ತಾಳೆ. ಆದರೆ ಆತನನ್ನು ಸಾಕಿ ಸಲುಹಿದ ದತ್ತು ತಾಯಿ ಅವನಿಗೆ ನೋವಾಗಕೂಡದೆಂದು ಅವನನ್ನು ತನ್ನತ್ತ ಎಳೆಯಲು ನಿರಾಕರಿಸುತ್ತಾಳೆ.

ಆದರೆ ಬೈಬಲ್‌ನಲ್ಲಿ ಬರುವ 'ಜಡ್ಜ್‌ಮೆಂಟ್ ಆಫ್ ಸೋಲಮನ್' ಪ್ರಸಂಗದಲ್ಲಿ ನ್ಯಾಯಾಧೀಶ ಸೋಲಮನ್ ಮಗುವನ್ನು ಕತ್ತರಿಸಿ ಇಬ್ಬರು ತಾಯಂದಿರಿಗೆ ಹಂಚಲು ತಯಾರಾದಾಗ, ಆತನನ್ನು ಹೆತ್ತ ತಾಯಿ "ನನ್ನ ಮಗುವನ್ನು ಕೊಲ್ಲಬೇಡಿ. ಅವಳಿಗೆ ಕೊಡಿ" ಎಂದು ಕಣ್ಣೀರಿಡುತ್ತಾಳೆ.



ಹೆತ್ತ ತಾಯಿ ಜಬುನ್ನೀಸಾ ಮತ್ತು ತಂದೆ ಸಲೀಂ

ಅಂದರೆ ಹೆತ್ತ ತಾಯಿಯ ಪ್ರೀತಿ ದೊಡ್ಡದೋ, ಸಾಕಿ ಸಲುಹಿದ ತಾಯಿಯ ಮಮತೆ ಹೆಚ್ಚಿನದೋ ಎಂದು ತೀರ್ಮಾನಿಸುವುದು ಸುಲಭವಲ್ಲ. ವಿವೇಕ್ ಅಲಿಯಾಸ್ ಮುಜಫರ್ ಪ್ರಕರಣ ಮುಖ್ಯವಾಗಿರುವುದು ಒಂದು ಕಾರಣಕ್ಕೆ. ಇವತ್ತು ಜಾತಿ, ಧರ್ಮ, ಅಂತಸ್ತು ಎಂದೆಲ್ಲಾ ಬಹಳಷ್ಟು ಜನ ಅಂಧರಾಗಿರುವಾಗ ಈ ಪುಟ್ಟ ಬಾಲಕ ಮತ್ತು ಆತನ ಇಬ್ಬರು ತಾಯಂದಿರು ಅವುಗಳನ್ನೆಲ್ಲ ಮೀರಿದ ಮಾತೃತ್ವ, ಮಮತೆ ಮತ್ತು ಮಾನವೀಯತೆಯ ಪ್ರತಿಬಿಂಬಗಳಾಗಿದ್ದಾರೆ.

ಈಗಾಗಲೇ ಧರ್ಮದ ಹೆಸರಲ್ಲಿ ಸಾಕಷ್ಟು ದ್ವೇಷ ಮತ್ತು ರಕ್ತಪಾತವನ್ನು ಕಂಡಿರುವ ಗುಜರಾತ್ ಈ ಪ್ರಕರಣದಲ್ಲಾದರೂ ತನ್ನ ಅಂತರಾಳದಲ್ಲಿರುವ ಮನುಷ್ಯತ್ವವನ್ನು ಕಂಡುಕೊಳ್ಳುವಂತಾಗಲಿ. ಆ ಮೂಲಕ ಈ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಧರ್ಮಾಂಧತೆಯಿಂದ ಸ್ವಾತಂತ್ರ್ಯ ಪಡೆಯುವಂತಾಗಲಿ....

ಹಾಗಾದರೆ ಎಷ್ಟು ಚೆನ್ನ ಅಲ್ಲವೆ...

* * * * * *

ಭಾರತದ 'ಭವ್ಯ' ಮತ್ತು 'ಕೇಸರಿ' ಇತಿಹಾಸದ ಬಗ್ಗೆ ಮತ್ತು ಐಟಿ ಕ್ಷೇತ್ರದಲ್ಲಿ ಪ್ರಸ್ತುತ ಭಾರತೀಯರ 'ಸಾಧನೆ'ಗಳ ಬಗ್ಗೆ ಕೆಲ ತಲೆಕೆಟ್ಟ 'ದೇಶಪ್ರೇಮಿ'ಗಳು ಇಲ್ಲಸಲ್ಲದ 'ನಿಜ ಸಂಗತಿ'ಗಳನ್ನು ಸೃಷ್ಟಿಸಿ ಇಂಟರ್‌ನೆಟ್ ಮೂಲಕ ಅವುಗಳನ್ನು ಎಲ್ಲೆಡೆ ಹರಡುತ್ತಾರಲ್ಲದೆ, ಆ ಸುಳ್ಳುಗಳನ್ನೇ ಸಾವಿರಾರು ಬಾರಿ ಹೇಳುತ್ತಾ ಅದೇ ನಿಜ ಎಂಬಂತೆ ಜನರನ್ನು ನಂಬಿಸುತ್ತಾರೆ.

ಇದರ ಬಗ್ಗೆ ಈ ಬಾರಿಯ ಔಟ್‌ಲುಕ್ ಪತ್ರಿಕೆಯಲ್ಲಿ ಬರೆದಿರುವ ದೆಬರ್ಷಿ ದಾಸ್‌ಗುಪ್ತಾ "ಇದು ಹೇಗೆ ಅಂದರೆ ಸತ್ಯ ಎದ್ದು ನಿಂತು ಸಿದ್ಧಗೊಳ್ಳುವ ಮುನ್ನವೇ ಸುಳ್ಳು ಹಲವಾರು ದೇಶಗಳನ್ನು ದಾಟಿ ಸಾಗಿರುತ್ತದೆ" ಎಂದು ಬಣ್ಣಿಸಿದ್ದಾರೆ.

ಅಂತಹ ಸುಳ್ಳುಗಳಲ್ಲಿ ಹಲವು ಮಜಾ ಕೊಡುವಂತಿರುತ್ತವೆ. ಉದಾಹರಣೆಗೆ ಮೈಕ್ರೋಸಾಫ್ಟ್ ಕಂಪನಿಯ ವಿಂಡೋಸ್ ಅನ್ನೇ ಮೀರಿಸುವಂತಹ ಪ್ರೋಗ್ರಾಮ್ ಒಂದನ್ನು ಇನ್ನೂ ಪಿಯುಸಿ ಓದುತ್ತಿರುವ ರಾಮಲಾಲ್ ಭಗತ್ ಎಂಬ ಬಾಲಕ ರೂಪಿಸಿದ್ದಾನೆ ಎಂಬುದು. ಒಂದು 'ಸೃಷ್ಟಿ'.

ಆದರೆ ವಾಸ್ತವವಾಗಿ ಈ ರಾಮಲಾಲ್ ಯಾರು ಎಂಬುದು ಮಾತ್ರ ಇವತ್ತಿಗೂ ನಿಗೂಢವಾಗಿದೆ.

ಇದಕ್ಕಿಂತ ಮಜಾ ಕೊಡುವ ಇನ್ನೊಂದು ಸುಳ್ಳು "ಸುದರ್ಶನ್ ರೆಡ್ಡಿ ಎಂಬ ಭಾರತೀಯ ಬಾಲಕ ಅದೆಷ್ಟು ಬುದ್ಧಿವಂತ ಎಂದರೆ ಆತನ IQ (ಬುದ್ಧಿಪ್ರಮಾಣ) ಅನ್ನು ಅಳೆಯಲು 'IQ ಮೀಟರ್' ಎಂಬ ಯಂತ್ರದಿಂದ ಅಮೆರಿಕದ ಏಜೆನ್ಸಿಯಲ್ಲಿ ಪ್ರಯತ್ನಿಸಿದಾಗ ಆ ಯಂತ್ರವೇ ಮುರಿದುಹೋಯಿತು" ಎಂಬುದು.

ಇದಿಷ್ಟೇ ಅಲ್ಲದೆ ಸುದರ್ಶನ್ ಐನ್‌ಸ್ಟೀನ್‌ರ 'ಥಿಯರಿ ಆಫ್ ರಿಲಟಿವಿಟಿ'ಯನ್ನು ಸುಳ್ಳು ಪಡಿಸಿದ್ದಾನೆಂದೂ, ಆತನಿಗೆ ನೊಬೆಲ್ ಪ್ರಶಸ್ತಿ ನೀಡಬೇಕೆಂದು 2001 ರಲ್ಲಿ ಕಾರ್ಲ್ ಉಪ್ಪಾಸಲ ಎಂಬುವವರು ಶಿಫಾರಸ್ಸು ಮಾಡಿದ್ದಾರೆಂದೂ ಸುದ್ದಿ ಹಬ್ಬಿಸಲಾಗಿದೆ. ಆದರೆ ನಿಜ ಏನೆಂದರೆ, ಮೊದಲನೆಯದಾಗಿ IQ ಮೀಟರ್ ಎಂಬ ಯಂತ್ರವೇ ಇಲ್ಲ, ಎರಡನೆಯದಾಗಿ ಕಾರ್ಲ್ ಉಪ್ಪಾಸಲ ಎಂಬುವವರೂ ಇಲ್ಲ, ಮೂರನೆಯದಾಗಿ ಈ ಸುದರ್ಶನ್ ಯಾರು, ಎಲ್ಲಿದ್ದಾನೆ ಎಂಬುದೂ ಯಾರಿಗೂ ಗೊತ್ತಿಲ್ಲ. ಆದರೂ ಇಂತಹ ಈ-ಮೇಲ್‌ಗಳನ್ನು ಓದಿ, "ನೋಡಿ ಭಾರತೀಯರು ಎಂತಹ ಜೀನಿಯಸ್‌ಗಳು" ಎಂದು ಸಂಭ್ರಮಿಸುವವರಿಗೂ ಕೊರತೆ ಇಲ್ಲ!

ಇಂತಹ ಸುಳ್ಳುಗಳ ಸರಪಳಿ ಇಲ್ಲಿಗೇ ನಿಲ್ಲುವುದಿಲ್ಲ. 'ಪ್ರೌಡ್ ಟು ಬಿ ಇಂಡಿಯನ್' ಎಂಬ ಶೀರ್ಷಿಕೆಯಡಿ ಬಿತ್ತರಗೊಂಡ ಇನ್ನೊಂದು ಈ-ಮೇಲ್ ಹೀಗಿದೆ: "ಮೈಸೂರು ಮಹಾರಾಜರ ವಂಶಸ್ಥರಾದ ಜೆ. ವೈದ್ಯರಾಜ್ ಎಂಬುವವರ ಬಳಿ ಮೂರು ವಜ್ರಗಳಿವೆ. ಇವತ್ತು ಆ ವಜ್ರಗಳು ಎಷ್ಟು ಬೆಲೆ ಬಾಳುತ್ತಾವೆಂದರೆ ಅವುಗಳಿಂದ ಕನಿಷ್ಠ ಐದು ಅಭಿವೃದ್ಧಿಶೀಲ ರಾಷ್ಟ್ರಗಳನ್ನೇ ಭಾರತ ಖರೀದಿಸಬಹುದು. ಅಷ್ಟೇ ಅಲ್ಲ, ವಿಶ್ವಬ್ಯಾಂಕ್‌ನಲ್ಲೂ ಇವುಗಳನ್ನು ಖರೀದಿಸುವಷ್ಟು ಹಣವಿಲ್ಲವಾದ್ದರಿಂದ ಅವುಗಳನ್ನು ತಿಂಗಳ ಕಂತಿನಲ್ಲಿ ಖರೀದಿಸಲು ಮುಂದಾಗಿದೆ. ಆದರೆ ವಿಶ್ವಬ್ಯಾಂಕಿನ ಈ ಪ್ರಸ್ತಾಪವನ್ನು ಪ್ರಧಾನಮಂತ್ರಿಗಳು ತಿರಸ್ಕರಿಸಿದ್ದಾರೆ."

ಭಾರತದ ಸಂಪತ್ತು ಯಾರೂ ಕಂಡರಿಯದ ಈ ವಜ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. ಇನ್ನೊಂದು ಈ-ಮೇಲ್ ಪ್ರಕಾರ "ಥಾರ್ ಮರಳುಗಾಡಿನಲ್ಲಿ ಭಾರತ ಸರ್ಕಾರ ಅದೆಷ್ಟು ತೈಲ ಸಂಪತ್ತನ್ನು ಕಂಡುಹಿಡಿದಿದೆ ಎಂದರೆ ಅದು ಕುವೈತ್‌ನಲ್ಲಿರುವುದನ್ನೂ ಮೀರಿಸುತ್ತದೆ".

ಇದೆಲ್ಲ ಬರೀ ಬೊಗಳೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಇಂತಹ ಸುಳ್ಳುಪಳ್ಳು ವಾದಗಳನ್ನು ಸೃಷ್ಟಿಸಿರುವವರು ಭಾರತೀಯರೇ, ಅದರಲ್ಲೂ ಈಗ ಅಮೆರಿಕಾದಂತಹ ವಿದೇಶಗಳಲ್ಲಿ ವಾಸಿಸುತ್ತಿರುವ ಅನಿವಾಸಿ ಭಾರತೀಯರೇ ಹೆಚ್ಚು. ಅವರೆಲ್ಲಾ ವಿದ್ಯೆ ಪಡೆದಿದ್ದರೂ ಬುದ್ಧಿಯನ್ನು ಮಾತ್ರ ಕಿಂಚಿತ್ತೂ ಬೆಳೆಸಿಕೊಂಡಿಲ್ಲ ಎಂಬುದಕ್ಕೆ ಈ ಕಾಗಕ್ಕಗುಬ್ಬಕ್ಕನ ಕತೆಗಳೇ ಸಾಕ್ಷಿ.

ಅವರೆಲ್ಲ ಹೀಗೇಕೆ ಮಾಡುತ್ತಾರೆ ಎಂಬ ಪ್ರಶ್ನೆಗೆ ಖ್ಯಾತ ಸಾಮಾಜಿಕ ಚಿಂತಕ ಆಶೀಶ್ ನಂದಿಯವರು ಉತ್ತರ ನೀಡುತ್ತಾರೆ: "ತಾವು ತಮ್ಮ ದೇಶಕ್ಕೆ ಸೇವೆ ಸಲ್ಲಿಸುತ್ತಿಲ್ಲ ಎಂಬ ಅಪರಾಧಿ ಪ್ರಜ್ಞೆ; ತಾವು ಭಾರತವನ್ನು ಬಿಟ್ಟು ದೂರ ಹೋಗಿದ್ದರೂ ತಾವು ಭಾರತದಲ್ಲೇ ಇರುವ ಭಾರತೀಯರಿಗಿಂತಲೂ ಹೆಚ್ಚು ದೇಶಭಕ್ತರು ಎಂಬ ಭ್ರಮೆ; ಭಾರತದಂತಹ ಮಹಾನ್ ರಾಷ್ಟ್ರವನ್ನು ಹಿಂದಕ್ಕೆ ಎಳೆಯುತ್ತಿರುವವರು ತಮ್ಮಷ್ಟು ಸಮರ್ಥರಲ್ಲದ ಭಾರತೀಯರು ಎಂಬ ಭಾವನೆ... ಇಂತಹ ಕಾರಣಗಳಿಂದ ಅವರು ಭಾರತದ ಬಗ್ಗೆ ಇಲ್ಲಸಲ್ಲದ್ದನ್ನು ಸೃಷ್ಟಿಸಿ ಹೆಮ್ಮೆಪಡುತ್ತಾರೆ. ಅವರೆಲ್ಲರಿಗೆ ನಿಜವಾಗಲೂ ಒಂದು ತರಹದ ಹುಚ್ಚು ಹಿಡಿದಿರುತ್ತದೆ. ಅದನ್ನು ಯಾವುದೇ ಕ್ಲಿನಿಕ್‌ನಲ್ಲೂ ಪತ್ತೆಹಚ್ಚಬಹುದು!"

* * * * * *

61ನೇ ಸ್ವಾತಂತ್ರ್ಯೋತ್ಸವದ ಪ್ರಯುಕ್ತ 'ದಿ ವೀಕ್' ಪತ್ರಿಕೆ ಯುವ ಪೀಳಿಗೆಯೊಂದಿಗೆ ಒಂದು ಸಮೀಕ್ಷೆ ನಡೆಸಿದೆ. ಬರೀ ಕ್ರಿಕೆಟ್ ಮತ್ತು ಕಂಪ್ಯೂಟರ್ ಲೋಕದಲ್ಲಿ ಮುಳುಗಿರುವ ಈ ಯುವ ಜನತೆಗೆ ಸ್ವಾತಂತ್ರ್ಯ ಸಂಗ್ರಾಮ ಕೇವಲ ಇತಿಹಾಸ, ಸಮಾಜವಾದ ಎಂಬುದು ಬೋರ್ ಹೊಡೆಸುವ ಲೆಕ್ಚರ್, ಸಮಾನತೆ ಎಂದರೆ ಎಲ್ಲರಿಗೂ ಪಬ್‌ಗಳಿಗೆ ಹೋಗುವ ಅವಕಾಶ ಮತ್ತು ರಾಷ್ಟ್ರಪ್ರೇಮ ಎಂದರೆ ಹಿಂದೂತ್ವ ಎಂಬಂತಾಗಿದೆ.


ಇಂತಹ ಯುವ ಜನತೆಗೆ ಕೇಳಲಾದ ಹಲವು ಪ್ರಶ್ನೆಗಳಲ್ಲಿ ಒಂದು: ಭಾರತದ ರಾಷ್ಟ್ರಗೀತೆ ಬರೆದವರು ಯಾರು? ಈ ಸರಳ ಪ್ರಶ್ನೆಗೆ ಶೇ. 71 ಜನ ಮಾತ್ರ ರವೀಂದ್ರನಾಥ್ ಟ್ಯಾಗೂರ್ ಎಂದು ಸರಿಯಾಗಿ ಉತ್ತರಿಸಿದ್ದರೆ, ಶೇ. 18 ಜನ ಬಂಕಿಮ್‌ಚಂದ್ರ ಚಟರ್ಜಿ ಎಂದು, ಶೇ. 7 ಜನ ಮೊಹಮ್ಮದ್ ಇಕ್ಬಾಲ್ ಎಂದು, ಶೇ. 4 ಜನ ಗೊತ್ತಿಲ್ಲ ಎಂದು ಉತ್ತರಿಸಿದ್ದಾರೆ.

ಇದಕ್ಕಿಂತ ಅಘಾತಕಾರಿ ವಿಷಯ ಇನ್ನೊಂದಿದೆ. ಅದೇನೆಂದರೆ ಅದೇ ಸಮೀಕ್ಷೆಯಲ್ಲಿ ಕೇಳಲಾದ ಮತ್ತೊಂದು ಪ್ರಶ್ನೆ "ಭಾರತದ ರಾಷ್ಟ್ರಗೀತೆ ಯಾವುದು" ಎಂಬುದಕ್ಕೆ ಯುವಜನ ನೀಡಿರುವ ಉತ್ತರ. ಈ ಪ್ರಶ್ನೆಗೆ ಶೇ. 6 ಜನ ಗೊತ್ತಿಲ್ಲ ಎಂದರೆ, ಶೇ. 2 ಜನ 'ಮಿಲೆ ಸುರ್ ಮೇರಾ ತುಮ್ಹಾರ' ಎಂದು, ಶೇ. 28 ಜನ ಮಾತ್ರ 'ಸಾರೆ ಜಹಾನ್ ಸೆ ಅಚ್ಛಾ' ಎಂದು (ಸರಿಯಾಗಿ) ಉತ್ತರಿಸಿದ್ದರೆ, ಬರೋಬ್ಬರಿ ಶೇ. 64 ಜನ 'ವಂದೇ ಮಾತರಂ' ಎಂದು ಉತ್ತರಿಸಿದ್ದಾರೆ.

ಮುಂದಿನ ತಲೆಮಾರು ಇಂತಹದ್ದಾದರೆ ಭಾರತ ಪ್ರಕಾಶಿಸುವುದೆಂದು? ■

ಪುರಿ ಶಂಕರಾಚಾರ್ಯ ದೇವತೀರ್ಥ ಆರೋಪ

ಸೂರತ್ ಬಾಂಬ್‌ನಲ್ಲಿ ಮೋದಿ ಕೈವಾಡ



ಪುರಿಯ ಶಂಕರಾಚಾರ್ಯ ಪೀಠದ ಅಧೋಕ್ಷಾನಂದ ದೇವತೀರ್ಥ ಸ್ವಾಮಿ ಸಂಘ ಪರಿವಾರದವರ ಮೇಲೊಂದು ಬಾಂಬ್ ಎಸೆದಿದ್ದಾರೆ.

ಅದೇನೆಂದರೆ ಸೂರತ್‌ನಲ್ಲಿ ಪತ್ತೆಯಾಗುತ್ತಿರುವ ಬಾಂಬ್‌ಗಳು ಅಲ್ಲಿನ ಆಡಳಿತಾರೂಢ ನರೇಂದ್ರ ಮೋದಿ ಸರ್ಕಾರದ ಕೈವಾಡದಿಂದ ಕಾಣಿಸಿಕೊಳ್ಳುತ್ತಿವೆಯಂತೆ!

ಅಹಮದಾಬಾದ್ ಸರಣಿ ಸ್ಫೋಟಗಳ ಹಿಂದೆ ಉಗ್ರರ ಅಥವಾ ಐಎಸ್ಐ ಸಂಚು ಇದ್ದಿರಲೂಬಹುದು. ಆದರೆ ಸೂರತ್‌ನಲ್ಲಿ ಈಗ ಪ್ರತಿದಿನ ಸಿಗುತ್ತಿರುವ ಬ್ಲಾಂಬ್‌ಗಳು ನರೇಂದ್ರ ಮೋದಿಯ ಪ್ಲಾನ್ ಆಗಿರುವ ಸಾಧ್ಯತೆಯಿದೆ ಅಂತ ದೇವತೀರ್ಥ ದಿಟ್ಟ ಹೇಳಿಕೆ ನೀಡಿದ್ದಾರೆ. ಮುಂದೆ ಬರಲಿರುವ ಲೋಕಸಭಾ ಚುನಾವಣಾ ತಯಾರಿ ಇದಾಗಿದ್ದು ಬಹುಸಂಖ್ಯಾತ ಹಿಂದೂಗಳ ಮನಸ್ಸಿನಲ್ಲಿ ಭೀತಿ ಹುಟ್ಟಿಸುತ್ತಾ 'ಹಿಂದೂ ಓಟ್ ಬ್ಯಾಂಕ್' ಸೃಷ್ಟಿಸಿಕೊಳ್ಳುವ ಪಿತೂರಿಯ ಭಾಗ ಇದು ಎಂದು ಅನುಮಾನಿಸಿದ್ದಾರೆ ದೇವತೀರ್ಥ ಸ್ವಾಮಿ.

ಇದೇ ತರ್ಕ ವಿಸ್ತರಿಸುವುದಾದರೆ ಬೆಂಗಳೂರು ಸರಣಿ ಸ್ಫೋಟಗಳ ಬಗ್ಗೆಯೂ ಕೆಲ ಅನುಮಾನಗಳು ಬರಬಹುದು.

ಇನ್ನೇನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆಗಳು ನಡೆಯಬೇಕಿದೆ. ಇಲ್ಲೂ ಸಹ ಬಾಂಬ್ ಭೀತಿ ಸೃಷ್ಟಿಸಿ 'ಹಿಂದೂ ಓಟ್ ಬ್ಯಾಂಕ್' ಗಟ್ಟಿ ಮಾಡಿಕೊಳ್ಳುವ ಪಿತೂರಿಯೂ ನಡೆದಿರಬಹುದು. ರಾಜ್ಯ ಪೊಲೀಸರು ಈ ಅಂಶವನ್ನು ನಿರ್ಲಕ್ಷಿಸದೆ ಸೂಕ್ತ ತನಿಖೆ ಮಾಡಬೇಕಿದೆ. ಏಕೆಂದರೆ ಭಜರಂಗದಳ ಮುಂತಾದ ಸಮಾಜದ್ರೋಹಿ ಗುಂಪುಗಳು ಈ ಹಿಂದೆ ನಾಂದೇಡ್, ಶಿವಕಾಶಿ ಹಾಗೂ ಮಹಾರಾಷ್ಟ್ರಗಳಲ್ಲಿ ಬಾಂಬ್ ಸ್ಫೋಟಿಸಿ ಪೊಲೀಸರಿಗೆ ಸಿಕ್ಕಿಬಿದ್ದಿರುವ ಘಟನೆಗಳು ನಡೆದಿವೆ. ಅಷ್ಟೇ ಅಲ್ಲದೆ ಶಿವಸೇನಾ ನಾಯಕ ಬಾಳ್‌ಠಾಕ್ರೆಯೆಂಬ ಅವಿವೇಕಿ 'ಹಿಂದೂ ಬಾಂಬ್, ಹಿಂದೂ ಆತ್ಮಾಹುತಿ ದಳ' ರಚಿಸುವ ಬಗ್ಗೆ ಇತ್ತೀಚೆಗೆ ಪದೇಪದೇ ಧಮಕಿ ಕೊಡುತ್ತಿದ್ದಾನೆ. ಒಂದು ವೇಳೆ ಹಿಂದೂ ಆತ್ಮಾಹುತಿ ದಳ ಅಸ್ತಿತ್ವಕ್ಕೆ ಬಂದರೂ ಅದರಲ್ಲಿ ಶೂದ್ರ ಯುವಕರನ್ನು ಸಿಕ್ಕಿಸಿ ಬಲಿಕೊಡುತ್ತಾರೆ ಎನ್ನುವುದನ್ನಂತೂ ಈಗಲೇ ಊಹಿಸಬಹುದು. ಸದ್ಯಕ್ಕೆ ಇದಕ್ಕಿಂತ ಮುಖ್ಯ ಸಂಗತಿ ಪುರಿಯ ಅಧೋಕ್ಷಾನಂದ ದೇವತೀರ್ಥರು ನರೇಂದ್ರ ಮೋದಿ ಕೈವಾಡದ ಬಗ್ಗೆ ಆಸ್ಸಾಮಿನಲ್ಲಿ ವ್ಯಕ್ತಪಡಿಸಿರುವ ಅನುಮಾನದ ವಿಚಾರ.


ರಾಜ್ಯ ಪೊಲೀಸರೂ ಇದನ್ನು ಗಮನಿಸಲಿ. ■

ಖೈದಿಗಳ ಅನ್ನಕ್ಕೂ ಕೈಯಿಟ್ಟ ಇಸ್ಕಾನ್!



ಬೆಂಗಳೂರಿನ ಇಸ್ಕಾನ್ ಕೃಷ್ಣಮಂದಿರಕ್ಕೆ ತನ್ನ ವಂಚಕ ಬಿಸಿನೆಸ್ ಮಾಡೋದಕ್ಕೆ ಬೇರೆ ಎಲ್ಲೂ ಜಾಗ ಸಿಕ್ಕಿಲ್ಲ ಅಂತ ಕಾಣುತ್ತೆ, ಆದಕ್ಕೇ ಅದು ಈಗ ಕಾರಾಗೃಹದಲ್ಲಿ ಬಂಧಿಗಳಾಗಿರುವ ಖೈದಿಗಳ ಅನ್ನದ ತಟ್ಟೆಗೆ ಕೈಯಿಟ್ಟಿದೆ. ಇದರಿಂದ ಬೇಸತ್ತು ಹೋಗಿರುವ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿರುವ ಖೈದಿಗಳು ಈಗ ಇಸ್ಕಾನ್ ವಿರುದ್ಧ ತಿರುಗಿಬಿದ್ದಿದ್ದಾರೆ.

ಬೆಂಗಳೂರಿನ ಕಾರಾಗೃಹದಲ್ಲಿರುವ ಖೈದಿಗಳಿಗೆ ಮಧ್ಯಾಹ್ನ ಮತ್ತು ಸಂಜೆಯ ಊಟವನ್ನು ಒದಗಿಸುವುದಕ್ಕೆ ಇಸ್ಕಾನ್ ಒಂದು ವರ್ಷದ ಹಿಂದೆ ಗುತ್ತಿಗೆ ಪಡೆದಿತ್ತು. ಅಲ್ಲಿಯತನಕ ತಿನ್ನಲಾರದಂತಹ ಊಟ ತಿಂದು ಸೊರಗಿದ್ದ ಖೈದಿಗಳ ಮೊಗದಲ್ಲಿ ಒಂದಿಷ್ಟು ಸಂತಸ ಮೂಡಿತ್ತು. ಜಗತ್ತಿನ ಶ್ರೇಯಸ್ಸನ್ನು ಬಯಸುವ ಇಸ್ಕಾನ್ ತಮಗೂ ಒಳ್ಳೆಯ ಊಟ ಕೊಡುತ್ತದೆ, ಇತರೆ ಗುತ್ತಿಗೆದಾರರಂತೆ ಇಸ್ಕಾನ್ ತಮಗೆ ಅನ್ಯಾಯ ಮಾಡುವುದಿಲ್ಲ ಎಂದು ಖೈದಿಗಳು ನಂಬಿದ್ದರು. ಗುತ್ತಿಗೆ ಪಡೆದ ಮೊದಲ 8-10 ದಿನ ಇಸ್ಕಾನ್ ಒಳ್ಳೆಯ ಅನ್ನ, ಸಾಂಬಾರು, ಮಜ್ಜಿಗೆ ಒದಗಿಸಿದಾಗ ಖೈದಿಗಳಿಗೆ ತಮ್ಮ ನಿರೀಕ್ಷೆ ಹುಸಿಯಾಗಲಿಲ್ಲ ಎಂಬ ಸಂತೃಪ್ತ ಭಾವನೆ ಮೂಡಿದ್ದೂ ನಿಜ.



ಆದರೆ ಅದೆಲ್ಲ ಅಲ್ಪ ಕಾಲಿಕವಾಗಿತ್ತು. ಖೈದಿಗಳು ಇಸ್ಕಾನ್ ಮೇಲೆ ಇಟ್ಟ ಭರವಸೆ ಹುಸಿಯಾಗಿಯೋಯ್ತು. ಇದುವರೆಗೂ ತಮ್ಮ ಅನ್ನದ ತಟ್ಟೆಗೆ ಕೈಹಾಕಿ ಕೊಬ್ಬಿದ ಎಲ್ಲ ಗುತ್ತಿಗೆದಾರರಿಗೂ ಇಸ್ಕಾನ್‌ಗೂ ಏನೂ ವ್ಯತ್ಯಾಸವಿಲ್ಲ ಎಂಬುದು ಕೇವಲ ಹತ್ತೇ ದಿನದಲ್ಲಿ ಗೊತ್ತಾಗಿ ಹೋಯಿತು. ಇಸ್ಕಾನ್ ಒದಗಿಸುತ್ತಿದ್ದ ಆಹಾರದ ಗುಣಮಟ್ಟ ನಿಧಾನವಾಗಿ ಕುಸಿಯುತ್ತಾ ಈಗ ಅದು ಮನುಷ್ಯರು ತಿನ್ನಲಾರದ ಮಟ್ಟಕ್ಕೆ ಬಂದು ನಿಂತಿದೆ.

ಅನ್ನ ಕೇಳಿದರೆ ಭಗವದ್ಗೀತೆ ಕೊಟ್ಟರು!

ಖೈದಿಗಳಿಗೆ ನ್ಯಾಯಸಮ್ಮತವಾಗಿ ನೀಡಬೇಕಾದ ಆಹಾರವನ್ನು ಇಸ್ಕಾನ್ ಮಂದಿರದ ಸ್ವಾಮಿಗಳು ತಿಂದು ತೇಗುತ್ತಿರುವುದರಿಂದ ರೋಸಿಹೋಗಿರುವ ಖೈದಿಗಳು 'ನಮ್ಮ ಅನ್ನದ ತಟ್ಟೆಗೆ ಕೈಹಾಕುವಂಥ ಹೀನಸ್ಥಿತಿ ನಿಮಗ್ಯಾಕೆ ಬಂದಿದೆ? ನಮಗೆ ಸಲ್ಲಬೇಕಾದ ಊಟವನ್ನು ಕಸಿದು ತಿನ್ನುತ್ತಿದ್ದೀರಲ್ಲಾ, ದಿನ ನಿತ್ಯ ನೀವು ಪೂಜಿಸುವ ಆ ಕೃಷ್ಣ ನಿಮ್ಮನ್ನು ಕ್ಷಮಿಸುತ್ತಾನೆಯೇ?' ಎಂದು ಇಸ್ಕಾನ್ ಆಡಳಿತ ಮಂಡಳಿಯನ್ನು ಪತ್ರದ ಮೂಲಕ ಪದೇ ಪದೇ ಕೇಳಿದರು. ಜೈಲಿಗೆ ಭೇಟಿ ಕೊಟ್ಟ ಪ್ರತಿಯೊಬ್ಬ ಇಸ್ಕಾನ್ ಸ್ವಾಮಿಯೂ ಪಕ್ಕಾ ರಾಜಕಾರಣಿಗಳಂತೆ 'ದೇವಸ್ಥಾನದ ಮೀಟಿಂಗ್‌ನಲ್ಲಿ ಚರ್ಚಿಸುತ್ತೇವೆ, ಸಮಸ್ಯೆಯನ್ನು ಸರಿಪಡಿಸುತ್ತೇವೆ' ಎಂದು ಪೊಳ್ಳು ಆಶ್ವಾಸನೆ ಕೊಟ್ಟರೇ ಹೊರತು ಸಮಸ್ಯೆಯನ್ನು ಈತನಕ ಬಗೆಹರಿಸಿಲ್ಲ. ಕೊನೆಗೆ ಇಸ್ಕಾನ್ ದೇವಾಲಯದಿಂದ ನಾಲ್ಕಾರು ಸ್ವಾಮಿಗಳೂ ಬಂದು ಖೈದಿಗಳೊಂದಿಗೆ ಮೊಸಳೆ ಕಣ್ಣೀರು ಸುರಿಸಿ 'ನಿಮಗೆ ಇಷ್ಟೊಂದು ಸಮಸ್ಯೆಯಿದೆ ಎಂದು ನಮಗೆ ಗೊತ್ತಿರಲಿಲ್ಲ, ಕೂಡಲೇ ಸಮಸ್ಯೆ ಬಗೆಹರಿಸುತ್ತೇವೆ. ಅಲ್ಲಿಯತನಕ ನೀವು ಭಗವದ್ಗೀತೆ ಓದಿ, ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ, ಮನಸ್ಸಿಗೆ ಶಾಂತಿ ಸಿಗುತ್ತೆ' ಎಂದು ಹಲವು ಭಾಷೆಗಳಲ್ಲಿರುವ ಭಗವದ್ಗೀತೆಯನ್ನು ಕೊಟ್ಟು ಉಪದೇಶ ಮಾಡಿಹೋಗಿದ್ದಾರೆ ಎಂದರೆ ಈ ಸ್ವಾಮಿಗಳಿಗೆ ಏನೆನ್ನಬೇಕು. ಇವರೆಲ್ಲಾ ಮನೆಯಲ್ಲಿ ಭಗವದ್ಗೀತೆ ಓದಿಯೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆಯೆ?

ಈಗ ಖೈದಿಗಳ ತಾಳ್ಮೆಯೂ ಮಿತಿ ಮೀರಿದಂತಿದೆ. ಇದೇ ಆಗಸ್ಟ್ 15ರ ಒಳಗೆ ಇಸ್ಕಾನ್‌ನವರು ಖೈದಿಗಳ ಅನ್ನ ತಿನ್ನುವುದನ್ನು ಬಿಟ್ಟು ಅವರಿಗೆ ಸಲ್ಲಬೇಕಾದ ಉತ್ತಮ ಗುಣಮಟ್ಟದ ಆಹಾರವನ್ನು ಒದಗಿಸಲು ಪ್ರಾರಂಭಿಸದಿದ್ದರೆ ಬೆಂಗಳೂರು ಕೇಂದ್ರ ಕಾರಾಗೃಹದ ಖೈದಿಗಳೆಲ್ಲರೂ ಒಕ್ಕೊರಲಿನಿಂದ ಸ್ವಾತಂತ್ರ್ಯ ದಿನಾಚರಣೆಯ ದಿನದಿಂದಲೇ ಗಾಂಧೀಜಿಯ ಫೋಟೋ ಇಟ್ಟುಕೊಂಡು "ಇಸ್ಕಾನ್ ಊಟ ರದ್ದುಗೊಳಿಸಿ" ಎಂಬ ಘೋಷಣೆಯಡಿ ಉಪವಾಸ ಸತ್ಯಾಗ್ರಹ ಕುಳಿತುಕೊಳ್ಳುವ ನಿರ್ಧಾರ ಮಾಡಿದ್ದಾರೆ. ಈ ಎಚ್ಚರಿಕೆಯ ಪತ್ರಕ್ಕೆ ಜೈಲಿನಲ್ಲಿರುವ ಅಷ್ಟೂ ಖೈದಿಗಳು ಸಹಿ ಮಾಡಿ ಇಸ್ಕಾನ್ ಸ್ವಾಮಿಗೆ ಕಳುಹಿಸಿಕೊಟ್ಟಿದ್ದಾರೆ.

ಇಸ್ಕಾನ್ ಸ್ವಾಮಿಗಳೂ ಹೊಟ್ಟೆಗೆ ಅನ್ನವನ್ನೇ ತಿನ್ನೋದಾದರೆ ಅವರಿಗೆ ಖೈದಿಗಳ ಸಮಸ್ಯೆ ಅರ್ಥವಾಗುತ್ತಿತ್ತು. ಬಿಸಿನೆಸ್ ಮಾಡಲು ಹೊರಟವರು ನ್ಯಾಯ-ಅನ್ಯಾಯ ನೋಡುತ್ತಾರೆಯೆ? ಆದಕ್ಕೆ ಈ ಸ್ವಾಮಿಗಳು, ಅಧಿಕಾರಿಗಳು ಹೇಗೆ ಹೊರತಾಗಿರಲು ಸಾಧ್ಯ ಹೇಳಿ?

▶▶▶2 ಮಂಪರು ಪರೀಕ್ಷೆ

ಭಾಳಠಾಕ್ರೆ ಹಣಕಾಸು ಸಹಾಯ ಒದಗಿಸುತ್ತಿರುವ ಬಗ್ಗೆ ಅರುಣ್ ಫೆರ್ರೈರಾ ಅವರು ಮಂಪರು ಪರೀಕ್ಷೆಯಲ್ಲಿ ಹೇಳಿದ್ದಕ್ಕೆ, ಪ್ರತಿಕ್ರಿಯಿಸುತ್ತಾ ಶಿವಸೇನೆಯ ಪರಮೋಚ್ಚ ನಾಯಕ ಭಾಳಠಾಕ್ರೆ "ಅಮಲಿನಲ್ಲಿರುವ ವ್ಯಕ್ತಿ ಏನು ಬೇಕಾದರೂ ಹೇಳಬಹುದು, ಅದನ್ನೆಲ್ಲಾ ಸತ್ಯ ಎಂದು ನಂಬಲು ಸಾಧ್ಯವೆ?" ಎಂದು ಪ್ರಶ್ನಿಸಿದ್ದಾರೆ.


ಹಾಗಾದರೆ, ಅರುಣ್ ಫೆರ್ರೈರಾ ತಾನು ನಕ್ಸಲೀಯ ಚಳವಳಿಯಲ್ಲಿ ಭಾಗಿಯಾಗಿದ್ದೇನೆಂದೂ, ಮುಂಬಯಿಯಲ್ಲಿ ಬಂಧಿತರಾಗಿರುವ ವಿಷ್ಣುವರ್ಧನ್ ಎಂಬ ನಕ್ಸಲೀಯ ನಾಯಕರೊಂದಿಗೆ ನಿಕಟ ಸಂಪರ್ಕವಿತ್ತೆಂದೂ, ವಿದ್ಯಾರ್ಥಿ ಪ್ರಗತಿ ಸಂಘಟನಾ, ನೌ ಜವಾನ್ ಭಾರತ್ ಸಭಾ ಮತ್ತಿತರ ಮಾನವ ಹಕ್ಕು ಸಂಘಟನೆಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದೇನೆಂದೂ ಮಂಪರು ಪರೀಕ್ಷಾ ವೇಳೆಯಲ್ಲಿ ಹೇಳಿದ್ದಾರೆಂದು ವರದಿಯಲ್ಲಿ ನಮೂದಿಸಲಾಗಿದೆ. ಹಾಗಿದ್ದರೆ ಇದೂ ಕೂಡ ಸುಳ್ಳು ಎಂದು ಪ್ರದೀಪ್ ದೇಶಪಾಂಡೆ ಒಪ್ಪಿಕೊಳ್ಳುತ್ತಾರೆಯೆ? ಇದನ್ನೇ ನೆಪವಾಗಿಟ್ಟುಕೊಂಡು ಈ ಮೇಲಿನ ಸಂಘಟನೆಗಳನ್ನೆಲ್ಲಾ ವಿಚಾರಣೆಗೊಳಪಡಿಸುತ್ತಿರುವ ಪೊಲೀಸರು ಶಿವಸೇನೆ, ಭಾಳಠಾಕ್ರೆ, ಎಬಿವಿಪಿಗಳನ್ನೂ ವಿಚಾರಣೆಗೊಳಪಡಿಸುತ್ತಾರೆಯೆ? ಇದೆಲ್ಲಾ ಅಮಲಿನಲ್ಲಿರುವ ವ್ಯಕ್ತಿ ಹೇಳಿದ್ದು, ಆದನ್ನೆಲ್ಲಾ ನಂಬಬೇಡಿ ಎಂದು ಭಾಳಠಾಕ್ರೆ ಹೇಳುತ್ತಾರೆಯೆ? ವಾಸ್ತವದಲ್ಲಿ ಪರೀಕ್ಷೆಯ ವೇಳೆ ಅರೆ ಪ್ರಜ್ಞಾವಸ್ಥೆಯಲ್ಲಿರುವ ವ್ಯಕ್ತಿ ಮಾತನಾಡುವುದೇ ಇಲ್ಲ. ಪೊಲೀಸರು ಕೇಳಿದ ಪ್ರಶ್ನೆಗಳಿಗೆ 'ಹ್ಞಾ...' ಎಂತಲೋ 'ಹ್ಞಾಹ್ಞಾ...' ಎಂತಲೋ ಧ್ವನಿ ಹೊರಡಿಸುತ್ತಾರಷ್ಟೆ. ಅದನ್ನು ಡಾ.ಮಾಲಿನಿಯಂಥ ಕುಖ್ಯಾತರು ತಮಗೆ ಹೇಗೆ ಬೇಕೋ ಹಾಗೆ ವ್ಯಾಖ್ಯಾನಿಸಬಹುದು. ಬಹಳಷ್ಟು ಭಯೋತ್ಪಾದಕ ಅಪರಾಧಗಳ ಕಗ್ಗಂಟನ್ನು ಬಿಡಿಸಿದ್ದಾರೆಂದರೆ ಅವರು ಪೊಲೀಸರಿಗೆಹೇಗೆ ಬೇಕೋ ಹಾಗೆ ವ್ಯಾಖ್ಯಾನಿಸಿದ್ದಾರೆಂದೇ ಅರ್ಥ.

ಶಿವಸೇನೆ, ಎಬಿವಿಪಿ, ಬಿಜೆಪಿ ಮತ್ತು ಸಂಘಪರಿವಾರಕ್ಕೆ ಮುಸ್ಲಿಮರನ್ನು ಬಿಟ್ಟರೆ ಎರಡನೇ ಶತ್ರುಗಳೇ ಕಮ್ಯೂನಿಸ್ಟರು ಎಂಬುದು ಜಗಜ್ಜಾಹೀರಾಗಿರುವ ಸತ್ಯ. ಮಾವೋವಾದಿ ನಕ್ಸಲೀಯರೂ ಕೂಡ ಕಮ್ಯೂನಿಸ್ಟರೇ. ಹೀಗಿರುವಾಗ ಕಮ್ಯೂನಿಸ್ಟ್ ಚಳವಳಿಯೊಂದಕ್ಕೆ ಈ ಹಿಂದೂತ್ವವಾದಿಗಳು ಆರ್ಥಿಕ ಸಹಾಯ ಮಾಡುತ್ತಾರೆ ಎಂದರೆ ಅದನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ. ಬೇಕಾದರೆ ಆ ಚಳವಳಿಯನ್ನು ನಿರ್ಮೂಲನೆ ಮಾಡುವುದಕ್ಕೆ ಎಷ್ಟು ಬೇಕಾದರೂ ತನು-ಮನ-ಧನ ಅರ್ಪಿಸಿ ಸಹಾಯ ಮಾಡುತ್ತಾರೆ. ಅರುಣ್ ಫೆರ್ರೈರಾ ಕೂಡ ಮಂಪರು ಪರೀಕ್ಷೆಯ ನೈಜ ಸ್ವರೂಪವನ್ನು ಹೊರಜಗತ್ತಿಗೆ ತೋರಿಸುವುದಕ್ಕಾಗಿಯೇ ಇಂತಹ ಹೇಳಿಕೆಯನ್ನು ನೀಡಿರಬಹುದು.

ಅರುಣ್ ಫೆರ್ರೈರಾ ಅವರೇ ಖುದ್ದಾಗಿ ತಮ್ಮ ಮಂಪರು ಪರೀಕ್ಷೆಯ ವರದಿಯನ್ನು ಓದಿ ಬೆಂಗಳೂರು ವಿಧಿ ವಿಜ್ಞಾನ ಪ್ರಯೋಗಾಲಯದ ನಿರ್ದೇಶಕರಿಗೆ ಒಂದು ಪತ್ರ ಬರೆದು ಖ್ಯಾತ(!) ಮಾಲಿನಿಯವರ ಜನ್ಮ ಜಾಲಾಡಿದ್ದಾರೆ. ತಾವು ಅರೆಪ್ರಜ್ಞಾವಸ್ಥೆಯಲ್ಲಿದ್ದಾಗಲೂ ಡಾ. ಮಾಲಿನಿಯವರು ತಮಗೆ ಕೇಳಿದ ಪ್ರಶ್ನೆಗಳು, ಆದಕ್ಕೆ ತಾವು ಕೊಟ್ಟ ಉತ್ತರಗಳು ತಮಗಿನ್ನೂ ಚೆನ್ನಾಗಿ ನೆನಪಿವೆ ಎಂದೂ, ಅವುಗಳನ್ನೆಲ್ಲಾ ವರದಿಯಲ್ಲಿ ಏಕೆ ನಮೂದಿಸಿಲ್ಲ ಎಂದೂ ಕೇಳಿದ್ದಾರೆ. ಗಿನ್ನಿಸ್ ರೆಕಾರ್ಡ್‌ನಲ್ಲಿ ತಮ್ಮ ಹೆಸರು ಬರಲಿ ಎಂದು ಹಾತೊರೆಯುತ್ತಿರುವ ಮಾಲಿನಿ ಈ ಪ್ರಶ್ನೆಗಳನ್ನೆಲ್ಲಾ ಕುಂಡಿ ಕೆಳಗೆ ಹಾಕಿಕೊಂಡು ಕುಳಿತಿದ್ದಾರಷ್ಟೆ. ■

ಕ್ಯಾತೆಮಹಾದೇವಿಯ ನುಂಗಾಯಣ

ಕೊಪ್ಪಳದಲ್ಲಿ ಬಸವಣ್ಣನ ಅನುಯಾಯಿಗಳು ಅನಿಸಿಕೊಂಡವರು ಪರಸ್ಪರ ಕದನಕ್ಕೆ ಇಳಿದಿದ್ದಾರೆ. ಆದರೆ ಅವರ ಈ ಜಗಳ ಬಸವತತ್ವ ಆಚರಣೆ ಕುರಿತದ್ದಲ್ಲ, ಬದಲಾಗಿ ಕೊಪ್ಪಳದ ಬಸವ ದಳ ಕಚೇರಿ ಅರ್ಥಾತ್ ಬಸವ ಮಂಟಪ ಇರುವ ಕಟ್ಟಡ ಯಾರಿಗೆ ಸೇರಿದ್ದು ಎಂಬುದರ ಬಗ್ಗೆ.



ಹಾಗೆ ನೋಡಿದರೆ ಮಾತೆ ಮಹಾದೇವಿ ಅವರು ಅಕ್ಕಮಹಾದೇವಿಯವರ ವಚನಗಳಲ್ಲಿನ ಅಂಕಿತ ನಾಮವನ್ನು ತಿದ್ದಿದ್ದ ವಿಷಯ ಬಯಲಿಗೆ ಬರಲು ಈ ಬಸವ ಮಂಟಪದ ವಿವಾದವೇ ಮೂಲ ಕಾರಣ.

ಕಳೆದ ಕೆಲ ವರ್ಷಗಳಿಂದ ಕಿನ್ನಾಳ ರಸ್ತೆಯ ರೈಲ್ವೆಗೇಟ್ ಪಕ್ಕದಲ್ಲಿರುವ ಈ ವಿವಾದಿತ ಕಟ್ಟಡದಲ್ಲಿ ರವಿವಾರಕ್ಕೊಮ್ಮೆ ಪ್ರಾರ್ಥನೆ ನಡೆಯುತ್ತಾ ಬಂದಿದೆ. ಪ್ರತಿಬಾರಿ ಈ ಪ್ರಾರ್ಥನಾ ಸಭೆಗಳು ಹೌಸ್‌ಫುಲ್ ಆಗದಿದ್ದರೂ ತಕ್ಕಮಟ್ಟಿಗೆ ಬಸವ ಭಕ್ತರು ಇಲ್ಲಿ ಸೇರುತ್ತಿದ್ದರು.

ಆದರೆ ಐದಾರು ತಿಂಗಳ ಹಿಂದೆ ಸಣ್ಣ ವಿಷಯಕ್ಕೆ ಸಂಬಂಧಿಸಿದಂತೆ ಆರಂಭವಾದ ದುಸುಮುಸು ಈಗ ಬಸವದಳದ ಬಿಲ್ಡಿಂಗ್‌ನ ಬುನಾದಿಗೆ ಬಂದು ನಿಂತಿದೆ. ಈ ಜಗಳದಲ್ಲಿ ಒಂದೆಡೆ ಬಸವದಳ ಇದ್ದರೆ ಇನ್ನೊಂದೆಡೆ ಲಿಂಗಾಯತ ಧರ್ಮದ ಮಹಾಸಭಾ, ಬಸವೇಶ್ವರ ಯುವಕ ಸಂಘ ಮತ್ತು ರಕ್ಷಣಾ ವೇದಿಕೆ ಇವೆ.

ಒಂದು ತಿಂಗಳ ಹಿಂದೆ ಈ ಕಟ್ಟಡವನ್ನು ಬಸವದಳದ ಹೆಸರಲ್ಲಿ ನೋಂದಣಿ ಮಾಡಿಸಿದ್ದನ್ನು ಬಸವೇಶ್ವರ ಯುವಕ ಸಂಘ ಪ್ರತಿಭಟಿಸಿತ್ತು. ಅದಕ್ಕೆ ಉತ್ತರವಾಗಿ ಬಸವದಳದ ಜಿಲ್ಲಾ ಕಾರ್ಯಾಧ್ಯಕ್ಷ ವೀರಣ್ಣ ಕಲ್ಲನಳ್ಳಿ "ಈ ಕಟ್ಟಡ ಬಸವದಳಕ್ಕೆ ಸೇರಿದ ಆಸ್ತಿ. ಇದು ಸಾರ್ವಜನಿಕ ಆಸ್ತಿಯಲ್ಲ, ನನ್ನ ತಂದೆ ವೀರಭದ್ರಪ್ಪ ಕಲ್ಲನಳ್ಳಿ ಬಸವದಳಕ್ಕೆ ನೀಡಿದ್ದ ನಿವೇಶನದಲ್ಲಿ ಮಂಟಪದ ಕಟ್ಟಡವನ್ನು ನಿರ್ಮಿಸಲಾಗಿದೆ" ಎಂದು ವಾದಿಸಿದ್ದರು.

ಕಲ್ಲನಳ್ಳಿಯವರ ಈ ವಾದಕ್ಕೆ ತಿರುಗೇಟು ನೀಡಿದ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಪಂಪಾಪತಿ ಹೊನ್ನಳ್ಳಿ ಈ ಕಟ್ಟಡ ಸಾರ್ವಜನಿಕರಿಗೆ ಸೇರಿದ್ದು ಎಂದು ತೋರಿಸಲು ಅನೇಕ ದಾಖಲೆಗಳನ್ನು ಜನರ ಮುಂದೆ ಹರವಿದರು.

"1999-2000ನೇ ಸಾಲಿನಲ್ಲಿ ಶಾಸಕ ಸಂಗಣ್ಣ ಕರಡಿ ಹೆಚ್‌ಕೆಡಿ ಅಭಿವೃದ್ಧಿ ಮಂಡಳಿಯಿಂದ ಈ ಕಟ್ಟಡ ನಿರ್ಮಾಣಕ್ಕೆ 96 ಸಾವಿರ ಒದಗಿಸಿದ್ದರು. ನಂತರ 2000-01ರಲ್ಲಿ ಒಟ್ಟು 2 ಲಕ್ಷ 22 ಸಾವಿರ ರೂಪಾಯಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣಗೊಂಡಿತು. ಇದರಲ್ಲಿನ ಹಲವು ಸೌಲಭ್ಯಗಳನ್ನು ಒದಗಿಸಲು ಭಕ್ತರಿಂದ ಹಣ ಸಂಗ್ರಹಿಸಿ ಕೆಲಸ ಪೂರ್ಣಗೊಳಿಸಲಾಗಿದೆ. ಹೀಗಾಗಿ ಇದು ಸಮುದಾಯ ಭವನವೇ ಹೊರತು ಬಸವ ಮಂಟಪ ಅಲ್ಲವೇ ಅಲ್ಲ" ಎಂದು ಪಂಪಾಪತಿ ವಾದಿಸಿದ್ದರು.

ಇದ್ಯಾವುದಕ್ಕೂ ಜಗ್ಗದ ವೀರಣ್ಣ ಕಲ್ಲನಳ್ಳಿ ಈ ಕಟ್ಟಡವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ನಿಟ್ಟಿನಲ್ಲಿ ಕಳೆದ ಮೇ ತಿಂಗಳಿನಲ್ಲಿ ಏಳು ಜನರ ಟ್ರಸ್ಟ್ ರಚಿಸಿಕೊಂಡು ಈ ಕಟ್ಟಡವನ್ನು ಮಾತೆ ಮಹಾದೇವಿ ಹೆಸರಿಗೆ ನೋಂದಾಯಿಸಿಬಿಟ್ಟಿದ್ದಾನೆ. ಅಷ್ಟೇ ಅಲ್ಲ, ಒಂದು ವೇಳೆ ಈ ನೋಂದಾಯಿತ ಟ್ರಸ್ಟ್ ರದ್ದಾದರೆ ಅದು ಸೀದಾ ಕೂಡಲ ಸಂಗಮದಲ್ಲಿರುವ ಮಾತೆ ಮಹಾದೇವಿಯ ಬಸವಧರ್ಮ ಪೀಠಕ್ಕೆ ಸೇರಬೇಕು ಎಂದೂ ಟ್ರಸ್ಟ್ ಡೀಡ್‌ನಲ್ಲಿ ಬರೆಸಿದ್ದಾನೆ.

ಈ ವಿವಾದದ ಆಳಕ್ಕೆ ಹೋಗಿ ನೋಡಿದರೆ ಇನ್ನೂ ಹಲವಾರು ವಿಪರ್ಯಾಸಗಳು ಕಂಡುಬರುತ್ತವೆ. ಅದರಲ್ಲಿ ಒಂದು ಈ ಕಟ್ಟಡವಿರುವ ಜಾಗ ಕುರಿತದ್ದು. ಈ ಕಟ್ಟಡ 2001ರಲ್ಲಿ ಪೂರ್ಣಗೊಂಡಿತಾದರೂ ಅದರ ಮಾರನೇ ವರ್ಷ ಅಂದರೆ 2002ರ ನಗರಸಭೆ ದಾಖಲೆಗಳ ಪ್ರಕಾರ (ನಂ. 09-050-450/623) ಈ ಕಟ್ಟಡವಿರುವ ಜಾಗ ಇನ್ನೂ 'ಖಾಲಿ ಇರುವ ಜಾಗ'! ಅದರರ್ಥ, ಈ ಜಾಗದಲ್ಲಿರುವ ಸಮುದಾಯ ಭವನಕ್ಕೂ, ವೀರಭದ್ರಪ್ಪ ಕಲ್ಲನಳ್ಳಿ ನೀಡಿದ್ದಾರೆನ್ನುವ ದಾನದ ಸೈಟಿಗೂ ಸಂಬಂಧವೇ ಇಲ್ಲ.

ಅಥವಾ ವಾಸ್ತವದಲ್ಲಿ ಕಟ್ಟಡವಿದ್ದರೂ ಅದು ಸಂಪೂರ್ಣಗೊಂಡು ಕೆಲ ವರ್ಷಗಳೇ ಆಗಿದ್ದರೂ ದಾಖಲೆಗಳಲ್ಲಿ ಅದಿನ್ನೂ 'ಖಾಲಿ ಜಾಗ' ಎಂದೇ ಇರುವುದರಿಂದ ಅದಕ್ಕೆ ಶಾಸಕ ಸಂಗಣ್ಣ ಕರಡಿಯೇ ಅಕ್ರಮವಾಗಿ ಅನುದಾನ ಕೊಡಿಸಿದ್ದಾನೆ ಎಂದಾಗುತ್ತದೆ.

ಅಷ್ಟೇ ಅಲ್ಲ, ಈಗ ಮಾತೆ ಮಹಾದೇವಿ ಆಕ್ರಮಿಸಿಕೊಂಡಿರುವ ಈ ಕಟ್ಟಡದ ಜಾಗ ಸರ್ಕಾರದ್ದು ಎಂದಾದರೆ ವೀರಭದ್ರಪ್ಪ ಕಲ್ಲನಳ್ಳಿ ದಾನವಾಗಿ ನೀಡಿದ್ದ ಸೈಟು ಎಲ್ಲಿ ಹೋಯಿತು? ಯಾರು ಅದನ್ನು ನುಂಗಿಹಾಕಿದರು?

ಈ ಎಲ್ಲ ಪ್ರಶ್ನೆಗಳಲ್ಲಿ ಯಾವುದು ಸತ್ಯ? ಯಾವುದು ಮಿಥ್ಯ? ಯಾರ ದುಡ್ಡಲ್ಲಿ ಯಾರು ಎಲ್ಲಮ್ಮನ ಜಾತ್ರೆ ನಡೆಸುತ್ತಿದ್ದಾರೆ. ಇದನ್ನೆಲ್ಲ ಬಯಲಿಗೆ ಎಳೆಯುವವರ್‍ಯಾರು?

ಮಾತೆ ಮಹಾದೇವಿಯ ಇಂತಹ ತರಲೆ ಕೃತ್ಯಗಳಿಂದ ಕೊಪ್ಪಳದ ಬಸವಪ್ರಿಯರಿಗೆ ನೋವಾಗಿರುವುದಂತೂ ಸತ್ಯ.

■ ವರದಿಗಾರ

ಲೋಕಾಯುಕ್ತದಲ್ಲಿ ಹುಳ ಬಿಡಲು ಹೋಗಿದ್ದ ಗಣಿಧಣಿಗಳು

ಗಣಿ ಹಗರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತರನ್ನು ಕಟ್ಟಿಹಾಕಲು ಹೋಗಿ ಈಗಾಗಲೇ ತಪರಾಕಿ ತಿಂದಿರುವ ಬಳ್ಳಾರಿ ಗಣಿಧಣಿಗಳು, ಈಗ ಲೋಕಾಯುಕ್ತದ ಒಳಗೆ ತಮ್ಮ 'ಹುಳ' ಬಿಡಲು ಹೋಗಿ ಮತ್ತೊಮ್ಮೆ ಒದೆಸಿಕೊಂಡಿದ್ದಾರೆ.

ರಾಜ್ಯದ ಸಂಪತ್ತು ಲೂಟಿ ಮಾಡುತ್ತ ರಾಜ್ಯ ಸರ್ಕಾರವನ್ನು ಬುಗುರಿಯಂತೆ ಆಡಿಸುತ್ತಿರುವ ಗಣಿಧಣಿಗಳು ತಾವೇನು ಮಾಡಿದರೂ ಪ್ರಶ್ನಿಸುವವರಿಲ್ಲ ಎಂಬ ಅಹಂನಿಂದ ಮೆರೆಯುತ್ತಿದ್ದಾರೆ. ತಮ್ಮ ಎಂಜಲು ತಿನ್ನುವ ಅಧಿಕಾರಿಗಳನ್ನು ಬೇಕಾದಲ್ಲಿ ಹಾಕಿಸಿಕೊಂಡು, ಸರ್ಕಾರವನ್ನು ಸಂಪೂರ್ಣವಾಗಿ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಿದ್ದಾರೆ.


ಬಿ.ಎನ್.ಎಸ್.ರೆಡ್ಡಿ


ಇದೇ ರೀತಿ ಗಣಿಹಗರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತವನ್ನೂ ತಮ್ಮ ವಶಕ್ಕೆ ತೆಗೆದುಕೊಂಡು ಈ ಹಗರಣವನ್ನು ಹೇಗಾದರೂ ಮುಚ್ಚಿಹಾಕಬೇಕೆಂದು ಹವಣಿಸುತ್ತಿದ್ದಾರೆ. ಆದರೆ ಇದಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸೊಪ್ಪು ಹಾಕುತ್ತಿಲ್ಲ. ಗಣಿಧಣಿಗಳ ಕುತಂತ್ರಗಳಿಗೆ ಬಲಿಯಾಗದೆ ಅವರ ಕೊರಳಿಗೆ ಕುಣಿಕೆ ಹಾಕುವ ಯತ್ನವನ್ನು ಮುಂದುವರೆಸಿದ್ದಾರೆ.

ಗಣಿ ಹಗರಣದ ತನಿಖೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಅರಣ್ಯ ಸಂರಕ್ಷಣಾಧಿಕಾರಿ ಯು.ವಿ.ಸಿಂಗ್ ತನಿಖೆಯಲ್ಲಿ ಭಾಗವಹಿಸದಂತೆ ಮಾಡಲು ಮೂರು ಬಾರಿ ಅವರನ್ನು ವರ್ಗಾವಣೆ ಮಾಡಿಸಿದ್ದ ಗಣಿಧಣಿಗಳು, ಅದು ಸಾಧ್ಯವಾಗದೇ ಇದ್ದಾಗ, ತಮ್ಮ ಮಾತು ಕೇಳುವ ಹಿರಿಯ ಅಧಿಕಾರಿ ಸಿ.ಎಸ್.ವೇದಾಂತರನ್ನು ಬಳಸಿಕೊಂಡು, ಯು.ವಿ.ಸಿಂಗ್ ಬೆಂಗಳೂರು ಬಿಟ್ಟು ತನಿಖೆಗಾಗಿ ಹೊರಗೆ ಹೋಗದಂತೆ ಕಟ್ಟಿಹಾಕಿದ್ದರು. ಇದನ್ನು ಸವಾಲಾಗಿ ಪರಿಗಣಿಸಿದ ಲೋಕಾಯುಕ್ತರು, ಬೇರೆ ಅಧಿಕಾರಿಗಳನ್ನೇ ಬಳಸಿಕೊಂಡು ತನಿಖೆಯನ್ನು ಮತ್ತಷ್ಟು ತೀವ್ರಗೊಳಿಸಿ, ಹಗರಣದಲ್ಲಿ ಭಾಗಿಯಾಗಿದ್ದ ರಾಜಕಾರಣಿಗಳ ಬೆನ್ನು ಹತ್ತಿದ್ದರು.

ಇದರಿಂದ ಗಾಬರಿಗೊಂಡ ಗಣಿಧಣಿಗಳು ಮತ್ತೊಂದು ಸ್ಕೆಚ್ ರೆಡಿಮಾಡಿದ್ದರೆ. ಅದೆಂದರೆ, ಯಾವಾಗಲೂ ತಮ್ಮ ಮನೆಯ ಬಾಗಿಲು ಕಾಯುತ್ತಿರುವ ಬಿ.ಎನ್.ಎಸ್. ರೆಡ್ಡಿಯಂತ ಅಧಿಕಾರಿಗಳಿಗೆ ಲೋಕಾಯುಕ್ತರ ತನಿಖೆಯ ದಿಕ್ಕು ತಪ್ಪಿಸುವ ಜವಾಬ್ದಾರಿ ಕೊಟ್ಟು ಲೋಕಾಯುಕ್ತರ ಅಂಗಳಕ್ಕೆ ಬಿಟ್ಟಿದ್ದು

ರೆಡ್ಡಿ ಎಂಬ ರಣಹುಳ!

ಐಪಿಎಸ್ ಅಧಿಕಾರಿಯಾಗಿರುವ ಬಿ.ಎನ್.ಎಸ್. ರೆಡ್ಡಿ ಅಸಲಿಗೆ ಗಣಿಧಣಿಗಳ ಅಂಗಳದಲ್ಲಿಯೇ ಹಾಕಿದ್ದನ್ನು ತಿಂದುಕೊಂಡು ಸುತ್ತಾಡುತ್ತಿರುವ ಕ್ರಿಮಿ. ಇವನ ಮಹತ್ಕಾರ್ಯಗಳನ್ನೆಲ್ಲಾ ಗಮನಿಸಿದ ಯಡ್ಡಿ ಸರ್ಕಾರ ಅವನನ್ನು ಬೆಂಗಳೂರಿನಿಂದ ಓಡಿಸಿತ್ತು. ಬೆಂಗಳೂರು ಬಿಟ್ಟು ಎಲ್ಲಿ ಹೋದರೂ ಮೋಜು ಮಾಡಲಾಗುವುದಿಲ್ಲವಲ್ಲ? ಕೂಡಲೇ ಓಡಿಬಂದು ಗಣಿಧಣಿಗಳ ಪಾದಕ್ಕೆರಗಿದ್ದ. ಲೋಕಾಯುಕ್ತರ ಬಲೆಯಲ್ಲಿ ಒದ್ದಾಡುತ್ತಿರುವ ಗಣಿ ರೆಡ್ಡಿಗಳಿಗೂ ಇಂತಹವರ ಅವಶ್ಯಕತೆಯಿತ್ತು. ಇದೇ


ಜನಾರ್ದನ ರೆಡ್ಡಿ

ಸಮಯದಲ್ಲಿ ಸಹಾಯ ಹಸ್ತಬೇಡಿಬಂದಿದ್ದ ಬಿ.ಎನ್.ಎಸ್.ರೆಡ್ಡಿಯನ್ನು ಲೋಕಾಯುಕ್ತವನ್ನು ಕೊರೆಯುವ ಹುಳುವಾಗಿ ಬಳಸುವ ಸಂಚು ರೂಪಿಸಿದರು.

ಇದುವರೆಗೆ ಲೋಕಾಯುಕ್ತಕ್ಕೆ ಯಾವುದೇ ಅಧಿಕಾರಿಯನ್ನು ವರ್ಗಾವಣೆ ಮಾಡುವುದಿದ್ದರೂ ಅದಕ್ಕೆ ಲೋಕಾಯುಕ್ತ ನ್ಯಾಯಮೂರ್ತಿಗಳ ಸಮ್ಮತಿಯನ್ನು ಸರ್ಕಾರ ಪಡೆದುಕೊಳ್ಳುತ್ತಿತ್ತು. ಈ ಬಗ್ಗೆ ನಿಯಮವೇನೂ ಇಲ್ಲದಿದ್ದರೂ, ಲೋಕಾಯುಕ್ತರ ನಿಯಂತ್ರಣದಲ್ಲಿಯೇ ಎಲ್ಲ ವಿಭಾಗಗಳೂ ಇರಬೇಕೆಂಬ ಉದ್ದೇಶದಿಂದ ಈ ಪರಿಪಾಠ ರೂಢಿಸಿಕೊಳ್ಳಲಾಗಿತ್ತು.

ಆದರೆ ಗಣಿಧಣಿಗಳು ಹೇಳಿದ ಮೇಲೆ ಲೋಕಾಯುಕ್ತರ ಪರ್ಮಿಷನ್-ಗಿರ್ಮಿಷನ್ ಎಂದು ಕಾಯುತ್ತಾ ಕುಳಿತಿರಲು ಯಡ್ಡಿ ಸರ್ಕಾರಕ್ಕೆ ಧೈರ್ಯ ಎಲ್ಲಿದೆ? ಕೂಡಲೇ ಲೋಕಾಯುಕ್ತಕ್ಕೆ ಬಿ.ಎನ್.ಎಸ್. ರೆಡ್ಡಿಯನ್ನು ಬೆಂಗಳೂರು ಎಸ್.ಪಿ. ಹುದ್ದೆಗೆ ನೇಮಿಸಿತು. ಗಣಿಧಣಿಗಳ ಉದ್ದೇಶ ಈಡೇರಿತ್ತು.


ಸಂತೋಷ್ ಹೆಗ್ಡೆ

ಲೋಕಾಯುಕ್ತದ ಬೆಂಗಳೂರು ವಿಭಾಗದಲ್ಲಿ ಎಸ್‌ಪಿಯಾಗಿ ನಮ್ಮವರೊಬ್ಬರು ಕುಳಿತರೆ, ಗಣಿಹಗರಣದ ತನಿಖೆ ಎಲ್ಲಿ, ಎತ್ತ ಸಾಗುತ್ತಿದೆ ಎಂಬ ಎಲ್ಲ ಮಾಹಿತಿಯನ್ನು ತಾವು ಪಡೆಯಬಹುದು. ಬೇಕೆನಿಸಿದಾಗ ಹಾದಿ ತಪ್ಪಿಸಬಹುದು, ತಮಗಾಗದವರ ವಿರುದ್ಧ ಛೂ ಬಿಡಬಹುದು ಎಂಬುದು ಗಣಿಧಣಿಗಳ ಕುತಂತ್ರವಾಗಿತ್ತು.


ಆದರೆ ತಮ್ಮ ಸಮ್ಮತಿ ಪಡೆಯದೆ ಪ್ರಮುಖ ಹುದ್ದೆಗೆ ಅಧಿಕಾರಿಯೊಬ್ಬರನ್ನು ಸರ್ಕಾರ ನೇಮಿಸಿದ್ದು ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸಿಟ್ಟು ಬರಿಸಿತ್ತು. ಯಾರೀತ, ಯಾಕೆ ಹೇಳದೇ-ಕೇಳದೆ ಸರ್ಕಾರ ಈ ತೀರ್ಮಾನ ತೆಗೆದುಕೊಂಡಿದೆ ಎಂಬ ಮಾಹಿತಿ ಕಲೆ ಹಾಕಿದ ಅವರಿಗೆ ಬಳ್ಳಾರಿ ಗಣಿಧಣಿಗಳಿಗೂ ಈ ರೆಡ್ಡಿಗೂ ಇರುವ ಸಂಬಂಧ, ಅದರ ಪ್ರಭಾವ ಎಲ್ಲ ಗೊತ್ತಾಗಿತ್ತು. ಇದರಿಂದ ಇನ್ನಷ್ಟು ಸಿಟ್ಟಿಗೆದ್ದ ಸಂತೋಷ್ ಹೆಗ್ಡೆ ಈ ಹುಳ ತಮ್ಮ ಗೂಡು ಸೇರದಂತೆ ಎಚ್ಚರ ವಹಿಸಿದರು. ಅಧಿಕಾರ ವಹಿಸಿಕೊಳ್ಳಲು ಸೂಟು-ಬೂಟು ಹಾಕಿಕೊಂಡು, ವರ್ಗಾವಣೆ ಪತ್ರವನ್ನು ಹಿಡಿದುಕೊಂಡು ಲೋಕಾಯುಕ್ತ ಕಚೇರಿಗೆ ಬಂದ ಬಿ.ಎನ್.ಎಸ್.ರೆಡ್ಡಿಯನ್ನು 'ನಿಮ್ಮ ಸೇವೆಯ ಅಗತ್ಯವಿಲ್ಲ' ಎಂದು ಮುಲಾಜಿಲ್ಲದೆ ಹಿಂದಕ್ಕೆ ಕಳಿಸಿದರು. ಇದರಿಂದ ಸರ್ಕಾರ ಮತ್ತು ಗಣಿಧಣಿಗಳಿಗೆ ಲೋಕಾಯುಕ್ತರು ತಪರಾಕಿ ನೀಡಿದಂತಾಗಿದೆ. ಬೇರೆ ವಿಧಿಯಿಲ್ಲದ ರೆಡ್ಡಿ ಈಗ ಸಿಸಿಬಿ ಕಚೇರಿ ಸೇರಿಕೊಂಡಿದ್ದಾರೆ.

ಬಳ್ಳಾರಿ ಗಣಿಧಣಿ ರೆಡ್ಡಿಗಳು ಈ ರೀತಿಯ ಕುತಂತ್ರ ನಡೆಸುತ್ತಿರುವುದು ಇದು ಮೊದಲೇನೂ ಅಲ್ಲ. ಹಿಂದೆ ಚೆನ್ನಿಗಪ್ಪ ಸಚಿವರಾಗಿದ್ದಾಗ, ಆತನನ್ನು ಬಳ್ಳಾರಿಗೆ ಕರೆಸಿಕೊಂಡು ಹೊಟ್ಟೆ ತುಂಬ ಕುಡಿಸಿ, ಆತನ ಮುಂದೊಂದಿಷ್ಟು ದುಡ್ಡು ಸುರಿದು ಇದನ್ನೆಲ್ಲಾ ಚಿತ್ರಿಸಿಕೊಂಡು, ಚೆನ್ನಿಗಪ್ಪ ಮತ್ತು ಆಗಿನ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಬ್ಲಾಕ್‌ಮೇಲ್ ಮಾಡಿದ್ದರು. ನ್ಯಾಯಾಂಗ ತನಿಖೆಗೆ ಬಂದಿದ್ದ ನ್ಯಾಯಮೂರ್ತಿ ಯು.ಎಲ್. ಭಟ್‌ರಿಗೆ ದಾಖಲೆ ಒದಗಿಸದೇ ಓಡಿಸಿದ್ದರು. ಮಾಧ್ಯಮಗಳ ದಿಕ್ಕು ತಪ್ಪಿಸುವ ಮಾಹಿತಿಗಳನ್ನು ಬಿಡುಗಡೆ ಮಾಡಿದ್ದರು. ಈಗ ತಮ್ಮ ಧನಬಲದಿಂದ ಕೆಲ ಶಾಸಕರನ್ನು ಬುಟ್ಟಿಗೆ ಹಾಕಿಕೊಂಡು ಸರ್ಕಾರ, ಮುಖ್ಯಮಂತ್ರಿ ಯಡ್ಡಿಯನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ.

ಈಗ ಲೋಕಾಯುಕ್ತವನ್ನೂ ದುರ್ಬಲಗೊಳಿಸಲು ಯತ್ನಿಸುತ್ತಿದ್ದಾರೆ. ಹೆತ್ಲಾಂಡಿ ಯಡ್ಡಿ ಸರ್ಕಾರಕ್ಕೆ ಅವರ ಉಸಿರು ಎದುರಿಸುವ ಶಕ್ತಿಯೂ ಇಲ್ಲ. ರಾಜ್ಯದ ಜನತೆ ಲೋಕಾಯುಕ್ತರ ಪರ ನಿಲ್ಲದೇ ಇದ್ದಲ್ಲಿ, ಬಳ್ಳಾರಿ ರೆಡ್ಡಿಗಳು ಅವರನ್ನೂ ಹೆದರಿಸಿ ಓಡಿಸಿಯಾರು.

■ ವರದಿಗಾರ

ಕೊಳ್ಳೇಗಾಲ: 'ರೇಷ್ಮೆ ನಗರ'ದಲ್ಲಿ ಜಿಗಣಿಗಳ ಹಿಂಡು!


ಕೊಳ್ಳೇಗಾಲದ ಮುಡಿಗುಂಡ... ಮಾರುಕಟ್ಟೆ ಕೇಂದ್ರ ಮುಖ್ಯದ್ವಾರ

ಕೊಳ್ಳೇಗಾಲದ ಮುಡಿಗುಂಡಂನಲ್ಲಿರುವ ರೇಷ್ಮೆ ಮಾರುಕಟ್ಟೆಗೆ ಸುಮಾರು 20 ವರ್ಷಗಳ ಇತಿಹಾಸವಿದೆ. 1987 ರಲ್ಲಿ ಪ್ರಾರಂಭವಾದ ಈ ರೇಷ್ಮೆ ಮಾರುಕಟ್ಟೆ ಕೇವಲ ಕೊಳ್ಳೇಗಾಲಕ್ಕಷ್ಟೇ ಸೀಮಿತವಲ್ಲ. ಚಾಮರಾಜನಗರ, ಮಳವಳ್ಳಿ ಹಾಗೂ ಸುತ್ತಮುತ್ತಲಿನ ಸಾವಿರಾರು ರೇಷ್ಮೆ ಬೆಳೆಗಾರರಿಗೆ ಬದುಕು ಕೊಟ್ಟಿದೆ. ಹಾಗಾಗಿ ಈ ಕೊಳ್ಳೇಗಾಲ ರೇಷ್ಮೆ ನಗರ ಎಂದೇ ಹೆಸರುವಾಸಿಯಾಗಿತ್ತು. ಇವತ್ತು ಇದೇ ರೇಷ್ಮೆನಗರ ರೈತರ ರಕ್ತಹಿಂಡುವ ಕೇಂದ್ರವಾಗಿ ಮಾರ್ಪಟ್ಟಿದೆಯೆಂದರೆ ಅದಕ್ಕೆ ಕಾರಣ ಇಲ್ಲಿ ಬಂದು ಕುಳಿತಿರುವ ಅಧಿಕಾರಿಗಳಲ್ಲದೇ ಮತ್ತಾರೂ ಅಲ್ಲ.


... ಮಾರಾಟಕ್ಕೆ ಕಾಯುತ್ತಿರುವ ರೈತರು


... ಕಾಯುತ್ತಿರುವ ರೈತರು

ಇಲ್ಲಿ ಸುಮಾರು 68 ಜನ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿಯೊಬ್ಬರೂ ಮಾರುಕಟ್ಟೆಗೆ ಬರುವ ರೈತರನ್ನು ಹೇಗೆ ಹಿಂಡಬೇಕು ಎಂದು ಯೋಚಿಸುತ್ತಿರುತ್ತಾರೆಯೇ ಹೊರತು ರೈತರ ಸಮಸ್ಯೆಗಳಿಗೆ ಕಿಂಚಿತ್ತೂ ಸ್ಪಂದಿಸುವುದಿಲ್ಲ. ಇವರನ್ನೆಲ್ಲ ಹದ್ದುಬಸ್ತಿನಲ್ಲಿಡಬೇಕಾದ ಅಧಿಕಾರಿ ಡಿ.ಡಿ. ಚಿಗರಿ ಮಾತ್ರ ತಾನೇ ಖುದ್ದಾಗಿ ಮೇಯುವುದರಲ್ಲಿ ನಿರತನಾಗಿರುತ್ತಾನೆ. ಕೆಳಗಿನ ಅಧಿಕಾರಿಗಳು ರೈತರನ್ನು ಎಷ್ಟು ಬೇಕಾದರೂ ಗೋಳು ಹೊಯ್ದುಕೊಳ್ಳಲಿ, ತನಗೆ ಬರಬೇಕಾದ ಮಾಮೂಲಿ ಬಂದರೆ ಸಾಕು ಎನ್ನುವ ಕುಬ್ಬೇತ.


... ಬಗ್ಗೆ ದೂರು...

ಮಧ್ಯವರ್ತಿಗಳ ದಬ್ಬಾಳಿಕೆ

ರೇಷ್ಮೆ ಬೆಳೆಗಾರರು ಹಗಲುರಾತ್ರಿ ಎನ್ನದೆ ದುಡಿದು ಕಷ್ಟಪಟ್ಟು ಬೆಳೆದ ಗೂಡನ್ನು ಮಾರುಕಟ್ಟೆಗೆ ತಂದರೆ ಅಲ್ಲಿ ಮಧ್ಯವರ್ತಿಗಳ ದಬ್ಬಾಳಿಕೆ ನಡೆಯುತ್ತಿದೆ. ಇವರ ಮೋಸಕ್ಕೆ ಗುರಿಯಾಗಿ ಸೂಕ್ತ ಬೆಲೆ ದೊರಕದೆ ಬೆಳೆಗಾರ ಹಿಡಿಶಾಪ ಹಾಕುತ್ತಾ ಹಿಂದಿರುಗುತ್ತಾನೆ. ಕಾನೂನಿನ ಪ್ರಕಾರ ಗೂಡನ್ನು ಹರಾಜಿಗಿಡುವ ಸ್ಥಳದಲ್ಲಿ ಗೂಡಿನ ಜಾಲರಿಗಳನ್ನು ಯಾವುದೇ ಕಾರಣಕ್ಕೂ ಕಾಯ್ದಿರಿಸಬಾರದು. ಈ ನಿಯಮವನ್ನೂ ಮೀರಿ ಕಾಯ್ದಿರಿಸಿದರೆ, ಅಲ್ಲಿರುವ ಗೂಡುಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬಹುದು. ಆದರೆ ಇಲ್ಲಿರುವ ಎಲ್ಲಾ ಜಾಲರಿಗಳನ್ನೂ ಮಧ್ಯವರ್ತಿಗಳೇ ಕಾಯ್ದಿರಿಸಿಕೊಂಡು ರೈತರನ್ನು ಬೆದರಿಸಿ ತಮಗಿಷ್ಟ ಬಂದಂತೆ ಹರಾಜು ಕೂಗಿ ರೈತರಿಗೆ ಮೋಸ ಮಾಡುತ್ತಿದ್ದಾರೆ.




ಎನ್.ವೈ.ಚಿಗರಿ

ಇಂತಹ ಮಧ್ಯವರ್ತಿಗಳಿಗೆ ಸಾಥ್ ನೀಡುತ್ತಿರುವವರು ರೇಷ್ಮೆಗೂಡಿನ ಮಾರುಕಟ್ಟೆಗೆ ಎ.ಡಿ.ಎಸ್. ಆಗಿರುವ ಉತ್ತರ ಕರ್ನಾಟಕ ಮೂಲದ ಗಥದ್. ಆದರೆ ಈ ಸಾಹೇಬರ ಧೋರಣೆ ಎಂತಹದ್ದೆಂದರೆ ಯಾವ ರೈತರಿಗೆ ಏನಾ ದರೇನು ತನಗೆ ಬರಬೇಕಾದ್ದು ಬಂದರೆ ಅಷ್ಟೇ ಸಾಕು ಎಂಬಂತಹದ್ದು.

ಗಡದ್ದಾಗಿ ತಿಂದು ತೇಗುತ್ತಿರುವ ಈ ಗಥದ್ ಸಾಹೇಬರಿಗೆ ತಕ್ಕಂತೆ ಎಸ್‌ಇಒ ಬೋರಯ್ಯ, ರೇಷ್ಮೆ ನಿರೀಕ್ಷಕ ಬಲರಾಮ್‌ರಾಜೆ ಅರಸ್, ಸುರೇಂದ್ರಮೂರ್ತಿ, ಮಹದೇವಯ್ಯ, ಮಹದೇವು, ಶಿವಮೂರ್ತಿಗಳೆಂಬ ಧನದಾಹಿಗಳ ಹಿಂಡೇ ಇದ್ದು ಪ್ರತಿದಿನ ಅಮಾಯಕ ರೈತರ ಸಾವಿರಾರು ರೂಪಾಯಿಗಳನ್ನು ಗುಳುಂ ಮಾಡುತ್ತಾ ದುಂಡಗಾಗಿ ಹೋಗಿದೆ. ಇವರನ್ನೆಲ್ಲ ತನ್ನ ಹಿಡಿತದಲ್ಲಿಟ್ಟುಕೊಂಡು ಪ್ರತಿದಿನ ವಸೂಲಿಯಲ್ಲಿಯೇ ಮುಳುಗಿರುವ ಡಿ.ಡಿ. ಎನ್.ವೈ. ಚಿಗರಿ ಮಾತ್ರ ನಕಲಿ ಡೀಲರ್‌ಗಳು ಹಾಗೂ ಮಧ್ಯವರ್ತಿಗಳ ಪರ ವಕಾಲತ್ತು ವಹಿಸುತ್ತಾ ರೈತರಿಗೆ ಅನ್ಯಾಯವೆಸಗುತ್ತಿದ್ದಾನೆ. ಕೇವಲ ಒಂದು ವರ್ಷದಿಂದೀಚೆಗಷ್ಟೇ ರೇಷ್ಮೆ ಗೂಡಿನ ಮಾರುಕಟ್ಟೆಗೆ ಬಂದಿರುವ ಚಿಗರಿ ಬಂದ ಹೊಸದರಲ್ಲಿ ಕೆಲವು ದಿನ ರೈತರಿಗೆ ಕೊಂಚ ಅನುಕೂಲಕರ ವಾತಾವರಣ ನಿರ್ಮಿಸಿ ಪ್ರಶಂಸೆಗೊಳಗಾಗಿದ್ದ. ಆಗಲೇ ಹದಗೆಟ್ಟುಹೋಗಿದ್ದ ರೇಷ್ಮೆ ಮಾರುಕಟ್ಟೆ ಇವನಿಂದಾದರೂ ಉದ್ಧಾರವಾಗುತ್ತೆ ಅಂತ ಜನ ನಂಬಿದ್ದೂ ಉಂಟು. ಆದರೆ ಮಧ್ಯವರ್ತಿಗಳಿಂದ ಯಾವಾಗ ಆಮಧನಿ ಬಂದು ಬೀಳತೊಡಗಿತೋ ತನ್ನ ಪ್ರಾಮಾಣಿಕತೆಯ ನಾಟಕವನ್ನು ಮುಗಿಸಿ ರೈತರನ್ನು ಹಿಂಡುವ ಜಿಗಣೆಯಂತಾಗಿ ಹೋದ.

ಧ್ವಜದ ಹೆಸರಲ್ಲೂ ವಸೂಲಿ

ರೈತ ಬೆಳೆದ ಬೆಳೆಗೆ ಬೇಕಾಬಿಟ್ಟಿ ಬೆಲೆ ನಿಗದಿ ಮಾಡಿ ವಂಚಿಸುತ್ತಿರುವುದು ಸಾಲದೆಂಬಂತೆ ಈಗ ತ್ರಿವರ್ಣ ಧ್ವಜವನ್ನೂ ತಮ್ಮ ವಸೂಲಿಗೆ ಬಳಸಿಕೊಳ್ಳಲಾರಂಭಿಸಿದ್ದಾರೆ. ಬಾಯಾರಿದಾಗ ರೈತರಿಗೆ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗದ ಈ ವಸೂಲಿ ವೀರರು ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯ ಹೆಸರು ಹೇಳಿಕೊಂಡು ರೈತರಿಂದ ಹತ್ತತ್ತು ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ.

ಒಟ್ಟಿನಲ್ಲಿ ರೈತನ ರಕ್ತಕ್ಕೆ ಜಿಗಣೆಗಳಂತಾಗಿರುವ ಮಧ್ಯವರ್ತಿಗಳ ಹಾಗೂ ಅವರ ಆಮೇಧ್ಯದಲ್ಲಿ ಕುತ್ತಿಗೆ ತನಕ ಮುಳುಗಿರುವ ಗಥದ್ ಮತ್ತು ಚಿಗರಿ ಎಂಬ ಅಧಿಕಾರಿಗಳ ಪಾಪದ ಕೊಡ ತುಂಬುತ್ತಾ ಬಂದಂತಿದೆ. ಅವರನ್ನು ಈಗಲೇ ಎತ್ತಂಗಡಿ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ, ತಾಳ್ಮೆ ಕಳೆದುಕೊಳ್ಳುತ್ತಿರುವ ರೈತರೇ ಅವರನ್ನು ಇಲ್ಲಿಂದ ಒದ್ದು ಓಡಿಸುತ್ತಾರಷ್ಟೆ. ಯಡ್ಡಿಗೆ ಬುದ್ಧಿ ಅಂತ ಒಂದಿದ್ದರೆ ಈಗಲೇ ಅದನ್ನು ಉಪಯೋಗಿಸುವುದು ಒಳ್ಳೆಯದು.

■ ಕೊಳ್ಳೇಗಾಲ ಮಾಳಿಗೆ

ಸ್ಪಷ್ಟೀಕರಣ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಚಿತ್ರದುರ್ಗದ ವಂಚಕ ಟ್ರ್ಯಾಕ್ಟರ್ ಡೀಲರ್ ಎಂಬ ವರದಿಯ 'ಎಸ್.ಬಿ.ಐ.ನಲ್ಲೊಬ್ಬ ಖದೀಮ' ಎಂಬ ಬಾಕ್ಸ್ ಐಟಂನಲ್ಲಿ ಶಿವು ಯಾದವ ಎಂಬ ವಕೀಲರ ಫೋಟೋ ತಪ್ಪಾಗಿ ಪ್ರಕಟವಾಗಿದೆ. ಅದಕ್ಕಾಗಿ ವಿಷಾದಿಸುತ್ತೇವೆ.



ಧಾರವಾಡ: ಕಲಾವಿದ್ಯಾಲಯದಲ್ಲಿ ಲಂಚಕೋರರಿದ್ದಾರೆ ಎಚ್ಚರ!

ಇತ್ತೀಚೆಗೆ ಧಾರವಾಡದಲ್ಲಿರುವ ಕರ್ನಾಟಕ ಕಲಾ ಮಹಾವಿದ್ಯಾಲಯವು ತತ್ವಶಾಸ್ತ್ರ ವಿಭಾಗದಲ್ಲಿ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಿತ್ತು. ಅದರಂತೆ ಅರ್ಜಿಗಳೂ ಬಂದವು. ಆಯ್ಕೆಯೂ ನಡೆಯಿತು. ಆದರೆ ಆಮೇಲೆ ಗೊತ್ತಾಗಿದ್ದೇನೆಂದರೆ ಈ ವಿಶ್ವವಿದ್ಯಾಲಯದ ಡಾ.ಬಾಲಸುಬ್ರಹ್ಮಣ್ಯ ಎಂಬುವವರ ಆಯ್ಕೆ ಸಮಿತಿಯು ತನಗೆ ಕಪ್ಪ ನೀಡಿದವರನ್ನು ಮಾತ್ರ ಆಯ್ಕೆ ಮಾಡಿ ಉಳಿದವರನ್ನು ವಿನಾಕಾರಣ ತಿರಸ್ಕರಿಸಿತ್ತು.

ಅದಕ್ಕೆ ಸಾಕ್ಷಿ ಶ್ಯಾಮಸುಂದರ್ ಜಯರಾಮ್ ಎಂಬ ದಲಿತ ವಿದ್ಯಾರ್ಥಿಗೆ ಆದ ಅನುಭವ. ಜುಲೈ 9 ರಂದು 2 ಗಂಟೆಗೆ ನಿಗದಿತ ಸಮಯಕ್ಕೆ ಸರಿಯಾಗಿ ಸಂದರ್ಶನಕ್ಕೆ ಶ್ಯಾಮಸುಂದರ್ ಹಾಜರಾದರು. ಇವರನ್ನು ಕಂಡಕೂಡಲೇ ಬಾಲಸುಬ್ರಹ್ಮಣ್ಯ ಸಂದರ್ಶಿಸುವ ಬದಲಾಗಿ "ಸೆಲೆಕ್ಷನ್ ಪಟ್ಟಿ ಮುಗಿದಿದೆ, ಇನ್ನು ಬಂದವರನ್ನು ಆಯ್ಕೆ ಮಾಡುವುದಿಲ್ಲ" ಎಂದು ಹೇಳಿ ಕಳುಹಿಸಿದರು. ಅದು ಹೇಗೆ ಸಾಧ್ಯ? ಸಂದರ್ಶನಕ್ಕೆ ಕರೆದಿದ್ದವರನ್ನೆಲ್ಲ ಸಂದರ್ಶಿಸಿದ ನಂತರವೇ ಆಯ್ಕೆ ಮಾಡಬೇಕಲ್ಲಾ ಎಂದು ಕೇಳಿದ್ದಕ್ಕೆ ಶ್ಯಾಮಸುಂದರ್ ಅವರನ್ನು ಬಾಲಸುಬ್ರಹ್ಮಣ್ಯ ಗದರಿಸಿ ಕಳುಹಿಸಿದ್ದಾರೆ.

ಅಸಲಿಗೆ ಏನಾಗಿತ್ತೆಂದರೆ ಈ ಬಾಲಸುಬ್ರಹ್ಮಣ್ಯ ತನಗೆ ಬೇಕಾದ ಕೆಲವು 2ಎ ಪ್ರವರ್ಗಕ್ಕೆ ಸೇರಿದ್ದ ಮತ್ತು ತನಗೆ 'ಪ್ರಸಾದ' ನೀಡಿದ್ದವರನ್ನೇ ಆಯ್ಕೆಮಾಡಿದ್ದಾನೆ. ಅಂದರೆ ಬೇಕೆಂತಲೇ ಶ್ಯಾಮಸುಂದರ್ ತರಹದ ದಲಿತ ಅಭ್ಯರ್ಥಿಗಳನ್ನು ತಿರಸ್ಕರಿಸಿದ್ದಾನೆ. ಈ ವಿಷಯ ಶ್ಯಾಮಸುಂದರ್‌ಗೆ ಗೊತ್ತಾಗಿ ಕೂಡಲೇ ಆತ ಪ್ರಿನ್ಸಿಪಾಲ್ ಚಟದಿಯನ್ನು ಮಾತನಾಡಿಸಲು ಹೋಗಿದ್ದಾನೆ. ಆದರೆ ಚಟದಿ ಮಹಾಶಯರೂ "ಸಂದರ್ಶನ ನಡೆಸುವುದಷ್ಟೇ ನಮ್ಮ ಕೆಲಸ, ಆಯ್ಕೆ ಮಾಡಿ ಅವುಗಳನ್ನು ಅನುಮೋದನೆಗೆ ಕಳಿಸುವುದು ರಿಜಿಸ್ಟ್ರಾರ್ ರಂಗಸ್ವಾಮಿಯವರ ಕೆಲಸ. ಅವರನ್ನೇ ವಿಚಾರಿಸಿ" ಎಂದು ದಬಾಯಿಸಿದ್ದಾರೆ.

ದಾರಿ ಕಾಣದೆ ಶ್ಯಾಮ್‌ಸುಂದರ್, ರಿಜಿಸ್ಟ್ರಾರ್ ರಂಗಸ್ವಾಮಿಯ ಹತ್ತಿರ ಹೋಗಿದ್ದಾರೆ. ಆದರೆ ಆತನಿಂದಲೂ ಅವರಿಗೆ ಸಮರ್ಪಕ ಉತ್ತರ ಸಿಕ್ಕಿಲ್ಲ. "ನಾನು ಈ ಕಚೇರಿಗೆ ಬಂದು ಎರಡೇ ತಿಂಗಳಾಗಿದೆ. ನನಗೇನೂ ಗೊತ್ತಿಲ್ಲ" ಎಂದ ರಂಗಸ್ವಾಮಿ ತಾನೇ ಆಯ್ಕೆ ಪತ್ರಗಳಿಗೆ ಸಹಿ ಹಾಕಿದ್ದೇನೆಂಬುದನ್ನೇ ಮರೆತಂತೆ ಮಾತನಾಡಿದ್ದಾನೆ. ಶ್ಯಾಮಸುಂದರ್ ಇದನ್ನು ಆತನ ಗಮನಕ್ಕೆ ತರುತ್ತಿದ್ದಂತೆ "ನಿಮ್ಮ ಅರ್ಜಿ ಜೊತೆ ಡಿ.ಡಿ. ಇರಲಿಲ್ಲ" ಎಂದೆಲ್ಲ ಬಾಯಿಗೆ ಬಂದಂತೆ ವದರಿ ಅವರನ್ನು ಕಳುಹಿಸಿದ್ದಾನೆ.

ದಲಿತ ವಿದ್ಯಾರ್ಥಿ ಶ್ಯಾಮ್‌ಸುಂದರ್ ಜಯರಾಮ್‌ಗೆ ಹೀಗೆ ಅನ್ಯಾಯವಾಗುತ್ತಿರುವುದನ್ನು ತಿಳಿದ ಧಾರವಾಡ-ಹುಬ್ಬಳ್ಳಿಯ ದಲಿತ ಹಾಗೂ ಪ್ರಗತಿಪರ ಸಂಘಟನೆಗಳು ಆಗಸ್ಟ್ 7 ರಂದು ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.


ಪ್ರತಿಭಟನಾಕಾರರ ಮುಂದೆ ಹಾಜರಾದ ರಿಜಿಸ್ಟ್ರಾರ್ ರಂಗಸ್ವಾಮಿ ಅವರ ಮನವಿ ಪತ್ರವನ್ನು ತೆಗೆದುಕೊಂಡು, ಸಮಜಾಯಿಷಿಯಾಗಿ ಹೇಳಿದ್ದೇನೆಂದರೆ "ವಿಶ್ವವಿದ್ಯಾಲಯದ ನೇಮಕಾತಿ ನೀತಿಯನ್ನು ಸಿಂಡಿಕೇಟ್ ರೂಪಿಸಿದೆ. ಅದರ ಪ್ರಕಾರ ಆಯ್ಕೆ ನಡೆದಿದೆ. ಇಲ್ಲಿ ಸಂಖ್ಯೆಗನುಗುಣವಾಗಿ ದಲಿತ ಅಭ್ಯರ್ಥಿಗಳನ್ನು ನೇಮಕಾತಿಗೊಳಿಸಲಾಗಿದೆ. ಇದನ್ನು ಬದಲಾಯಿಸಲು ನನಗೆ ಅಧಿಕಾರವಿಲ್ಲ. ಆದರೆ ತನಿಖೆ ನಡೆಸುತ್ತೇನೆ" ಎಂಬ ಮಾತುಗಳನ್ನು.

ಇವತ್ತು ಶ್ಯಾಮಸುಂದರ್‌ಗೆ ಆಗಿರುವಂತಹ ಅನ್ಯಾಯ ಈ ವಿವಿಯಲ್ಲಿ ಹಲವಾರು ದಲಿತ ಅಭ್ಯರ್ಥಿಗಳಿಗೂ ಆಗಿದೆ. ಹಲವಾರು ವರ್ಷಗಳಿಂದ ತಳವೂರಿಕೊಂಡಿರುವ ಇಲ್ಲಿನ ಅಧಿಕಾರಿಗಳು, ಪ್ರಾಧ್ಯಾಪಕರು ಏನಾದರೊಂದು ನೆಪ ಹೇಳುತ್ತಾ ಬಡ ಅಭ್ಯರ್ಥಿಗಳನ್ನು ವಂಚಿಸುತ್ತಲೇ ಬಂದಿದ್ದಾರೆ. ಆದರೆ ಅದರ ವಿರುದ್ಧ ಯಾರೂ ಪ್ರತಿಭಟಿಸಿರಲಿಲ್ಲ ಅಷ್ಟೇ.

ಆದರೆ ಈಗ ಶ್ಯಾಮಸುಂದರ್ ಪ್ರಕರಣದಿಂದಾಗಿ ಈ ಲಂಚಕೋರರ ಅಕ್ರಮ ಮತ್ತು ಅನ್ಯಾಯದ ವ್ಯವಹಾರ ಬೀದಿಗೆ ಬಂತಲ್ಲದೆ, ಅವರು ಜನರ ಆಕ್ರೋಶವನ್ನೂ ಅನುಭವಿಸುವಂತಾಯಿತು. ಪರಿಣಾಮವಾಗಿ ಅವರು ಈಗ ಶ್ಯಾಮಸುಂದರ್ ಜಯರಾಮ್ ಅವರನ್ನೇ ಕಲಾ ಮಹಾವಿದ್ಯಾಲಯದ ಅತಿಥಿ ಉಪನ್ಯಾಸಕರನ್ನಾಗಿ ಆಯ್ಕೆ ಮಾಡಿದ್ದಾರೆ.

■ ಹುಬ್ಬಳ್ಳಿಯಾಂವ

ಹಾವೇರಿ: ಕೊನೆಗೂ ಕುನ್ನೂರ್‌ಗೆ ಸಿಕ್ಕಿತು ಮುಕ್ತಿ!


ಕುನ್ನೂರು

ಕೇಂದ್ರದ ಯುಪಿಎ ಸರ್ಕಾರ ನ್ಯೂಕ್ಲಿಯರ್ ಡೀಲ್ ಗದ್ದಲದಲ್ಲಿ ಗೆದ್ದ ದಿನದಿಂದಲೂ ಬಿಜೆಪಿ ಸಂಸದ ಮಂಜುನಾಥ ಕುನ್ನೂರ್ ಭರ್ಜರಿ ಸುದ್ದಿ ಮಾಡುತ್ತಿದ್ದರು. ಒಂದೆಡೆ ಬಿಜೆಪಿ ಪಕ್ಷದ ನಾಯಕರು ಹೇಗಾದರೂ ಸರಿ ಯುಪಿಎ ಸರ್ಕಾರವನ್ನು ವಿಶ್ವಾಸಮತದಲ್ಲಿ ಸೋಲಿಸಬೇಕೆಂದು ತಿಪ್ಪರಲಾಗ ಹಾಕುತ್ತಿದ್ದರೆ ಇನ್ನೊಂದೆಡೆ ಕರ್ನಾಟಕದ ಇಬ್ಬರು ಪ್ರಮುಖ ಬಿಜೆಪಿ ಸಂಸದರಾದ ಮನೋರಮ ಮಧ್ವರಾಜ್ ಮತ್ತು ಮಂಜುನಾಥ್ ಕುನ್ನೂರ್ ಪಕ್ಷದ ವಿಪ್ ಉಲ್ಲಂಘಿಸಿ ಬಿಜೆಪಿಗೆ ಕೈಕೊಟ್ಟು ಕಾಂಗ್ರೆಸ್‌ನ 'ಕೈ' ಹಿಡಿದಿದ್ದರು. ಇದರ ಹಿಂದೆ ಅವರಿಬ್ಬರ - ಅದರಲ್ಲೂ ವಿಶೇಷವಾಗಿ ಮಂಜುನಾಥ್ ಕುನ್ನೂರ್‌ನ - ಅವಕಾಶವಾದಿತನವಿದೆಯಾದರೂ ಭಯೋತ್ಪಾದಕ ಬಿಜೆಪಿಗೆ ಕೈಕೊಟ್ಟಿರುವ ಅವರ ದಿಟ್ಟತನವನ್ನು ಪ್ರಶಂಸಿಸಲೇಬೇಕು.

ಮಂಜುನಾಥ್ ಕುನ್ನೂರ್ ಸಾಚಾ ಮನುಷ್ಯನೇನಲ್ಲ. ಊಸರವಳ್ಳಿ ಗುಣಗಳನ್ನೇ ಮೈಗೂಡಿಸಿಕೊಂಡಿರುವ ಈತ ರಾಜಕೀಯದ ಚದುರಂಗದಾಟದಲ್ಲಿ ಪಳಗಿರುವ ವ್ಯಕ್ತಿ. ವೈಯಕ್ತಿಕವಾಗಿ ತನಗೆ ಗಣನೀಯವಾದ ಲಾಭವಿದೆಯೆಂದರೆ ಸಿದ್ಧಾಂತ, ತತ್ವಗಳೆಲ್ಲವನ್ನೂ ಮರೆತು ಕಣ್ಣು ಮುಚ್ಚಿಕೊಂಡು ಎಲ್ಲಿಗೆ ಬೇಕಾದರೂ ಹಾರಬಲ್ಲ ಅವಕಾಶವಾದಿ ಈತ. ಈ ಕಾರಣಕ್ಕೇ ಆತ ತನ್ನ ಮೂಲ ಪಕ್ಷವಾದ ಕಾಂಗ್ರೆಸ್ ತೊರೆದು ಬಿಜೆಪಿ ಎಂಬ ಪಕ್ಕಾ ಕಮ್ಯೂನಲ್ ಭಯೋತ್ಪಾದಕ ಪಕ್ಷಕ್ಕೆ ಹಾರಿದ್ದ. ಈಗ ಅವನಿಗೆ ಅರ್ಥವಾಗಿರಬೇಕು ಅದೆಂಥ ಪಕ್ಷ ಎಂದು.

ಮೂಲತಃ ಕಾಂಗ್ರೆಸ್ಸಿನಂತಹ ಮುದಿ ಆಲದಮರದ ನೆರಳಿನಲ್ಲಿಯೇ ತನ್ನ ರಾಜಕೀಯ ಜೀವನವನ್ನು ಆರಂಭಿಸಿದ ಕುನ್ನೂರ್‌ಗೆ ಬಿಜೆಪಿಯಂಥ ಕಟ್ಟರ್ ಹಿಂದೂತ್ವವಾದಿ ಭಯೋತ್ಪಾದಕ ಪಕ್ಷವನ್ನು ಸೇರಿಕೊಳ್ಳುವ ದರ್ದು ಏನಿತ್ತು? ಅಧಿಕಾರ, ಹಣದಾಸೆಯಲ್ಲದೇ ಹೇಳಿಕೊಳ್ಳುವುದಕ್ಕೆ ಬೇರೇನೂ ಕಾರಣಗಳಿರಲಿಲ್ಲ. ಹಾಗೆ ನೋಡಿದರೆ, ಕಾಂಗ್ರೆಸ್‌ನಂಥ ಪಕ್ಷದಲ್ಲಿ ತನ್ನ ಪೊಲಿಟಿಕಲ್ ಕೆರಿಯರ್ ಕಟ್ಟಿಕೊಳ್ಳುವುದಕ್ಕೆ ಆತನಿಗೇನೂ ಕೊರತೆಯಿರಲಿಲ್ಲ. ಕಾಂಗ್ರೆಸ್ಸಿನಲ್ಲಿ ಆತ ಆಗಲೇ ಒಬ್ಬ ಪ್ರಭಾವಿ ರಾಜಕಾರಣಿಯಾಗಿ ಬೆಳೆಯುವ ಎಲ್ಲ ಲಕ್ಷಣಗಳನ್ನು ಹೊಂದಿದ್ದ. ವಕೀಲಿ ವೃತ್ತಿ ಮಾಡುತ್ತಲೇ ಶಿಗ್ಗಾಂವಿ ತಾಲ್ಲೂಕ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷಗಿರಿಯನ್ನು ಅಲಂಕರಿಸಿ ದ್ದನಲ್ಲದೇ ಕಾಂಗ್ರೆಸ್‌ನಿಂದಲೇ ಕಣಕ್ಕಿಳಿದು ಎರಡು ಬಾರಿ ಎಮ್ಮೆಲ್ಲೆ ಕೂಡ ಆಗಿದ್ದ. ಆದರೆ ತನ್ನ ಅಧಕಾರಾವಧಿಯುದ್ದಕ್ಕೂ ಆತ ತನ್ನ ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಶ್ರಮ ಪಟ್ಟನೇ ಹೊರತು ತನ್ನ ಕ್ಷೇತ್ರದ ಅಭಿವೃದ್ಧಿಗೆ ಶ್ರಮಪಡಲಿಲ್ಲ.


ಬ.ಬೊಮ್ಮಾಯಿ

ತನ್ನ ಶಾಸಕತ್ವದ ದಿನಗಳಲ್ಲಿ ನಲವತ್ತು ಲಕ್ಷ ವೆಚ್ಚದಲ್ಲಿ ಶಿಗ್ಗಾಂವಿಯಲ್ಲಿ ಒಂದು ಬಸ್ ನಿಲ್ದಾಣವನ್ನು ನಿರ್ಮಿಸಿದ್ದ. ಆದರೆ ದುರಂತ ಎಂದರೆ, ಅದರ ಉದ್ಘಾಟನೆಯ ಸಮಯಕ್ಕೆ ಸೋತು ಮನೆ ಸೇರಿದ್ದ. ಬಸ್‌ನಿಲ್ದಾಣವನ್ನು ನಿರ್ಮಿಸಿದ್ದು ತಾನು, ಆದರೆ ಅದರ ಕ್ರೆಡಿಟ್ಟನ್ನು ಪಡೆದುಕೊಳ್ಳುತ್ತಿರುವವರು ಇನ್ಯಾರೋ ಎಂಬ ಸಂಕಟ ಅವನನ್ನು ಕಾಡುತ್ತಲೇ ಇತ್ತು. ಕೃಷ್ಣ ಸರ್ಕಾರ ಅಧಿಕಾರದ ಗದ್ದುಗೆಗೇರು ತ್ತಿದ್ದಂತೆ ಕುನ್ನೂರ್ ವಿರುದ್ಧ ಜನತಾದಳದಿಂದ ಗೆದ್ದಿದ್ದ ಅಜ್ಜಂಫಿರ್ ಖಾದ್ರಿ ಕಾಂಗ್ರೆಸ್ ಸೇರಿಕೊಂಡರು. ಇದರಿಂದ ತಾನೆಲ್ಲಿ ಮೂಲೆಗುಂಪಾಗಿ ಹೋಗುತ್ತೇನೋ ಎಂಬ ಆತಂಕದಿಂದ ಅವನ ಬಿಪಿ ರೈಸ್ ಆಗಿಹೋಯಿತು. ಬಸ್‌ಸ್ಟ್ಯಾಂಡ್ ಉದ್ಘಾಟನೆಯ ಆಮಂತ್ರಣ ಪತ್ರದಲ್ಲಿ ತನ್ನ ಹೆಸರನ್ನು ಮುದ್ರಿಸಿಲ್ಲ ಎಂಬ ನೆಪವೊಡ್ಡಿ ಕಟ್ಟಡ ಉದ್ಘಾಟನೆಯ ವಿರುದ್ಧ ಗಲಾಟೆಯೆಬ್ಬಿಸಿದ.

ಕುನ್ನೂರು ಮಾಡಿಸಿದ ಗಲಾಟೆ ಅಸಲಿಗೆ ಅವನಿಗೇ ತಿರುಗುಬಾಣವಾಗಿ ಕಾಂಗ್ರೆಸ್‌ನಿಂದ ಆರು ವರ್ಷಗಳ ಕಾಲ ಉಚ್ಚಾಟನೆಗೊಂಡ. ಅಷ್ಟು ಸಾಕಿತ್ತು ಅವನು ಕಾಂಗ್ರೆಸ್ ತೊರೆಯುವುದಕ್ಕೆ. ಸ್ವಭಾವತಃ ಮುಂಗೋಪಿಯಾಗಿರುವ ಈತ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿಕೊಳ್ಳಲು ಸಿದ್ಧರಾಮಯ್ಯನ ಎದುರು ಅಡ್ಡಡ್ಡ ಬಿದ್ದ. ಅದೂ ವರ್ಕ್‌ಔಟ್ ಆಗದೇ ಕೊನೆಗೆ ಲಿಂಗಾಯತ ರಾಜಕಾರಣವನ್ನು ಮುಂದುಮಾಡಿ ಬಿಜೆಪಿಯ ಪಾಲಾದ.

ಉಸಿರುಗಟ್ಟಿದಂತಾಗಿದ್ದ!

ಲಿಂಗಾಯತ ಸಮುದಾಯದಲ್ಲಿ ಒಂದಿಷ್ಟು ಹೆಸರು ಮಾಡಿದ್ದ ಕುನ್ನೂರ್ ಬಿಜೆಪಿಗೆ ಬಂದ ಮೇಲೆ ಜಿಲ್ಲೆಯ ಬಿಜೆಪಿಗೂ ಒಂದು ಹೊಸ ಕಳೆ ಬಂದಂತಾಗಿತ್ತು. ಇದನ್ನೇ ಬಂಡವಾಳ ಮಾಡಿಕೊಂಡ ಬಿಜೆಪಿ, ಕಾಂಗ್ರೆಸ್‌ನ ಸನದಿ ವಿರುದ್ಧ ಧಾರವಾಡ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಇವನನ್ನು ಕಣಕ್ಕಿಳಿಸಿತು. ಅಷ್ಟು ಹೊತ್ತಿಗಾಗಲೇ ಬಿಜೆಪಿಯೂ ತನ್ನ ಓಟ್‌ಬ್ಯಾಂಕ್ ಅನ್ನು ಕ್ಷೇತ್ರದಲ್ಲಿ ವಿಸ್ತರಿಸಿಕೊಂಡಿತ್ತಾದ್ದರಿಂದ ಹಾಗೂ ಕುನ್ನೂರ್‌ಗೂ ತನ್ನದೇ ಆದ ಓಟ್‌ಬ್ಯಾಂಕಿ ತ್ತಾದ್ದರಿಂದ ಎರಡೂ ಸೇರಿ ಸನದಿಯನ್ನು ಸೋಲಿಸಿ ಸಂಸದನಾಗಿಬಿಟ್ಟ.

ಮೂಲತಃ ಕಾಂಗ್ರೆಸ್‌ನಂತಹ ಲಿಬರಲ್ ಪಕ್ಷದಲ್ಲಿ ಬೆಳೆದ ಕುನ್ನೂರ್‌ಗೆ ಬಿಜೆಪಿಯಂತಹ ಕಟ್ಟರ್ ಹಿಂದೂತ್ವವಾದಿ ಪಕ್ಷದಲ್ಲಿ ಹೊಂದಿಕೊಳ್ಳಲು ಆಗಲೇ ಇಲ್ಲ. ಹಾಗಾಗಿಯೇ ಅವನ ದೇಹ ಬಿಜೆಪಿಯಲ್ಲಿದ್ದರೂ ಮನಸ್ಸು ಅತ್ತಿತ್ತ ಹಾರಾಡುತ್ತಲೇ ಇತ್ತು. ಕುನ್ನೂರ್ ಬಿಜೆಪಿ ಸೇರಿದ ಮೇಲೆ ಆ ಪಕ್ಷದ ಯಾವೊಂದು ಕಾರ್ಯಕ್ರಮ ದಲ್ಲೂ ಆತ ಭಾಗವಹಿಸಲಿಲ್ಲ ಎಂಬುದು ಸೋಜಿಗವಾದರೂ ಸತ್ಯ. ಬಿಜೆಪಿಯ ಅಧಿಕೃತ ಸಂಸದನಾದಾಗಲೂ ಆತ ಪಕ್ಷದ ಯಾವುದೇ ಸಭೆಸಮಾರಂಭಗಳಿಗೆ ಹಾಜರಾಗಲಿಲ್ಲ. ರಾಜ್ಯ ಬಿಜೆಪಿ ಯಡ್ಡಿ-ಅನಂತಕುಮಾರ್ ಎಂಬ ಎರಡು ಬಣಗಳಾಗಿ ಹೋಳಾದಾಗಲೂ ಯಾವ ಬಣಕ್ಕೂ ಸೇರದೇ ನಿರ್ಲಿಪ್ತನಾಗಿದ್ದ. ಭಜರಂಗದಳ, ವಿಎಚ್‌ಪಿಯಂತಹ ಹಿಂದೂತ್ವವಾದಿ ಭಯೋತ್ಪಾದಕ ಸಂಘಟನೆಗಳು ಜಿಲ್ಲೆಯಲ್ಲಿ ಕೋಮು ದಳ್ಳುರಿ ಹಚ್ಚುವುದಕ್ಕೆ ಪ್ರಯತ್ನಿಸುತ್ತಿದ್ದಾಗಲೂ ಇನ್ನಿತರ ಬಿಜೆಪಿ ಸಂಸದರಂತೆ ಈ ದಳ್ಳುರಿಗೆ ಎಣ್ಣೆ ಹೊಯ್ಯುವ ಕೆಲಸ ಮಾಡಲಿಲ್ಲ. ಇದೂ ಕೂಡ ಚೆಡ್ಡಿಗಳು ಕುನ್ನೂರ್ ವಿರುದ್ಧ ಕತ್ತಿಮಸೆಯುವುದಕ್ಕೆ ಒಂದು ಕಾರಣವಾಯಿತು. ಇದರಿಂದ ಕುನ್ನೂರ್ ಬಿಜೆಪಿಯಿಂದ ಮತ್ತಷ್ಟು ದೂರ ಸರಿದ.

ಕಳೆದ ವಿಧಾನಸಭಾ ಚುನಾವಣೆಯ ಸಮಯದಲ್ಲಿ ತನಗೆ ಶಿಗ್ಗಾಂವಿ ಕ್ಷೇತ್ರದ ಟಿಕೆಟ್ ಬೇಕೆಂದು ಕುನ್ನೂರ್ ಹಠಹಿಡಿದಿದ್ದ. ಆದರೆ ಬಿಜೆಪಿ ಅವನಿಗೆ ಕ್ಯಾರೆ ಎನ್ನದೇ ಬಸವರಾಜ್ ಬೊಮ್ಮಾಯಿಗೆ ಅದನ್ನು ಧಾರೆ ಎರೆಯುವ ತಯಾರಿ ಮಾಡಿತ್ತು. ಆಗಲೇ ಈತ ಬೇರೆ ಬೇರೆ ರಾಜಕೀಯ ಪಕ್ಷಗಳ ಬಾಗಿಲಿಗೆ ಅಲೆಯಲಾರಂಭಿಸಿದ್ದ. ಆದರೆ ಎಲ್ಲೂ ಸಲ್ಲದವನಾಗಿ ಮತ್ತೆ ಬಿಜೆಪಿ ನಾಯಕರಲ್ಲಿಗೆ

ದುಷ್ಟ ಕುನ್ನೂರನ ಧಮಕಿಗಳು



ಸೋಮಣ್ಣ

ತಾನು ಈ ದೇಶದ ಲೋಕಸಭಾ ಸದಸ್ಯ ಎಂಬ ಪರಿಜ್ಞಾನವನ್ನ ಕೆಲ ಸಲ ಈ ಕುನ್ನೂರ ಮರೆತು ಬಿಡುತ್ತಾನೆ. ಅದಕ್ಕೆ ತಾಜಾ ಉದಾಹರಣೆ ಎಂದರೆ ಮೊನ್ನೆ ಶನಿವಾರ ಹುಬ್ಬಳ್ಳಿ ಏರಪೋರ್ಟ್‌ಗೆ ಸಚಿವ ಬಸವ ರಾಜ ಬೊಮ್ಮಾಯಿಯನ್ನ ರಿಸೀವ್ ಮಾಡಲು ಹೋಗಿದ್ದ ಶಿಗ್ಗಾಂವಿ ಬಿಜೆಪಿ ಲೀಡರ್ ಸೋಮಣ್ಣ ಬೇವಿನಮರದ ಜೊತೆಗೆ ಕುನ್ನೂರ ಸುಮ್ಮಸುಮ್ಮನೆ ಕ್ಯಾತೆ ತೆಗೆದು ಕ್ಯಾಕರಿಸಿ ಉಗಿಸಿಕೊಂಡಿದ್ದಾನೆ. "ನನ್ನ ಅಣಕ ಶವಯಾತ್ರೆ ಮಾಡ್ತಿಯಾ? ನಾನು ನಿನ್ನ ನಿಜ ಶವಯಾತ್ರೆ ಮಾಡ್ತಿನಿ. ನಿನ್ನ ಮರ್ಡರ್ ಮಾಡಿಸ್ತೀನಿ. ನನ್ನ ಮಗನ ಕಡೆಯಿಂದ ನಿನ್ನ ಮಗನ್ನ ಎತ್ತಸತೇನಿ" ಅಂತಾ ಅಂಡರ್‌ವರ್ಲ್ಡ್ ಡಾನ್ ತರಹ ಕುನ್ನೂರ ಓಪನ್ ಧಮಕಿ ಕೊಟ್ಟಿದ್ದಾನೆ.

ಇವರಿಬ್ಬರದೂ ಹಳೇ ಸೇಡು. ಅದನ್ನು ತೀರಿಸಿಕೊಳ್ಳೋದಕ್ಕೆ ಬೇವಿನಮರದನಿಗೆ ಒಂದು ಛಾನ್ಸನ್ನು ಕುನ್ನೂರ್ ಎಂಬ ಅವಿವೇಕಿ ಕೊಟ್ಟಿದ್ದಾನೆ. ಸೀದಾ ಹುಬ್ಬಳ್ಳಿ ಗೋಕುಲ ರೋಡ್ ಪೊಲೀಸ್ ಠಾಣೆಗೆ ಹೋದ ಬೇವಿನಮರದ ಕುನ್ನೂರ ವಿರುದ್ಧ ಜೀವ ಬೆದರಿಕೆ ಕೇಸು ಜಡಿದಿದ್ದಾನೆ.

ಧಮಕಿ ಹಾಕುವುದು ಕುನ್ನೂರ್‌ಗೆ ಹಳೇ ಚಾಳಿ. ಈ ಹಿಂದೆ ಕೂಡ ಹಲವಾರು ನೊಂದ ಜನರು ಇವನನ್ನು ಭೇಟಿಯಾಗಲು ಬಂದಾಗ ಅವರಿಗೂ ಇದೇ ರೀತಿ ಧಮಕಿಹಾಕಿ ಕಳಿಸಿದ ಅದೆಷ್ಟೋ ಉದಾಹರಣೆಗಳಿವೆ. ಇವನ ವಿರುದ್ಧ ಬರೆಯುವ ಪತ್ರಕರ್ತರಿಗೂ ಅದೆಷ್ಟೋ ಬಾರಿ ಧಮಕಿ ಹಾಕಿದ್ದಾನೆ. ಇದೊಂಥರಾ ಮೆಂಟಲ್ ಕೇಸು ಅನ್ನೊಂಡು ಅವನ್ನೆಲ್ಲಾ ಇಗ್ನೋರ್ ಮಾಡಿದವರೇ ಜಾಸ್ತಿ, ಈಗ ಬೇವಿನಮರದ ಸರಿಯಾಗಿ ಇಟ್ಟಿದ್ದಾನೆ.

ಮಧುಗಿರಿ: ಶಾಸಕ ಗೌರಿಶಂಕರನ ಚಂಗಲಾಟ!


ಗೌರಿಶಂಕರ

ಮಧುಗಿರಿಯ ಜನ ಗೌರಿಶಂಕರನೆಂಬ ಮಂಗನನ್ನು ಶಾಸಕನನ್ನಾಗಿ ಆಯ್ಕೆ ಮಾಡಿದ್ದಕ್ಕೆ ಪಶ್ಚಾತ್ತಾಪ ಪಟ್ಟುಕೊಳ್ಳುತ್ತಿರುವುದಂತೂ ಸತ್ಯ. ಈತನ ಐಲು ಪೈಲುಗಳನ್ನು ನೋಡಿದರೆ ಅಪ್ಪ ಚೆನ್ನಿಗಪ್ಪನಿಗೆ ತಕ್ಕ ಮಗ ಎಂಬುದರಲ್ಲಿ ಯಾವುದೇ ಸಂಶಯ ಉಳಿಯುವುದಿಲ್ಲ.

ಮೂಲತಃ ಗೌರಿಶಂಕರ ಒಬ್ಬ ಪುಡಿ ರೌಡಿ. ಅಪ್ಪ ಚೆನ್ನಿಗಪ್ಪ ಮಂತ್ರಿಯಾಗಿದ್ದಾಗಲಂತೂ ಇವನ ಅಡ್ಡ ಕಸುಬುಗಳು ಹುಲುಸಾಗಿ ಬೆಳೆದಿದ್ದವು. ಅಪ್ಪನ ದಾರಿಯಲ್ಲೇ ನಡೆಯುವುದಕ್ಕೆ ರಾಜಕೀಯ ಪ್ರವೇಶಿಸಿ ತ್ಯಾಮಗೊಂಡ್ಲು ಜಿ.ಪಂ. ಸದಸ್ಯ ಕೂಡ ಆದ. ಆದರೆ, ಇವನ ಅಡ್ಡ ಕಸಬುಗಳು ಅದೆಷ್ಟು ಬಲಿಷ್ಠವಾಗಿದ್ದವೆಂದರೆ ಅವುಗಳನ್ನು ನಿಭಾಯಿಸುವುದಕ್ಕೆ ಈ ಹುದ್ದೆಯಿಂದಾಗುತ್ತಿರಲಿಲ್ಲ. ಹಾಗಾಗಿ ತಾನೂ ಎಮ್ಮೆಲ್ಲೆಯಾಗಿಬಿಟ್ಟರೆ, ತನ್ನ ಪಕ್ಷವೂ ಅಧಿಕಾರಕ್ಕೇರಿಬಿಟ್ಟರೆ ತನ್ನ ಕಳ್ಳದಂಧೆಗಳನ್ನು, ರೌಡಿಜಂಅನ್ನು ನಿರಾತಂಕವಾಗಿ ನಡೆಸಿಕೊಂಡು ಮೆರೆಯಬಹುದು ಎಂದುಕೊಂಡು ಕಳೆದ ಚುನಾವಣೆಯಲ್ಲಿ ಮಧುಗಿರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದ. ಇವನ ಅದೃಷ್ಟ ಚೆನ್ನಾಗಿತ್ತು, ಕೇವಲ 563 ಮತಗಳ ಅಂತರದಲ್ಲಿ ಗೆದ್ದು ಶಾಸಕನಾಗಿಯೂ ಬಿಟ್ಟ. ಆದರೆ ಜೆಡಿಎಸ್‌ನ ಅದೃಷ್ಟ ಕೈಕೊಟ್ಟಿತ್ತು, ರಾಜ್ಯಾದ್ಯಂತ ಮಕಾಡೆ ಮಲಗಿಬಿಟ್ಟಿತು.

ಜೆಡಿಎಸ್ ರಾಜ್ಯದ ಉಳಿದ ಕ್ಷೇತ್ರಗಳಲ್ಲಿ ನೆಲಕಚ್ಚಿದ್ದು ಇವನ ದರ್ಬಾರ್ ಪ್ಲಾನಿಗೆ ನೀರೆರಚಿದಂತಾಗಿತ್ತು. ಬಿಜೆಪಿ ಅಧಿಕಾರದ ಗದ್ದುಗೆಗೆ ಏರಿ, ಎರಡನೇ ದೊಡ್ಡ ಪಕ್ಷವಾಗಿ ಕಾಂಗ್ರೆಸ್ ಹೊರಹೊಮ್ಮಿ ಯಾರೂ ಕೇಳದ ಹೀನಾಯ ಪರಿಸ್ಥಿತಿಗೆ ಜೆಡಿಎಸ್ ಬಿದ್ದದ್ದು ರಾಜ್ಯದಲ್ಲಿ ಆ ಪಕ್ಷದ ಎಮ್ಮೆಲ್ಲೆಗಳಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲದಂತೆ ಮಾಡಿತು. ಅದೂ ಗೌರಿಶಂಕರನ ವಿಚಾರದಲ್ಲೂ ಸತ್ಯವಾಗಿತ್ತು.

ಒಂದು ಉದಾಹರಣೆಯನ್ನೇ ನೋಡಿ. ಚುನಾವಣೆಯ ಸಮಯದಲ್ಲಿ ಲೇಡಿ ಇನ್ಸ್‌ಪೆಕ್ಟರ್ ಕನಕಲಕ್ಷ್ಮಿ ಹಾಗೂ ಮಧುಗಿರಿ ಉಪವಿಭಾಗಾಧಿಕಾರಿಯಾಗಿದ್ದ ತುಳಸಿ ಎಂಬ ಇಬ್ಬರು ಅಧಿಕಾರಿಗಳು ಗೌರಿಶಂಕರನ ದುಡ್ಡು, ದರ್ಪಕ್ಕೆ ಸೊಪ್ಪುಹಾಕದೇ ಅವನ ಕಾನೂನುಬಾಹಿರ ಅಡ್ಡಕಸುಬುಗಳಿಗೆ ಕಡಿವಾಣ ಹಾಕಿ ದಕ್ಷತೆ ಮೆರೆದಿದ್ದರು.

ಚೆಡ್ಡಿಗಳ ಅಣಕು ಶವಯಾತ್ರೆಯೂ, ಕಾಂಗ್ರೆಸ್‌ನ ತೊಟ್ಟಿಲು ಜಾತ್ರೆಯೂ...




ಮಂಜುನಾಥ್ ಕುನ್ನೂರ್ ಯಾವಾಗ ಬಿಜೆಪಿಯ ಕುಂಡೆಗೆ ಒದ್ದು ಕಾಂಗ್ರೆಸ್ ನೇತೃತ್ವದ ಯುಪಿಎ ಪರ ಓಟು ಗುದ್ದಿದನೋ ಆತನ ತವರು ಶಿಗ್ಗಾಂವಿಯಲ್ಲಿ ಚೆಡ್ಡಿಗಳ ಆರ್ಭಟ ನೋಡಬೇಕಿತ್ತು. ಕುನ್ನೂರ್ ಇಂಥ ಕೆಲಸ ಮಾಡೇ ಮಾಡುತ್ತಾನೆ ಎಂಬುದು ಚೆಡ್ಡಿಗಳಿಗೆ ಮೊದಲೇ ಗೊತ್ತಿದ್ದರಿಂದ ಅವನ ವಿರುದ್ಧ ಪ್ರತಿಭಟನೆಯನ್ನೂ ಮೊದಲೇ ಪ್ಲಾನ್ ಮಾಡಿಕೊಂಡಿದ್ದರು. ಸುದ್ದಿ ಹೊರಬಿದ್ದ ತಕ್ಷಣ ಸೋಮಣ್ಣ ಬೇವಿನಮರ ಎಂಬ ಬಿಕನಾಸಿ ಚೆಡ್ಡಿಯ ನೇತೃತ್ವದಲ್ಲಿ ಕುನ್ನೂರ್‌ನ ಅಣಕು ಶವಯಾತ್ರೆ ನಡೆಯಿತು. ತಮ್ಮ ಸಿದ್ಧಾಂತವೇ ಕೊಳೆತ ಹೆಣದಂತಾಗಿರುವಾಗ ಕುನ್ನೂರ್‌ನ ಅಣಕು ಶವಯಾತ್ರೆ ಮಾಡುವುದು, ತಿಥಿ ಊಟ ಏರ್ಪಡಿಸುವುದು, ಕುನ್ನೂರ್ ಸತ್ತಿದ್ದಾರೆ ಎಂದು ಹಳ್ಳಿಹಳ್ಳಿ ತಿರುಗಿ ತಮಟೆ ಹೊಡೆಯುವುದು ಮುಂತಾದ ಅಸಂಬದ್ಧ ಕಾರ್ಯಕ್ರಮಗಳನ್ನು ಮಾಡಲು ಸ್ಕೆಚ್ ಹಾಕಿದ್ದರು.

ಬಿಜೆಪಿಗಳು ಏನೆಲ್ಲಾ ಪ್ಲಾನ್ ಮಾಡಿದ್ದಾರೆಂದು ಕಾಂಗ್ರೆಸ್ಸಿಗರಿಗೆ ಮೊದಲೇ ಗೊತ್ತಿದ್ದರಿಂದ ಅವರೂ ಸುಮ್ಮನಿರಲಿಲ್ಲ. ಕುನ್ನೂರ್ ಬಿಜೆಪಿಯಿಂದ ದೂರವಾಗಿದ್ದರಿಂದ ಅವರಿಗೆ ಮರುಜನ್ಮ ಸಿಕ್ಕಿದೆ ಎಂದು ತೊಟ್ಟಿಲು ತೂಗೋ ಜಾತ್ರೆ ಹಮ್ಮಿಕೊಂಡಿದ್ದರು. ಒಟ್ಟಿನಲ್ಲಿ ಕುನ್ನೂರ್‌ನ ಈ ಶವಯಾತ್ರೆ ಮತ್ತು ತೊಟ್ಟಿಲು ಜಾತ್ರೆಗಳು ಕ್ಷೇತ್ರದ ಜನರಿಗೆ ಮನರಂಜನೆ ನೀಡುತ್ತಿರುವುದಂತೂ ಸತ್ಯ.

...ಒಂದು ಕನಿಷ್ಠ ತನ್ನ ಮಗನಿಗಾದರೂ ಬಿಜೆಪಿ ಟಿಕೆಟ್ ಕೊಡಿ ಎಂದು ಅಂಗಲಾಚಿದ್ದ. ಅದೂ ಫಲಿಸಲಿಲ್ಲ. ಶಿಗ್ಗಾಂವಿ ಟಿಕೆಟ್ ಬೊಮ್ಮಾಯಿ ಪಾಲಾಯಿತು. ಆವತ್ತೇ ಕುನ್ನೂರ್ ಮಾನಸಿಕವಾಗಿ ಬಿಜೆಪಿ ಬಿಟ್ಟಿದ್ದ.

ನಂತರ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ವಿರುದ್ಧವಾಗಿ ಕಾಂಗ್ರೆಸ್‌ನ ಅಭ್ಯರ್ಥಿ ಅಜ್ಜಂಪೀರ್ ಖಾದ್ರಿಯರವರ ಪರವಾಗಿ ಇಡೀ ಕ್ಷೇತ್ರದಾದ್ಯಂತ ಕಾರ್ಯಕರ್ತನಂತೆ ಓಡಾಡಿ ಹೆಂಡ, ಹಣ ಹಂಚಿ ಬಹಿರಂಗವಾಗಿ ಪ್ರಚಾರ ಮಾಡಿದ; ಬಿಜೆಪಿ ಸೇರಿ ಪಶ್ಚಾತ್ತಾಪ ಪಡುತ್ತಿದ್ದೇನೆಂದು ಕಣ್ಣೀರಿಟ್ಟ; ಬಿಜೆಪಿಯ ಜನ ವಿರೋಧಿ ನೀತಿಗಳನ್ನು ಎಂಥ ಪ್ರಗತಿಪರರೂ ನಾಚುವಂತೆ ಬಿಡಿ ಬಿಡಿಯಾಗಿ ಜನರ ಮುಂದಿಟ್ಟ.



ಈ ಪ್ರಕ್ರಿಯೆಯಲ್ಲಿ ಆತ ಮತ್ತೆ ಕಾಂಗ್ರೆಸ್‌ನ ಸಖ್ಯ ಬೆಳೆಸಿಕೊಳ್ಳುವಲ್ಲಿ ಯಶಸ್ವಿಯಾದ. ಈಗ ಅಧಿಕೃತವಾಗಿ ಕಾಂಗ್ರೆಸ್ ಮನುಷ್ಯ ಎನಿಸಿಕೊಳ್ಳುವುದಕ್ಕೆ ಒಂದು ಪ್ರಬಲವಾದ ಅವಕಾಶ ಹುಡುಕುತ್ತಿದ್ದಾಗಲೇ ಕೇಂದ್ರದಲ್ಲಿ ಪರಮಾಣು ಒಪ್ಪಂದ ವಿವಾದ ತಾರಕಕ್ಕೇರಿ ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಕೊಟ್ಟಿದ್ದ ಬೆಂಬಲವನ್ನು ವಾಪಾಸ್ಸು ಪಡೆದವು. ಆಗ ಯುಪಿಎಗೆ ತನ್ನ ಸರ್ಕಾರ ಉಳಿಸಿಕೊಳ್ಳಲು ಒಂದೊಂದು ಓಟುಗಳೂ ಮುಖ್ಯವಾದವು. ಕೂಡಲೇ ಕಾಂಗ್ರೆಸ್ಸಿನವರು ಕುನ್ನೂರ್‌ನನ್ನು ಕೇಳಿಕೊಂಡರು. ರೋಗಿ ಬಯಸಿದ್ದೂ ಹಾಲು ಅನ್ನ, ಡಾಕ್ಟರ್ ಹೇಳಿದ್ದೂ ಹಾಲು ಅನ್ನ ಎಂಬಂತಾಗಿಬಿಟ್ಟಿತು ಕುನ್ನೂರ್ ಪರಿಸ್ಥಿತಿ. ಮಾತುಕತೆಗಳಾದವು, ಡೀಲ್ ಕುದುರಿತು, ಕುನ್ನೂರ್ ನಿರೀಕ್ಷೆಯಂತೆ ಬಿಜೆಪಿಗೆ ಒದ್ದು ಕಾಂಗ್ರೆಸ್‌ನ 'ಕೈ' ಹಿಡಿದೇ ಬಿಟ್ಟ. ಇನ್ನೇನು ಆರು ತಿಂಗಳಲ್ಲಿ ಮತ್ತೆ ಲೋಕಸಭಾ ಚುನಾವಣೆ ಎದುರಾಗುತ್ತಿದೆ. ಬಿಜೆಪಿಯಲ್ಲೇ ಇದ್ದಿದ್ದರೆ ಅವನಿಗೆ ಟಿಕೆಟ್ ಸಿಗುತ್ತಿರಲಿಲ್ಲ ಎಂಬುದು ಗ್ಯಾರಂಟಿ. ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ನ ಕೈ ಹಿಡಿದಿದ್ದಕ್ಕೆ ಈಗ ಕುನ್ನೂರ್‌ಗೆ ಕಾಂಗ್ರೆಸ್‌ನ ಲೋಕಸಭಾ ಟಿಕೆಟ್ ಗ್ಯಾರಂಟಿಯಾಗಿದೆ. ನ್ಯೂಕ್ಲಿಯರ್ ಡೀಲ್‌ನಿಂದಾಗಿ ನಾಳೆ ಈ ದೇಶಕ್ಕೆ ಏನಾಗುತ್ತದೋ ಗೊತ್ತಿಲ್ಲ. ಆದರೆ ರಾಜಕೀಯ ಅವಸಾನದ ಅಂಚಿನಲ್ಲಿದ್ದ ಕುನ್ನೂರ್‌ಗಂತೂ ಅದು ಮರುಜೀವ ನೀಡಿದೆ ಎಂಬುದಂತೂ ಸತ್ಯ.

■ ವಿನಯ್ ಹುರುಳಿಕುಪ್ಪಿ



ಹಾವೇರಿಗೆ ಸಲೀಮ್ ಧಾರವಾಡಕ್ಕೆ ಕುನ್ನೂರ್!

ಕೇಂದ್ರದಲ್ಲಿ ಅಲುಗಾಡುತ್ತಿದ್ದ ಕಾಂಗ್ರೆಸ್‌ಗೆ ಆಪದ್ಬಾಂಧವನಂತೆ ಬಂದಿರುವ ಕುನ್ನೂರ್‌ಗೆ ತಕ್ಕ ಪ್ರಾಶಸ್ತ್ಯ ನೀಡಲು ಕಾಂಗ್ರೆಸ್ ತೀರ್ಮಾನಿಸಿದೆ. ಈ ಹಿಂದೆ ಆತ ಪಕ್ಷದಲ್ಲಿದ್ದುಕೊಂಡು ಮಾಡಿದ ಬಲುಪ್ಪೈಲುಗಳನ್ನೆಲ್ಲಾ ಕ್ಷಮಿಸಿ ಪಕ್ಷದಲ್ಲಿ ಮತ್ತೆ ಜವಾಬ್ದಾರಿ ನೀಡಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿಯೇ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಕ್ಷೇತ್ರದಲ್ಲಿ ಬಿಜೆಪಿಯ ಪ್ರಹ್ಲಾದ್ ಜೋಶಿಯ ವಿರುದ್ಧ ಕುನ್ನೂರ್‌ನನ್ನು ಕಣಕ್ಕಿಳಿಸಲು ಕಾಂಗ್ರೆಸ್ ಮುಂದಾಗಿದೆ.

ಅಸಲಿಗೆ ಕುನ್ನೂರ್ ಹಾವೇರಿಯಿಂದ ಲೋಕಸಭೆಗೆ ಕಣಕ್ಕಿಳಿಯಲು ಬಯಸಿದ್ದ. ಆದರೆ, ಸಲೀಮ್ ಅಹಮ್ಮದ್ ಎಂಬ ಸಜ್ಜನ ರಾಜಕಾರಣಿ ಹಾವೇರಿಯಲ್ಲಿ ಸಾಕಷ್ಟು ಹೆಸರು ಮಾಡಿರುವುದರಿಂದ ಅವರನ್ನು ಹಾವೇರಿಯಿಂದ ಕಣಕ್ಕಿಳಿಸಲು ಕಾಂಗ್ರೆಸ್ ತೀರ್ಮಾನಿಸಿದೆ. ಏನೇ ಆದರೂ, ಕುನ್ನೂರ್ ಈ ಭಾಗದಲ್ಲಿ ಈಗಾಗಲೇ ಲಿಂಗಾಯತ ಲೀಡರ್‌ಆಗಿ ಎಸ್ಟಾಬ್ಲಿಷ್ ಆಗಿರುವುದರಿಂದ ಅದು ಕಾಂಗ್ರೆಸ್‌ಗೆ ಒಂದಿಷ್ಟು ಬಲ ತರಲಿದೆ ಎಂಬುದರಲ್ಲಿ ಅನುಮಾನವಿಲ್ಲ.

...ಈತ ಶಾಸಕನಾಗಿ ಆಯ್ಕೆಗೊಂಡ ತಕ್ಷಣವೇ ಅವರನ್ನು ಮಧುಗಿರಿಯಿಂದ ಎತ್ತಂಗಡಿ ಮಾಡುವುದಕ್ಕೆ ಮುಂದಾದ. ಆದರೆ ಏನು ಮಾಡುವುದು? ಅಧಿಕಾರದಲ್ಲಿರುವುದು ಬಿಜೆಪಿ ಪಕ್ಷ. ಹಾಗಾಗಿ ಇವನ ಮಾತಿಗೆ ಕವಡೆ ಕಾಸಿನಷ್ಟು ಬೆಲೆ ಸಿಗಲಿಲ್ಲ. ಕೈಲಾಗದವನು ಮೈ ಪರಚಿಕೊಂಡಂತೆ ಅಧಿಕಾರಿಗಳನ್ನು ದಬಾಯಿಸುತ್ತಾ ಪತ್ರಿಕಾಗೋಷ್ಠಿ ನಡೆಸಿ ಅರಚಾಡಿದ; ಪಾವಗಡ ಕ್ಷೇತ್ರದ ಶಾಸಕ ಕಂ ಮಂತ್ರಿ ವೆಂಕಟರಮಣಪ್ಪನ ಕುಮ್ಮಕ್ಕಿನಿಂದಲೇ ಅಧಿಕಾರಿಗಳು ತನ್ನ ಮಾತನ್ನು ಕೇಳುತ್ತಿಲ್ಲ ಎಂದು ಮೈ ಪರಚಿಕೊಂಡ.

ಗೌರಿಶಂಕರ ಮತ್ತು ಅವನ ಬೆಂಬಲಿಗರು ಅದೆಷ್ಟು ಹತಾಶೆಯಿಂದ ಅಧಿಕಾರಿಗಳ ವಿರುದ್ಧ ತಿರುಗಿಬಿದ್ದಿದ್ದಾರೆಂದರೆ ಮಧುಗಿರಿ ಕ್ಷೇತ್ರದ ಮಿಡಿಗೇಶಿ ಎಂಬ ಗ್ರಾಮದಲ್ಲಿ ತಾನು ವಿಜಯೋತ್ಸವ ಮಾಡುವ ಸಂದರ್ಭದಲ್ಲಿ ಜೆಡಿಎಸ್‌ನ ಮುಖಂಡನೆಂದು ಹೇಳಿಕೊಳ್ಳುತ್ತಿದ್ದ ಇವನ ಬೆಂಬಲಿಗನೊಬ್ಬ ಪೊಲೀಸ್ ಸಹಾಯಕ ಸಬ್‌ಇನ್ಸ್‌ಪೆಕ್ಟರ್‌ನ ಕೆನ್ನೆಗೆ ಬಾರಿಸಿದ್ದಾನೆ. ಅದೂ ಹಿರಿಯ ಅಧಿಕಾರಿಗಳು ಮತ್ತು ಗೌರಿಶಂಕರನ ಎದುರಿನಲ್ಲೇ!

ಎಲ್ಲಾ ನಾಯಕರನ್ನು, ಕಾರ್ಯಕರ್ತರನ್ನು ಕಳೆದುಕೊಂಡು ಹಾಳೂರಿನಂತಾಗಿರುವ ಜೆಡಿಎಸ್ ಪಕ್ಷಕ್ಕೆ ಚೇತರಿಸಿಕೊಳ್ಳುವ ಲಕ್ಷಣಗಳಿಲ್ಲ ಎಂಬುದು ಈಗ ಗೌರಿಶಂಕರ ಮತ್ತು ಅವರಪ್ಪ ಚನ್ನಿಗಪ್ಪ ಇಬ್ಬರಿಗೂ ಅರ್ಥವಾಗಿದೆ. ತಾವು ಅಲ್ಲಿಯೇ ಉಳಿದರೆ ತಮ್ಮ ರಾಜಕೀಯ ಜೀವನವೂ ಅಂತ್ಯಗೊಳ್ಳುತ್ತದೆ ಎಂಬುದೂ ಅವರಿಗೆ ಗೊತ್ತಾಗಿದೆ. ಅದೂಅಲ್ಲದೇ, ಜೆಡಿಎಸ್‌ನಲ್ಲಿ ಇದ್ದಷ್ಟು ದಿನವೂ ಅಧಿಕಾರಿಗಳು ತಮಗೆ ಯಾವುದೇ ಬೆಲೆ ಕೊಡುವುದಿಲ್ಲ ಎಂಬುದೂ ಅವರಿಗೆ ಅರ್ಥವಾಗಿದೆ. ಹೀಗಾಗಿ ಬಿಜೆಪಿ ಎಂಬ ಗೆದ್ದೆತ್ತಿನ ಬಾಲ ಹಿಡಿಯುತ್ತಿರುವ ಜೆಡಿಎಸ್ ನಾಯಕರ ಪಟ್ಟಿಗೆ ಈ ಅಪ್ಪ-ಮಕ್ಕಳಿಬ್ಬರೂ ಸೇರಿದ್ದಾರೆ. ತಮ್ಮ ಹಿಂದಿರುವ ಪುಡಿ ರೌಡಿಗಳನ್ನು ಕಟ್ಟಿಕೊಂಡು 'ಜೈ ಕಮಲ' ಎನ್ನುತ್ತಾ ಬಿಜೆಪಿಯತ್ತ ಗುಳೆ ಹೊರಟಿದ್ದಾರೆ.

ಒಂದು ತಮಾಷೆಯೆಂದರೆ, ಬಳ್ಳಾರಿಯ ಗಣಿ ಧಣಿಗಳ ಗಣಿ ಹಗರಣ ಬಯಲಿಗೆ ಬಂದಿದ್ದೇ ಚೆನ್ನಿಗಪ್ಪ ಗಣಿ ಮಂತ್ರಿಯಾಗಿದ್ದಾಗ. ಈ ಕಾರಣಕ್ಕೇ ಜನಾರ್ದನ ರೆಡ್ಡಿ ವಿಶೇಷವಾಗಿ ಅಂದಿನ ಸಿಎಂ ಕುಮಾರಸ್ವಾಮಿ ಮತ್ತು ಗಣಿ ಮಂತ್ರಿ ಚೆನ್ನಿಗಪ್ಪನ ವಿರುದ್ಧ ಕೆಟ್ಟ ದ್ವೇಷ ಕಟ್ಟಿಕೊಂಡಿದ್ದರು. ಈಗ ಬದ್ಧ ದ್ವೇಷಿಗಳಿಬ್ಬರೂ ಭಾಯಿ ಭಾಯಿ ಆಗುತ್ತಿದ್ದಾರೆ.

ಒಟ್ಟಿನಲ್ಲಿ ಚೆನ್ನಿಗಪ್ಪ ಮತ್ತವನ ಮಗನ ಬಲುಪ್ಪೈಲು ಇತಿಹಾಸ ನೋಡಿದರೆ ಇವರು ಬಿಜೆಪಿಯಲ್ಲೂ ಠಿಕಾಣಿ ಹೂಡುವುದು ಕಷ್ಟ.

■ ವರದಿಗಾರ

ಮಂಗಳೂರು ಮನಪಾ ನೀರಿನ ಬೆಲೆ ಏರಿಕೆ ಪ್ರತಿಭಟಿಸಿದರೆ ಸಾಕೆ?

ಕುದುರೇನೇ ಇಲ್ಲ ಅದು ತಿನ್ನುವ ಹುರುಳಿಗಾಗಿ ಕಾದಾಡಿದಂತಿದೆ ಮಂಗಳೂರಿನ ಪರಿಸ್ಥಿತಿ. ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಆಡಳಿತ ಯಂತ್ರದ ಬೇಜವಾಬ್ದಾರಿತನ ಮತ್ತು ವ್ಯಾಪಕ ಭ್ರಷ್ಟಾಚಾರದ ದೆಸೆಯಿಂದ ಕಳೆದ ಎರಡು ವರ್ಷಗಳಿಂದ ಕುಡಿಯುವ ನೀರಿಗೆ ತಾತ್ವಾರವಿದೆ. ಕುಡಿಯಲು ನೀರು ಕೊಡಿ ಎಂದು ಕೇಳುವ ಬದಲು ನೀರಿನ ದರ ಏರಿಸಿದ್ದ್ಯಾಕೆ ಎಂದು ಸಿಪಿಐ (ಎಂ) ಪಕ್ಷ ಆಡಳಿತಾರೂಢ ಬಿಜೆಪಿ ವಿರುದ್ಧ ಪ್ರತಿಭಟಿಸುತ್ತಿದೆ. ಇದೊಂಥರಾ ಹಾವು-ಮುಂಗುಸಿ ಆಟದಂತಾಗಿ, ಪೊಲೀಸರ ಅಟ್ಟಹಾಸದೊಂದಿಗೆ 'ರಾಜಕೀಯ ಸ್ಟಂಟ್' ಅಷ್ಟೇ ಆಗಿಹೋಯಿತು.



ಈ ಹಿಂದಿನ 10 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ನೀರಿನ ದರ ಏರಿಕೆಯಾಗಿರಲಿಲ್ಲ. 25,000 ಲೀಟರ್ ತನಕ ನೀರು ಬಳಸಿದರೆ 50 ರೂ.ಗಳನ್ನು ಮಾತ್ರ ಸಾರ್ವಜನಿಕರಿಂದ ವಸೂಲು ಮಾಡಲಾಗುತ್ತಿತ್ತು. ಕಾಂಗ್ರೆಸ್ ಆಡಳಿತಾವಧಿ ಮುಗಿದು, ಚುನಾವಣೆಗೂ ಮುನ್ನ ಜಿಲ್ಲಾಧಿಕಾರಿ ಆಡಳಿತಾಧಿಕಾರಿಯಾಗಿದ್ದ ಅವಧಿಯಲ್ಲಿ ನೀರಿನ ದರವನ್ನು 50ರಿಂದ ರೂ. 100ಕ್ಕೆ ಏರಿಸಿದ್ದರು. ಅದೂಅಲ್ಲದೇ, ರಾಜ್ಯದಲ್ಲೇ ಸ್ವಯಂಘೋಷಿತವಾಗಿ ಆಸ್ತಿ ತೆರಿಗೆಯಿಂದ ಮುಕ್ತವಾಗಿದ್ದ ಮಂಗಳೂರು ಮ.ನ.ಪಾ.ದಲ್ಲೂ ಅದನ್ನು ಜಾರಿಗೆ ತಂದರು. ಮಂಗಳೂರಿನ ಭೌಗೋಳಿಕ ಇತಿಮಿತಿಗೆ ಎಂದೂ ತಾಳೆಯಾಗದ ಈ ಸ್ವಯಂಘೋಷಿತ ಆಸ್ತಿ ತೆರಿಗೆ ವಿಚಾರದಲ್ಲಾಗಲೀ, ನೀರಿನ ದರವನ್ನು ಸಡನ್ ಆಗಿ ಏರಿಕೆ ಮಾಡಿದ ಬಗ್ಗೆಯಾಗಲೀ ಆಗ ಯಾರೂ ಚಕಾರವೆತ್ತಲಿಲ್ಲ. ಚುನಾವಣೆಗೆ ತಯಾರು ನಡೆಸುತ್ತಿದ್ದ ರಾಜಕೀಯ ಪಕ್ಷಗಳಿಗೆ ಈ ಬಗ್ಗೆ ಧ್ವನಿ ಎತ್ತುವ ವ್ಯವಧಾನವೂ ಆಗ ಇರಲಿಲ್ಲ. ಚುನಾವಣೆ ನಡೆದು ಬಿಜೆಪಿ ಆಡಳಿತ ಹಿಡಿದದ್ದೇ ಸಿಪಿಐ(ಎಂ) ಮತ್ತು ಮುಸ್ಲಿಂ ವರ್ತಕರ ಸಂಘದವರು ಪ್ರಥಮವಾಗಿ ಈ ಬಗ್ಗೆ ಧ್ವನಿ ಎತ್ತಿ ಗಮನ ಸೆಳೆದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ನೀರಿನ ದರ ಮತ್ತು ಸ್ವಯಂಘೋಷಿತ ಆಸ್ತಿ ತೆರಿಗೆ ಕುರಿತು ಮುಂದಿನ ಸಭೆಯಲ್ಲಿ ಪರಿಷ್ಕರಿಸುತ್ತೇವೆ ಎಂದು ಪತ್ರಿಕಾ ಹೇಳಿಕೆ ನೀಡಿತು. ಅಂತೆಯೇ ಜುಲೈ 20ನೇ ತಾರೀಕು ನಡೆದ ಪರಿಷತ್ ಸಭೆಯಲ್ಲಿ ನೀರಿನ ದರವನ್ನು 100ರಿಂದ 65ಕ್ಕೆ ಇಳಿಸಿ ನೀರಿನ ಪ್ರಮಾಣವನ್ನು 15,000 ಲೀಟರ್‌ಗೆ ಮಿತಿಗೊಳಿಸಿ ನಿರ್ಣಯ ಪಾಸು ಮಾಡಿತು.





ಲಾಠಿ ಚಾರ್ಜ್

ಇದಾಗಿ ಹತ್ತು ದಿನಗಳಲ್ಲೇ ಮತ್ತೆ ಸಿಪಿಐ(ಎಂ) ಪಕ್ಷ ಮತ್ತು ಡಿವೈಎಫ್‌ಐ ಸಂಘಟನೆಗಳು ಸೇರಿ ಮತ್ತೊಂದು ಸಲ ಪ್ರತಿಭಟನೆ ನಡೆಸಿದ್ದು ಅದು ಲಾಠಿ ಚಾರ್ಜ್‌ನಲ್ಲಿ ಪರ್ಯಾವಸಾನಗೊಂಡು ರಾಜ್ಯವ್ಯಾಪಿ ಪ್ರಚಾರ ಪಡೆಯಿತು. ಅಂದು ಸುಮಾರು 100 ಜನ (ಮಹಿಳೆಯರೂ ಸೇರಿ) ಪ್ರತಿಭಟನಾಕಾರರು ಸೇರಿದ್ದು ಯಾವುದೇ ಪ್ರಚೋದನಾಕಾರಿ ಭಾಷಣಗಳಿಲ್ಲದೇ ಶಾಂತರೀತಿಯಲ್ಲೇ ಪ್ರತಿಭಟನಾ ಸಭೆ ಮ.ನ.ಪಾ ದಿಡ್ಡಿ ಬಾಗಿಲಲ್ಲಿ ಸಾಗಿತ್ತು. ಭಾಷಣ ಮುಗಿದು ಇನ್ನೇನು ಮೇಯರ್‌ಗೆ ಮನವಿ ಸಲ್ಲಿಸಬೇಕು ಎನ್ನುವಷ್ಟರಲ್ಲಿ ಕಗ್ಗಂಟು ಉಂಟಾಯಿತು. ಪ್ರತಿಭಟನಾ ಸ್ಥಳಕ್ಕೆ ಬಂದು ಮೇಯರ್ ಮನವಿ ಪಡೆಯಲು ನಿರಾಕರಿಸಿದ್ದೇ ಸಮಸ್ಯೆ ಬಿಗಡಾಯಿಸಲು ಕಾರಣವಾಯಿತು. ಹೊಯ್ಕಾಟ-ಜಗ್ಗಾಟದ ನಡುವೆ ಸೆಕ್ಯೂರಿಟಿಗಾರ್ಡ್ ಕುಳಿತುಕೊಳ್ಳುವ ಕಬ್ಬಿಣದ ಕುರ್ಚಿಯೊಂದು ಛಂಗನೇ ಹಾರಿ ಸರ್ಕಲ್ ಇನ್ಸ್‌ಪೆಕ್ಟರ್ ಗಣಪತಿಯ ಕುತ್ತಿಗೆಗೆ ಬಲವಾಗಿ ತಿವಿದದ್ದು ಮಂಗನ ಬಾಲಕ್ಕೆ ಬೆಂಕಿ ಕೊಟ್ಟಂತಾಯಿತು. ಅಂದು ಸುಟ್ಟ ಬೆಕ್ಕಿನಂತೆ ಎಗರಾಡಿದ ಗಣಪತಿ ಲಾಠಿ ಚಾರ್ಜ್‌ಗೆ ಆರ್ಡರ್ ಮಾಡಿಯೇ ಬಿಟ್ಟರು. ಲಾಠಿ ಬೀಸಲು ತಯಾರಾಗಿಯೇ ಇದ್ದ ಪೊಲೀಸರು ಆಮೇಲೆ ಪ್ರತಿಭಟನಾಕಾರರು, ದಾರಿಹೋಕರು ಎಂದು ನೋಡದೆ ಕಂಡಕಂಡವರನ್ನೆಲ್ಲಾ ಅಟ್ಟಾಡಿಸಿ ಬಾರಿಸತೊಡಗಿದರು. ಪೊಲೀಸರ ಪೆಟ್ಟಿಗೆ ಕ್ಷುದ್ರರಾದವರು ರಸ್ತೆ ಮೇಲಿನ ಮಾದರಿ ಬಸ್ಸುಗಳಿಗೆ ಕಲ್ಲು ತೂರಿ ಗಾಜು ಪುಡಿ ಮಾಡಿದರು. ಯಶವಂತ ಮರೋಳಿ, ಮುನೀರ್ ಕಾಟಿಪಳ್ಳ ಸೇರಿದಂತೆ 8 ಮಂದಿ ಪ್ರತಿಭಟನಾಕಾರರ ಬಂಧನವೂ ಆಗಿ ಉಳಿದವರ ಮೇಲೆ ಕೇಸು ಜಡಿಯಲಾಯಿತು. ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ಕುರ್ಚಿ ಎಸೆದು ಬೆಂಕಿಗೆ ತುಪ್ಪ ಸುರಿದವರು, ಬಸ್ಸುಗಳಿಗೆ ಕಲ್ಲು ಹೊಡೆದವರು ಚೆಡ್ಡಿಗಳೇ ಅನ್ನೋದು ಲೇಟೆಸ್ಟ್ ತರ್ಕ.

ನೀರೇ ಇಲ್ಲ

ಮಂಗಳೂರು ಮ.ನ.ಪಾ.ದಲ್ಲಿ ನಡೆಯುತ್ತಿರುವ ಘೋರ ಭ್ರಷ್ಟಾಚಾರ ವನ್ನು ಅವಲೋಕಿಸಿದರೆ ಈ ನೀರಿನ ದರ ಏರಿಕೆ ಅನ್ನೋದು ಒಂದು ಕ್ಷುಲ್ಲಕ ವಿಚಾರ. ಅಸಲಿಗೆ ಮಂಗಳೂರು ನಗರದ ನಾಗರಿಕರಿಗೆ ಕಳೆದೆರಡು ವರ್ಷಗಳಿಂದ ಹಣಕೊಟ್ಟರೂ ನೀರು ಸಿಗದಂತಹ ಪರಿಸ್ಥಿತಿ ನಿರ್ಮಾಣ ವಾಗಿದೆ. ಏಕೈಕ ನೀರಿನ ಮೂಲ ನೇತ್ರಾವತಿ ನದಿಗೆ ತುಂಬೆಯಲ್ಲಿ ಕಟ್ಟಿರುವ ಓಬಿರಾಯನ ಕಾಲದ ವೆಂಟೆಡ್ ಡ್ಯಾಂ ಅಲ್ಲಲ್ಲಿ ಬಿರುಕು ಬಿಟ್ಟಿದೆ. ಅದಕ್ಕೆ ತೇಪೆ ಹಾಕಿ, ಪ್ರತಿದಿನ ಇಲ್ಲಿಂದ 20 ಎಂ.ಜಿ. ನೀರನ್ನು ಪಂಪು ಮಾಡಲಾಗುತ್ತದೆ. ಮಂಗಳೂರಿಗೆ ಎರಡು ದಿನಕ್ಕೊಮ್ಮೆ ನೀರು ಬಿಡುವ ಮ.ನ.ಪಾ ಎಂಸಿಎಫ್ ಕಂಪೆನಿಗೆ ಮಾತ್ರ ಧಾರಾಳತನ ತೋರಿಸುತ್ತಿದೆ. ನೀರಿಲ್ಲ ಎಂದು ಸಾರ್ವಜನಿಕರು ಜೋರು ಬೊಬ್ಬೆ ಹಾಕಿದರೆ ಟ್ಯಾಂಕರ್‌ಗಳಲ್ಲಿ ನೀರು ಸರಬರಾಜು ಮಾಡಲಾಗುತ್ತದೆ. ಹಾಗೆ ಸರಬರಾಜು ಮಾಡುವ ನೀರನ್ನು ಮ.ನ.ಪಾ.ದ ಪಂಪ್‌ಹೌಸ್‌ಗಳಿಂದಲೇ ತುಂಬಿ ತರುತ್ತಾರೆ. ಹೀಗೆ ಟ್ಯಾಂಕರ್ ಒಂದರ 6000 ಲೀಟರ್ ನೀರನ್ನು ಒಯ್ದು ಎಲ್ಲಿ ಎಷ್ಟು ಬಟವಾಡೆ ಮಾಡುತ್ತಾರೆ ಅನ್ನೋದನ್ನು ಕೇಳೋರೆ ಇಲ್ಲ. ಅದು ಕಂಟ್ರಾಕ್ಟದಾರರು ಮತ್ತು ಇಂಜಿನಿಯರ್‌ಗಳ ನಡುವಿನ ಅಂಡರ್‌ಸ್ಟ್ಯಾಂಡಿಂಗ್ ವ್ಯವಹಾರ. ಅದ್ದರಿಂದ ಈ ಬಕಾಸುರಗಳಿಗೆ ನಲ್ಲಿಯಲ್ಲಿ ನೀರು ಕೊಡುವುದಕ್ಕಿಂತ ಲಾರಿಗಳಲ್ಲಿ ನೀರು ಕೊಟ್ಟು ಕಮಾಯಿಸುವುದರಲ್ಲೇ ಆಸಕ್ತಿ. ಕಳೆದ ಎರಡು ವರ್ಷಗಳಲ್ಲಿ ಈ ರೀತಿ ನೀರನ್ನು ಟ್ಯಾಂಕರ್‌ಗಳ ಮೂಲಕ ಸಾಗಾಟ ನಡೆಸುವುದಕ್ಕೆ ಮ.ನ.ಪಾ.ದಿಂದ ಟೆಂಡರೇ ಕರೆದಿಲ್ಲ. ಕಾಂಗ್ರೆಸ್‌ನವರು ನಡೆಸಿಕೊಂಡು ಬಂದ ಈ ಹಳೆಯ ಸಂಪ್ರದಾಯವನ್ನೇ ಬಿಜೆಪಿಗಳು ಈಗ ಮುಂದುವರೆಸಿಕೊಂಡು ಬಂದಿದ್ದಾರೆ. ಅದ್ದರಿಂದ ಇದನ್ನು ಕೇಳೋರೆ ಇಲ್ಲವಾಗಿದೆ.

ಎಡಿಬಿ ಎಂಬ ಭೂತ

ಮಂಗಳೂರಿನ ಗಂಡಾಂತರಕ್ಕೊಂದೇ ಎಡಿಬಿ ಯೋಜನೆಯಲ್ಲಿ 316 ಕೋಟಿಯಷ್ಟು ಬೃಹತ್ ಮೊತ್ತದ ಹಣ ಬಿಡುಗಡೆಗೊಂಡು ಅಗ್ರಿಮೆಂಟಿನ ಪ್ರಕಾರ ಕಾಮಗಾರಿಯೂ ಮುಗಿದು ತಿಂಗಳೂ ಎಂಟಾಗಿದೆ.

ಮ.ನ.ಪಾ.ಗೆ ಕುಡಿಯುವ ನೀರಿಗೆಂದೇ ಎಡಿಬಿಯಲ್ಲಿ 108 ಕೋಟಿ ರೂ. ಖರ್ಚು ಮಾಡಲಾಗಿದೆ. ಎಂಟು ತಿಂಗಳಾದರೂ ಒಂದು ತೊಟ್ಟು ನೀರು ಮಂಗಳೂರಿಗೆ ಪ್ರಾಪ್ತಿಯಾಗಿಲ್ಲ. ನೀರಿನ ಶೇಖರಣೆಗೆ ಕೈ ಹಾಕದೆ ಈಗಿರುವ ತುಂಬೆ ವೆಂಟೆಂಡ್ ಡ್ಯಾಂನಿಂದ ಮಂಗಳೂರು ತನಕದ 12 ಕಿ.ಮೀ. ಅಂತರದಲ್ಲಿ 2 ಮೀಟರ್ ವ್ಯಾಸದ ಪೈಪುಗಳನ್ನು ಅಳವಡಿಸಿ ಮಂಗಳೂರಿನಲ್ಲಿ ಅಲ್ಲಲ್ಲಿ ಬೃಹತ್ ಟ್ಯಾಂಕು ಗಳನ್ನು ಕಟ್ಟಿ ಅಷ್ಟೂ ಹಣವನ್ನು ಮುಗಿಸಿದ್ದಾರೆ. ಆದರೆ ತುಂಬೆಯಿಂದ ಫರಂಗಿ ಪೇಟೆ ತನಕದ ಪ್ರದೇಶದಲ್ಲಿ 1 ಕಿ.ಮೀ. ಅಂತರದಲ್ಲಿ 10 ಕಡೆಗಳಲ್ಲಿ ಇನ್ನೂ ಪೈಪನ್ನೇ ಅಳವಡಿಸಿಲ್ಲ. ಕಾರಣ ಪೈಪ್ ಹಾದುಹೋಗುವ ಇಲ್ಲಿನ ಖಾಸಗಿ ಭೂಮಿಯನ್ನು ಜಿಲ್ಲಾಧಿಕಾರಿ ಮೂಲಕ ನೋಟಿಫೀಕೇಷನ್ ಮಾಡಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಈ ನಡುವೆ ಈ ಜಾಗ ರಾಷ್ಟ್ರೀಯ ಹೆದ್ದಾರಿಗೆ ಡಿನೋಟಿಫಿಕೇಷನ್ ಆಗಿದ್ದು ಇಲ್ಲಿತನಕ ಪೈಪ್ ಜೋಡಿಸಿದ್ದೂ ವ್ಯರ್ಥವಾಗಿ ಒಟ್ಟಾರೆ 108 ಕೋಟಿಯಷ್ಟು ಹಣ ನೀರಲ್ಲಿ ಹೋಮವಾಗಿ ಮಂಗಳೂರು ಮಹಾನಗರ ಪಾಲಿಕೆಗೆ ಸಾಲದ ಶೂಲವಷ್ಟೇ ಉಳಿದಿದೆ. ಈ ಎಲ್ಲಾ ಅವ್ಯವಹಾರಗಳನ್ನು ಪ್ರಶ್ನಿಸುವುದರ ಬದಲು ರಾಜಕೀಯ ಲಾಭಕ್ಕಾಗಿ ಕೇವಲ ನೀರಿನ ದರ ಏರಿಕೆ ವಿರುದ್ಧ ನಡೆಸುವ ಪ್ರತಿಭಟನೆಗಳು ತೀರಾ ಹಾಸ್ಯಾಸ್ಪದವೆನಿಸುತ್ತಿದೆ.

ಇದೀಗ ಮೊನ್ನೆಯ ಲಾಠಿ ಚಾರ್ಜ್ ಪ್ರಕರಣ ಬಳಿಕ ನಿದ್ರೆಯಿಂದ ಎಚ್ಚೆತ್ತುಕೊಂಡು ಕಣ್ಣೊರೆಸುತ್ತಾ 'ನೀರಿನ ದರ ಇಳಿಸದಿದ್ದರೆ ಮಂಗಳೂರು ಬಂದ್‌ಗೆ ಕರೆ ನೀಡುತ್ತೇವೆ' ಎಂದು ಕಾಂಗ್ರೆಸ್ ತೊದಲುತ್ತಿದೆ. ವಾಸ್ತವದಲ್ಲಿ ಈ ಎಡಿಬಿ ಭೂತವನ್ನು ಕರೆತಂದಿದ್ದೇ ಕಾಂಗ್ರೆಸ್ ಎಂಬುದನ್ನು ಅದು ಮರೆತಂತಿದೆ.

■ ಪ್ರಕಾಶ್ ಪಿಂಟೋ



ಖಾನಾಪುರ:

ಮಂತ್ರವಾದಿಯೊಬ್ಬ ಶಾಸಕನಾದ ಕಥೆ

> ಈತನೇನು ಚುನಾಯಿಸಿ ಬರುವ ಆಸಾಮಿಯಲ್ಲ. ಏಕೆಂದರೆ ಈತನ ನಿಂಬೆಕಾಯಿ ಕೈಂಕರ್ಯ ಇಡೀ ಖಾನಾಪುರ ತಾಲೂಕಿಗೆ ಗೊತ್ತು. ಆದರೆ ಈ ಸಲ ಇಲ್ಲಿ ಸ್ಪರ್ಧಿಸಿದ್ದವರ ಸಂಖ್ಯೆ ಭರ್ತಿ 23. ಹಾಗಾಗಿ ಮತಗಳು ಹಂಚಿ ಹೋಗಿ ಈ ಮಹಾಮಂತ್ರವಾದಿ ಆರಿಸಿ ಬಂದುಬಿಟ್ಟ.

ಒಂದು ಕಾಲದಲ್ಲಿ ಈತ ನಿಂಬೆಕಾಯಿ ಮಂತ್ರಿಸಿ ಕೊಡುವ ಮಂತ್ರವಾದಿಯಾಗಿದ್ದ. ಮಾರುದ್ದ ಕೂದಲು ಬಿಟ್ಟುಕೊಂಡು, ಹಣೆಗೆ ಕುಂಕುಮ ಬಳಿದುಕೊಂಡು 'ಓಂ ಭದ್ರಕಾಳಿ' ಅನ್ನುತ್ತಾ ದೇವರ ಮನೆಯಲ್ಲಿ ಕುಳಿತುಕೊಳ್ಳುತ್ತಿದ್ದ ಈ ಮಾಟಗಾರ ಈಗ ವಿಧಾನ ಪರಿಷತ್ ಸದಸ್ಯ. ಈತ ಬೇರೆ ಯಾರೂ ಅಲ್ಲ ಖಾನಾಪುರ ಕ್ಷೇತ್ರವನ್ನು ಎಂಇಎಸ್ ಕಪಿಮುಷ್ಠಿಯಿಂದ ಬಿಡಿಸಿಕೊಟ್ಟವ ಎಂದು ಹೊಗಳಿಸಿಕೊಳ್ಳುತ್ತಿರುವ ಶಾಸಕ ಪ್ರಹ್ಲಾದ ರೇಮಾನಿ.

ಇಲ್ಲಿವರೆಗೆ ಎಂಇಎಸ್ ಗೆದ್ದು ಬರುತ್ತಿದ್ದ ಈ ಕ್ಷೇತ್ರದಲ್ಲಿ ಬಿಜೆಪಿ ಜಯಗಳಿಸಿದಾಗ ಇನ್ನು ಮುಂದಾದರೂ ತಮ್ಮ ಸಮಸ್ಯೆಗಳು ಪರಿಹಾರ ಆಗುತ್ತವೆ ಎಂದು ಕ್ಷೇತ್ರದ ಜನ ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ ಅಸಲಿಗೆ ಈತ ಜನರ ಆಸೆ ಹಾಗೂ ನಿರೀಕ್ಷೆಗಳನ್ನು ಬುಡಮೇಲು ಮಾಡಿಬಿಟ್ಟ.

ಬಿಜೆಪಿ ಶಾಸಕನೋ, ಎಂಇಎಸ್ ಕಾರ್ಯಕರ್ತನೋ?

ಹೌದು, ಖಾನಾಪುರ ಜನತೆ ಇಂತಹ ಪ್ರಶ್ನೆಯೊಂದನ್ನು ಕೇಳುತ್ತಿರುವುದಂತೂ ಸತ್ಯ. ಏಕೆಂದರೆ, ರೇಮಾನಿ ಆಯ್ಕೆಗೊಂಡಿದ್ದು ಬಿಜೆಪಿಯಿಂದಾದರೂ ವರ್ತಿಸುತ್ತಿರುವುದು ಮಾತ್ರ ಮಹಾರಾಷ್ಟ್ರ ಏಕೀಕರಣ ಸಮಿತಿಯ ಪಕ್ಕಾ ಕಾರ್ಯಕರ್ತನಂತೆ. ಮೂಲತಃ ಮಂತ್ರವಾದಿಯಾದ ಈತ ಕನ್ನಡಿಗರನ್ನು ಕಂಡರೆ ಅದೇಕೋ ಕುಂಡಿಗೆ ಚೇಳು ಕಡಿದವರಂತೆ ಆಡುತ್ತಾನೆ. ಕನ್ನಡಿಗರು ಬಂದರ ತನ್ನ ಹತ್ತಿರಕ್ಕೂ ಸುಳಿಯಲು ಬಿಡುವುದಿಲ್ಲ.

ಇದಕ್ಕೆ ಕಾರಣ ಇಲ್ಲದಿಲ್ಲ. ಮೂಲತಃ ಮರಾಠಿ ಭಾಷಿಕ ಗ್ರಾಮದವನಾದ ಈತನ ನರನಾಡಿಗಳಲ್ಲಿ ಮರಾಠಿ ಪ್ರೇಮ ಮತ್ತು ಕನ್ನಡ ದ್ವೇಷದ ರಕ್ತ ಹರಿದಾಡುತ್ತಿದೆ. ಮೇಲ್ನೋಟಕ್ಕಾದರೂ ಕನ್ನಡಿಗರ ಬಗ್ಗೆ ಸಹಾನುಭೂತಿ ತೋರುವ ಕನಿಷ್ಠ ವ್ಯವಧಾನ ಈತನಿಗಿಲ್ಲ.

ಇತ್ತೀಚೆಗಂತೂ ಈ ರೇಮಾನಿ ಶುದ್ಧ ಮಹಾರಾಷ್ಟ್ರವಾದಿಯಂತೆ ವರ್ತಿಸುತ್ತಿದ್ದಾನೆ. ಸರಿಯಾಗಿ ಕನ್ನಡ ಮಾತನಾಡಲು ಬಾರದ ಈತ ಕನ್ನಡಿಗರು ಏನಾದರೂ ಸೌಲಭ್ಯ ಕೇಳಿಕೊಂಡು ಬಂದರೆ 'ಜಾಬೇ ಪೋದರಿಚಾನೂ' ಅಂತಾನೆ.

ಈತ ಮಂತ್ರವಾದಿ!

ರೇಮಾನಿ ಮೂಲತಃ ಒಬ್ಬ ಮಂತ್ರವಾದಿ. ಕಂಡಕಂಡ ಮುಗ್ದರಿಗೆ ನಿಂಬೆಹಣ್ಣು, ತಾಯತ ಹಾಗೂ ಯಕ್ಷ ದಾರಗಳನ್ನು ಮಂತ್ರಿಸಿ ಕೊಟ್ಟು ಅವರಿಂದ ದುಡ್ಡು ಕೀಳುವ ಕಾಯಕ ಮಾಡುತ್ತಿದ್ದ. ಅದ್ಯಾರೋ ಸಿಮೆಂಟ್ ವ್ಯಾಪಾರಿಯೊಬ್ಬ ಈತನ ಬಳಿ ಹೋದಾಗ ಆತ ನಿನಗೆ ರಾಜಕಾರಣದಲ್ಲಿ ಬೆಳೆಯುವ ಯೋಗ ಕೊಡಿಸ್ತಿನಿ ಅಂತಾ ಲಿಂಬೆಹಣ್ಣು ಮಂತ್ರಿಸಿಕೊಟ್ಟಿದ್ದನಂತೆ. ಆದಾದ ಕೆಲವೇ ದಿನಗಳಲ್ಲಿ ತನ್ನ ಸಿಮೆಂಟ್ ಕಳ್ಳ ದಂಧೆ ಮೂಲಕ ಬಿಜೆಪಿಯಲ್ಲಿ ಬೆಳೆದು ಸಂಸದನೂ ಆದ ಆ ವ್ಯಾಪಾರಿ ಈ ಮಂತ್ರವಾದಿಯ ಉಪಕಾರಕ್ಕೆ ಪ್ರತಿಯಾಗಿ 'ನಿನ್ನನ್ನು ಖಾನಾಪುರ ಶಾಸಕನನ್ನಾಗಿ ಮಾಡ್ತೀನಿ' ಎಂದು ಅವನ ಕೂದಲು ಬೋಳಿಸಿ ರಾಜಕೀಯಕ್ಕೆ ತಂದ. ಅಲ್ಲಿಂದಾಚೆಗೆ ಈತ ಪಕ್ಕಾ ರಾಜಕೀಯ ಮಂತ್ರವಾದಿಯಾಗಿ ಬೆಳೆದು ಇವತ್ತು ಖಾನಾಪುರಕ್ಕೆ ಒಕ್ಕರಿಸಿಕೊಂಡಿದ್ದಾನೆ. ಹೀಗೆ ಈತನನ್ನು ಬಿಜೆಪಿಗೆ ಕರೆತಂದ ಸಿಮೆಂಟ್ ವ್ಯಾಪಾರಿ ಬೇರೆ ಯಾರೂ ಅಲ್ಲ, ಸಂಸದ ಸುರೇಶ ಅಂಗಡಿ!

ತನಗೆ ನಿಂಬೆಹಣ್ಣು ಮಂತ್ರಿಸಿ ಕೊಟ್ಟಿದ್ದ ಮಂತ್ರವಾದಿ ರೇವಾನಿಗೆ ದಕ್ಷಿಣೆಯ ರೂಪದಲ್ಲಿ ಬಿಜೆಪಿ ಟಿಕೆಟ್ ಕೊಡಿಸಿದ್ದ ಸುರೇಶ್ ಅಂಗಡಿ. ಆದರೆ, ನಿಂಬೆಹಣ್ಣು ಮಂತ್ರಿಸಿಕೊಡುವ ಮೂಲಕ ಜಗತ್ತಿನ ಜನರ ನಸೀಬನ್ನು ನೆಟ್ಟಗೆ ಮಾಡುವ ರೇಮಾನಿಯ ನಸೀಬೇ ಚೆನ್ನಾಗಿರಲಿಲ್ಲ. ಹಾಗಾಗಿ ಕಳೆದ ಎಲೆಕ್ಷನ್‌ನಲ್ಲಿ ಆತ ಮಕಾಡೆ ಮಲಗಿಬಿಟ್ಟ. ಕನಿಷ್ಠ ಮೂಲಭೂತ ಸೌಲಭ್ಯಗಳೂ ಇಲ್ಲದೇ ಜಂಜಿಡಿದು ಹೋಗಿದ್ದ ಖಾನಾಪುರ ತಾಲೂಕನ್ನು ಸುಧಾರಿಸುವುದಾಗಿ ಹೇಳುತ್ತಾ ಗಣಿಧಣಿ ಅನಿಲ ಲಾಡ್ ಖಾನಾಪುರಕ್ಕೆ ಬಂದಿದ್ದೇ ತಡ ಸುರೇಶ ಅಂಗಡಿ ಬುಡದಲ್ಲಿ ಕೊಡಲಿ ಆಡಿಸಿದಂತಾಯಿತು. ತಡಮಾಡದೇ ಅನಂತಕುಮಾರ್ ಹಾಗೂ ಸದಾನಂದಗೌಡರ ಬಳಿ ಹೋಗಿ ಈ ಲಾಡ್ ನಮ್ಮ ಕ್ಷೇತ್ರಕ್ಕೆ ಬಂದರೆ ನಮ್ಮನ್ನೆಲ್ಲ ತುಳಿದು ಬಿಡ್ತಾನೆ ಅಂತ ಅತ್ತೂ ಕರೆದು ಕಾಲು ಹಿಡಿದು ಮತ್ತೆ ಈ ಮಂತ್ರವಾದಿಗೆ ಟಿಕೆಟ್ ತಂದು ಕೊಟ್ಟ.

ಈತನೇನು ಚುನಾಯಿಸಿ ಬರುವ ಆಸಾಮಿಯಲ್ಲ. ಏಕೆಂದರೆ ಈತನ ನಿಂಬೆಕಾಯಿ ಕೈಂಕರ್ಯ ಇಡೀ ಖಾನಾಪುರ ತಾಲೂಕಿಗೆ ಗೊತ್ತು. ಆದರೆ ಈ ಸಲ ಇಲ್ಲಿ ಸ್ಪರ್ಧಿಸಿದ್ದವರ ಸಂಖ್ಯೆ ಭರ್ತಿ 23. ಹಾಗಾಗಿ ಮತಗಳು ಹಂಚಿ ಹೋಗಿ ಈ ಮಹಾಮಂತ್ರವಾದಿ ಆರಿಸಿ ಬಂದುಬಿಟ್ಟ.

ಇವನೂ ಒಂಥರಾ ಪ್ರಮೀಳಾ ನೇಸರ್ಗಿ ಕುಲದವನು. ಏನೇ ಕೆಲಸ ಮಾಡಬೇಕೆಂದರೂ ನಿಂಬೇಕಾಯಿಗೆ ಕುಂಕುಮ ಹಚ್ಚಿ ಅದಕ್ಕೊಂದು ಮುತ್ತುಕೊಟ್ಟ ನಂತರವೇ ಕೆಲಸಕ್ಕೆ ಕೈಹಾಕುವುದು. ಈಗ ಶಾಸಕನಾದ ಮೇಲೂ ತನ್ನ ನಿಂಬೆಕಾಯಿ ದಂಧೆಯನ್ನು ಮಾತ್ರ ಬಿಟ್ಟಿಲ್ಲ. ಯಾರಾದರೂ ಸಣ್ಣ ಪತ್ರಕ್ಕೂ ಸಹಿ ಮಾಡಿಕೊಳ್ಳಲು ಬಂದರೆ ಮೊದಲು ಈತ ಜೇಬಿಗೆ ಕೈಹಾಕಿ, ಲಿಂಬೆಕಾಯಿ ಹಿಡಿದು, ಕೇಳಿ ನೋಡ್ತಾನೆ. ಆ ಬಳಿಕವೇ ಮುಂದಿನ ವಿಚಾರ.

ನಿಂಬೆಕಾಯಿ ನೆರಳಿನಲ್ಲಿ ಖದೀಮರ ಹಿಂಡು!

ರೇಮಾನಿಯ ನಿಂಬೆಕಾಯಿ ಮಹಿಮೆ ಇಷ್ಟಕ್ಕೆ ನಿಲ್ಲುವುದಿಲ್ಲ, ಈತನ ನಿಂಬೇಕಾಯಿ ಹೆಸರಿನಲ್ಲೇ ಮಾಡಬಾರದ ಹಲ್ಕಟ್ ಕೆಲಸಗಳನ್ನು ಮಾಡುವ ದೊಡ್ಡ ಹಿಂಡೇ ಖಾನಾಪುರ ತಾಲೂಕಿನಲ್ಲಿ ಈತನ ಹಿಂದಿದೆ. ಅವರೆಲ್ಲ ಸೇರಿಕೊಂಡು ಅದೆಷ್ಟೋ ಕನ್ನಡ ಶಾಲೆ ಶಿಕ್ಷಕಿಯರಿಗೆ ಕೊಡಬಾರದ ಕಾಟ ಕೊಡುತ್ತಿದ್ದಾರೆ. ಅದೆಲ್ಲವೂ ಈತನ ನಿಂಬೆಕಾಯಿಯ ಮಹಿಮೆ ಎಂದರೂ ತಪ್ಪಲ್ಲ.

ಈ ಹಿಂದೆ ಶಿಕ್ಷಕರ ಸಂಘದ ಅಧ್ಯಕ್ಷನಾಗಿದ್ದ ಈರಣ್ಣಾ ಶೆಟ್ಟೆಣ್ಣವರ ಈಗ ಕಸಮಳಗಿ ಶಾಲೆಯಲ್ಲಿ ಶಿಕ್ಷಕನಾಗಿದ್ದಾನೆ. ಆದರೆ ಈತ ಶಾಲೆಯಲ್ಲಿ ಇರುವುದಕ್ಕಿಂತ ಪಕ್ಕದ ಬೀದಿ ಪಟ್ಟಣದಲ್ಲಿರುವ ಬಾರ್‌ನಲ್ಲಿಯೇ ಹೆಚ್ಚಾಗಿ ಇರುತ್ತಾನೆ. ರೇಮಾನಿ ಕೃಪೆಯಿರುವ ಈತ ಸುಂದರವಾದ ಶಿಕ್ಷಕಿಯರ ಬೆನ್ನ ಹಿಂದೆ ಬೀಳ್ತಾನೆ. ಅಷ್ಟೇ ಏಕೆ, ರೇಮಾನಿಯ ಹೆಸರನ್ನು ಹೇಳಿಕೊಂಡು ಖಾನಾಪುರ ಬಿಇಒನನ್ನೆ ಹೆದರಿಸಿ ಹಫ್ತಾ ವಸೂಲಿ ಮಾಡಿತ್ತಾನೆ.

ಈ ಹಿಂದೆ ಖಾನಾಪುರದಲ್ಲಿ ಸರ್ವಾಧಿಕಾರಿಯಂತೆ ಮೆರೆದ ದಿವಂಗತ ಅಶೋಕ ಪಾಟೀಲನಲ್ಲಿದ್ದ ಎಲ್ಲ ದುರ್ಗುಣಗಳೂ ರೇವಮಾನಿಯಲ್ಲಿವೆ. ಒಂದು ವ್ಯತ್ಯಾಸವೆಂದರೆ, ಅಶೋಕ ಪಾಟೀಲ ಎಲ್ಲ ಅಕ್ರಮಗಳನ್ನು ತಾನೇ ಮಾಡುತ್ತಿದ್ದ. ಆದರೆ ರೇಮಾನಿ ತನ್ನ ಪುಂಡರಿಂದ ಮಾಡಿಸುತ್ತಾನೆ. ಈ ಹಿಂದೆ ಈ ತಾಲೂಕಿನಲ್ಲಿ ದೊಡ್ಡ ಸುದ್ದಿ ಮಾಡಿದ್ದ ಯುವತಿಯರ ಕಳ್ಳ ಮಾರಾಟ ಜಾಲ ಈಗಲೂ ಸದ್ದುಗದ್ದಲವಿಲ್ಲದೇ ಮುಂದುವರೆಯುತ್ತಿದೆ. ಇದೆಲ್ಲ ಗೊತ್ತಿದ್ದರೂ ಇಲ್ಲಿನ ಪೊಲೀಸರು ಕಣ್ಮುಚ್ಚಿ ಕುಳಿತಿದ್ದಾರೆ. ಏಕೆಂದರೆ ಅವರೂ ಕೂಡ ಒಂದೆಡೆ ರೇಮಾನಿಯ ಮಂತ್ರದ ನಿಂಬೆಹಣ್ಣಿಗೆ ಹೆದರಿದ್ದರೆ, ಇನ್ನೊಂದೆಡೆ ರೇಮಾನಿಯ ಅಮೇಧ್ಯವನ್ನೂ ಪ್ರತೀ ತಿಂಗಳು ತಿನ್ನುತ್ತಾರೆ. ಹೀಗಾಗಿ ಎಗ್ಗಿಲ್ಲದೆ ಮುಗ್ಧ ಬಡ ಹುಡುಗಿಯರು ಗೋವಾದ ಕಾಮುಕರಿಗೆ ರವಾನೆಯಾಗಿ ಬಲಿಯಾಗುತ್ತಿರುವುದು ನಡೆದೇ ಇದೆ.


ರೇಮಾನಿಯ ಭ್ರಷ್ಟ ಜಾಲ ಇಲ್ಲಿಗೇ ನಿಲ್ಲುವುದಿಲ್ಲ. ಪ್ರತಿಯೊಂದು ಗ್ರಾಮ ಪಂಚಾಯ್ತಿಂದ ಇಂತಿಷ್ಟು ಅಂತ ಕಮೀಷನ್ ಎಂದು ಫಿಕ್ಸ್ ಮಾಡಿಬಿಟ್ಟಿದ್ದಾನೆ. ಇದರಿಂದ ಹಳ್ಳಿಗಳಿಗೆ ಮೂಲಭೂತ ಸೌಲಭ್ಯಗಳಿಗಾಗಿ ಮಂಜೂರಾದ ಹಣದಲ್ಲಿ ಅರ್ಧ ರೇಮಾನಿಯ ಜೇಬು ಸೇರಿಬಿಡುತ್ತದೆ. ಇನ್ನು ಗ್ರಾಮಗಳು ಉದ್ಧಾರವಾಗಬೇಕು ಎಂದರೆ ಹೇಗಾಗುತ್ತದೆ ಹೇಳಿ? ಈ ತಾಲೂಕಿನ ರಸ್ತೆಗಳನ್ನು ನೋಡಿದರೆ ಸಾಕು ಇದು ಅರ್ಥವಾಗಿ ಹೋಗುತ್ತದೆ. ಆದರೆ ಸರ್ಕಾರಿ ದಾಖಲೆಗಳಲ್ಲಿ ಮಾತ್ರ ಲಕ್ಷಾಂತರ ರೂಪಾಯಿ ಖರ್ಚಾಗಿ ರಸ್ತೆಗಳೆಲ್ಲಾ ನಿಗಿನಿಗಿ ಹೊಳೆಯುತ್ತವೆ.


ತನ್ನ ಕ್ಷೇತ್ರದ ಜನರಿಗೆ ಕನಿಷ್ಠ ಕುಡಿಯುವ ನೀರನ್ನು ಒದಗಿಸಲಾಗದ ಈ ಹರಾಮಕೋರ ಶಾಸಕನಿಂದ ಇನ್ನೇನು ಜನ ನಿರೀಕ್ಷೆಯಿಟ್ಟುಕೊಂಡಾರು?

■ ಮಧುಬಾಲಾ

ರಾಮನಗರ ಜಿಲ್ಲಾ ಕಸಾಪ ಚುನಾವಣೆ

ಚಿಕ್ಕಪುಟ್ಟೇಗೌಡ V/s ಶಿವನಂಜಯ್ಯ


ಚಿಕ್ಕಪುಟ್ಟೇಗೌಡ


ಶಿವನಂಜಯ್ಯ

ರಾಮನಗರ ಜಿಲ್ಲೆ ಹೊಸದಾಗಿ ರಚಿತವಾದುದರಿಂದ ಈಗ ಇಲ್ಲಿಯ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಅಸ್ತಿತ್ವಕ್ಕೆ ಬಂದಿದ್ದು ಪ್ರಥಮ ಜಿಲ್ಲಾ ಕಸಾಪದ ಅಧ್ಯಕ್ಷ ಗಾದಿಗಾಗಿ ತ್ರಿಕೋನ(ಣ) ಸ್ಪರ್ಧೆ ಏರ್ಪಟ್ಟಿದೆ. ಹೆಸರು, ಪ್ರಚಾರ, ಸಂಪರ್ಕದ ದೃಷ್ಟಿಯಿಂದ ನೂರು ಮೈಲಿಯಷ್ಟು ವೇಗವಾಗಿರುವ ಚಿಕ್ಕಪುಟ್ಟೇಗೌಡರು ಕೃಷಿ ಇಲಾಖೆಯ ಅಧಿಕಾರಿ. ಮೇಲಾಗಿ ಹತ್ತು ಹಲವು ಸಂಘಟನೆಗಳ ಒಡನಾಟ, ಸಂಪರ್ಕ ಇವರನ್ನು 'ಫೇವರೇಟ್' ಗೆಲ್ಲುವ ಕುದುರೆಯನ್ನಾಗಿ ಮುಂಚೂಣಿಯಲ್ಲಿ ನಿಲ್ಲಿಸಿದೆ.

ಚಿಕ್ಕಪುಟ್ಟೇಗೌಡರ ನೇರ ಪ್ರತಿಸ್ಪರ್ಧಿ ಮಳವಳ್ಳಿ ಕಾಲೇಜಿನ ಮಾಜಿ ಪ್ರಾಂಶುಪಾಲರಾದ ಪ್ರೊ. ಶಿವನಂಜಯ್ಯನವರು ವ್ಯಕ್ತಿಗತ ಬಿಗುಮಾನ, ಪ್ರತಿಷ್ಠೆ ಮೈತುಂಬಿಕೊಂಡು ಸ್ಪರ್ಧಿಸಿರುವ ಪ್ರೊ. ಶಿವನಂಜಯ್ಯ ಈ ಹಿಂದೆ ರಾಮನಗರ ತಾಲ್ಲೂಕು ಕಸಾಪ ಅಧ್ಯಕ್ಷರಾಗಿದ್ದವರು. ಇವರು ತಾಲ್ಲೂಕು ಕಸಾಪ ಅಧ್ಯಕ್ಷರಾಗಿ 'ಶೂನ್ಯ ಸಂಪಾದನೆ'ಯ ದಾಖಲೆ ಬಿಟ್ಟಿರುವುದರಿಂದ ಸ್ವಯಂ ರಾಮನಗರ ತಾಲ್ಲೂಕಿನ ಚಿಕ್ಕಪ್ಪಾಜಿ (ಮಾಜಿ ಅಧ್ಯಕ್ಷ ಕಸಾಪ) ಭೈರೇಗೌಡ, ಪಾದಹಳ್ಳಿ ರಾಜು ಇನ್ನೂ ಮುಂತಾದವರು "ಶಿವನಂಜಯ್ಯನವರನ್ನು ಮತ್ತೊಮ್ಮೆ ಬೆಂಬಲಿಸುವ ತಪ್ಪು ಮಾಡುವುದಿಲ್ಲ" ಎಂದು ಬಹಿರಂಗವಾಗೇ ಹೇಳಿಕೊಳ್ಳುತ್ತಿದ್ದಾರೆ. ರಾಮನಗರ ತಾಲ್ಲೂಕಿನಲ್ಲಿ 259 ಸದಸ್ಯರಿದ್ದು 59 ಸದಸ್ಯರ ವಿಶ್ವಾಸ ಗಳಿಸುವಲ್ಲೂ ವಿಫಲರಾಗಿರುವ ಪ್ರೊ. ಶಿವನಂಜಯ್ಯನವರಿಗೆ ಕಾಲೇಜು ಅಧ್ಯಾಪಕರು, ಪಾರ್ಟಿ ಫ್ರೆಂಡ್ಸ್‌ಗಳಷ್ಟೇ ಮತ ಹಾಕಬೇಕಾದ ಅನಿವಾರ್ಯತೆ ಇದೆ.


ಡಾ. ಮುನಿರಾಜಪ್ಪ

ಇನ್ನು ಹೆಸರಿಗೆ, ಪ್ರಚಾರಕ್ಕೆ, ಚೌಕಾಸಿಗೆ ಜಿಲ್ಲಾ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮಾಗಡಿಯ ಕನ್ನಡ ಕುಮಾರ ವ್ಯಕ್ತಿಗತವಾಗಿ ಒಳ್ಳೆಯ ಹೆಸರು ಬೆಳೆಸಿಕೊಳ್ಳದೆ ಇರುವುದರಿಂದ ಮಾಗಡಿಯ ಪತ್ರಕರ್ತ ಮಾರಣ್ಣ, ಗಣೇಶಚಾರಿ, ಹಾಲಿ ಕಸಾಪ ಅಧ್ಯಕ್ಷ ಗಂ. ದಯಾನಂದ, ಶಿಕ್ಷಕರಾದ ರಾಮಸ್ವಾಮಿ, ಡಾ. ಮುನಿರಾಜಪ್ಪ, ಪತ್ರಕರ್ತ ಶಿವಲಿಂಗಯ್ಯ, ಪುರಸಭಾ ಮಾಜಿ ಅಧ್ಯಕ್ಷೆ ಕಲ್ಪನಾ ಶಿವಣ್ಣ ಬಹಿರಂಗವಾಗೇ ಚಿಕ್ಕಪುಟ್ಟೇಗೌಡರ ಬೆಂಬಲಕ್ಕೆ ನಿಂತಿದ್ದಾರೆ. ರಾಮನಗರ ತಾಲ್ಲೂಕಿಗಿಂತಲೂ ಕಡಿಮೆ ಸದಸ್ಯತ್ವ ಹೊಂದಿರುವ (ಕೇವಲ 221 ಸದಸ್ಯರು) ಮಾಗಡಿ, ಕನ್ನಡಕುಮಾರ್ ಬೆಂಬಲಕ್ಕೆ ಹೃತ್ಪೂರ್ವಕವಾಗಿ ನಿಲ್ಲದೇ ಇರುವುದು ಚಿಕ್ಕಪುಟ್ಟೇಗೌಡರ ಗೆಲುವು ನಿಶ್ಚಿತವೆನಿಸಿದೆ.

ಚನ್ನಪಟ್ಟಣದಲ್ಲಿ 659 ಸದಸ್ಯರಿದ್ದು ಇಡೀ ಜಿಲ್ಲೆಯಲ್ಲೇ ಅತ್ಯಧಿಕ ಸದಸ್ಯರನ್ನು ಹೊಂದಿರುವ ತಾಲ್ಲೂಕು. ಚಿಕ್ಕಪುಟ್ಟೇಗೌಡರು ಇದೇ ತಾಲ್ಲೂಕಿನ ಬಂಡೂರ ವರಗೆರೆಹಳ್ಳಿ ಗ್ರಾಮದವರು. ಪತ್ರಕರ್ತ ಸು.ತ. ರಾಮೇಗೌಡ, ಪ್ರಾಂಶುಪಾಲರಾದ ಶಿವರಾಮೇಗೌಡ, ಕಸಾಪ ಅಧ್ಯಕ್ಷ ಶಿವಪ್ಪ, ಅಧ್ಯಾಪಕ ಅಂಕಪ್ಪ, ತಿಪರೇಗೌಡ, ಸಿಂ.ಲಿಂ. ನಾಗರಾಜ್, ಮಾಜಿ ಪಂಚಾಯ್ತಿ ಸದಸ್ಯ ನಾಗೇಶ್, ಮುದ್ದೇಶ್ ಮತ್ತಿತರರು ಚಿಕ್ಕಪುಟ್ಟೇಗೌಡರ ಪರ ಈಗಾಗಲೇ ಪ್ರಚಾರದಲ್ಲಿ ತೊಡಗಿದ್ದಾರೆ. ಚನ್ನಪಟ್ಟಣದ ಶೇ. 80 ಭಾಗ ಸದಸ್ಯರು ಚಿಕ್ಕಪುಟ್ಟೇಗೌಡರ ಪರವಿರುವುದರಿಂದ ಕನಕಪುರದಲ್ಲಿ ಪ್ರಭಾವಿ ನಾಯಕರಾದ ವಿಜಯ್‌ದೇವ್, ಮಾಜಿ ಜಿಲ್ಲಾ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಲ್ಲೇಗೌಡ ಬೆಸಗರಹಳ್ಳಿ, ಹಾಲಿ ಕಸಾಪ ಅಧ್ಯಕ್ಷ ಕಾ. ಪ್ರಕಾಶ್, ಆರ್.ವಿ. ನಾರಾಯಣ ಇನ್ನೂ ಮುಂತಾದವರು ಚಿಕ್ಕಪುಟ್ಟೇಗೌಡರ ಪರ ನಿಂತಿದ್ದಾರೆ.



ಕನ್ನಡಕುಮಾರ

ಜಿಲ್ಲೆಯಲ್ಲಿ ಒಕ್ಕಲಿಗ ಲಿಂಗಾಯತ ಎಂಬ ಎರಡು ಗುಂಪುಗಳಾಗಿದ್ದು ಒಕ್ಕಲಿಗ ಗುಂಪಿನ ಡಾ. ನಲ್ಲೂರು ಪ್ರಸಾದ್ ಬಳಗ ದೊಡ್ಡದಿದೆ. ಚಿಕ್ಕಪುಟ್ಟೇಗೌಡರು ನಲ್ಲೂರು ಬಳಗದಲ್ಲಿ ಕಾಣಿಸಿಕೊಂಡಿದ್ದರೆ, ಪ್ರೊ. ಶಿವನಂಜಯ್ಯ ಡಾ. ಸಿ. ವೀರಣ್ಣನವರ ಗುಂಪಿನಿಂದ ಗುರುತಿಸಿಕೊಂಡಿದ್ದಾರೆ.

ಇಲ್ಲೂ ಗುಂಡು ತುಂಡಿನ ಹಗಲೊತ್ತಿನ ಪಾರ್ಟಿಗಳು ಜೋರಾಗಿ ಜರುಗುತ್ತಿದ್ದು ಕಸಾಪ ಚುನಾವಣೆಯನ್ನು ರಾಜಕಾರಣಿಗಳಂತೆ ಭರ್ಜರಿ ಪ್ರಚಾರ, ಜಾತಿ ರಾಜಕೀಯ, ಪಕ್ಷ ರಾಜಕೀಯ ವಿಜೃಂಭಿಸುತ್ತಿದೆ. ಜಿಲ್ಲೆಯ ಕಸಾಪ ಸದಸ್ಯರಿಗಿರುವ ದಾರಿ ಈಗ ಹೆಚ್ಚು ಕ್ರಿಯಾಶೀಲವುಳ್ಳ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬಲ್ಲ ಉತ್ತಮ ಸಂಘಟಕರನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ.

■ ಮಂಜುನಾಥ್ ನಿಲಸೋಗೆ

ಕಲಬುರ್ಗಿ ಕನ್ನಡ ಸಾಹಿತ್ಯ ಅಧ್ಯಕ್ಷ ಗಾದಿ ಏರುವವರು ಯಾರು?



ವೀರಭದ್ರ ಸಿಂಪಿ

ಹಿಂದಿನ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗಳು ನಡೆದರೆ ಅದಕ್ಕೆ ಅಂತಹ ತುರುಸಿನ ಸ್ಪರ್ಧೆ ಇರುತ್ತಿರಲಿಲ್ಲ. ಆದರೆ ಕ್ವಾಲಿಟಿಯಂತೂ ಇರುತ್ತಿತ್ತು. ಸಾಹಿತ್ಯವನ್ನು ತಮ್ಮ ಉಸಿರಾಗಿಸಿಕೊಂಡ ವ್ಯಕ್ತಿಗಳು ಮಾತ್ರ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುತ್ತಿದ್ದರು. ಆದರೆ ಯಾವಾಗ ಸಾಹಿತ್ಯದ ಮೂಲಕವೂ ರಾಜಕೀಯ ಮಾಡಬಹುದು ಎಂದು ಹಲವರು ಅರಿತರೋ ಆಗ ಸಾಹಿತ್ಯೇತರರೂ ಸಾಹಿತ್ಯ ಪರಿಷತ್ತಿನ ಗಾದಿಯ ಮೇಲೆ ಕಣ್ಣಿಟ್ಟು 'ನಾನೂ ಏಕೆ ಅಲ್ಲಿ ಕೂಡಬಾರದು?' ಎಂಬ ಹ್ಯಾವ ಹಚ್ಚಿಕೊಂಡರು. ಇದರಿಂದಾಗಿ ಇವತ್ತು ಈ ಚುನಾವಣೆಗಳೂ ಗಬ್ಬುನಾರಲಾರಂಭಿಸಿವೆ.

ಅದೇನೇ ಇರಲಿ, ಕಲಬುರ್ಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದ ವೀರಭದ್ರ ಸಿಂಪಿ ಸಾಹಿತಿ ಅಲ್ಲದಿದ್ದರೂ ಒಬ್ಬ ಸಾಹಿತ್ಯ ಪ್ರೇಮಿಯಾಗಿದ್ದ. ಯುವಕರ ದಂಡನ್ನು ತನ್ನ ಬೆನ್ನ ಹಿಂದೆ ಕಟ್ಟಿಕೊಂಡು ಸಾಹಿತ್ಯ ಕಟ್ಟುವ ಕೆಲಸವನ್ನು ಈ ಹಿಂದೆಯೂ ಮಾಡುತ್ತ ಬಂದಿದ್ದ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದ ತರುವಾಯ ಅದನ್ನು ಇನ್ನಷ್ಟು ಉತ್ಸಾಹದಿಂದ ಮಾಡಿದ್ದಾನೆ. ಸಾಹಿತ್ಯ ಪರಿಷತ್ತಿನ ಕನ್ನಡ ಭವನ ಇದೀಗ ಗಟ್ಟಿಯಾಗಿ ಹಾಗೂ ಹಸಿರಿನಿಂದ ನಳನಳಿಸುತ್ತಿರುವುದರ ಹಿಂದೆಯೂ ಸಿಂಪಿಯ ಕೈವಾಡವಿದೆ. ಈತ ಜಿಲ್ಲೆಯ ತುಂಬೆಲ್ಲ ಸಾಹಿತ್ಯ ಧ್ವನಿ ಹಬ್ಬುವಂತೆ ಮಾಡಿದ್ದಾನೆ. ಸಮ್ಮೇಳನಗಳನ್ನೂ ಮಾಡಿಸಿದ್ದಾನೆ. ಅರ್ಧಕ್ಕೆ ನಿಂತಿದ್ದ ಬಾಪುಗೌಡ ಭವನವನ್ನು ಒಂದು ಹಂತಕ್ಕೆ ತಂದು ನಿಲ್ಲಿಸಿದ್ದಾನೆ. ಈತನಲ್ಲಿ ಇನ್ನೂ ಕಲಬುರ್ಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಶಕ್ತಿಯನ್ನು ತಂದುಕೊಡಬಹುದಾದ ಹಲವಾರು ಯೋಜನೆಗಳಿವೆ. ಆದ್ದರಿಂದಲೆ ಮತ್ತೆ ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗೆ ಸ್ಪರ್ಧಿಸಿದ್ದಾನೆ.

ಈತನೊಂದಿಗೆ ಪತ್ರಕರ್ತ ಮಹಿಪಾಲರೆಡ್ಡಿಯೂ ನಿಂತಿದ್ದಾನೆ. ಹಿಂದೊಮ್ಮೆ ಮಹಿಪಾಲರೆಡ್ಡಿ ಕಸಾಪ ಪದಾಧಿಕಾರಿಯಾಗಿದ್ದ ದಿನಗಳಲ್ಲಿ ಪಾದರಸದಂತೆ ಓಡಾಡಿ ಕೆಲಸ ಮಾಡಿದ ಅನುಭವ ಇದೆ. ಪತ್ರಕರ್ತನ ಚಿಕಿತ್ಸಕ ಗುಣವೂ ಇದೆ. ಇದು ಸಾಹಿತ್ಯವನ್ನು ಕಟ್ಟುವ ಕೆಲಸಕ್ಕೆ ಅನುವಾಗಲಿದೆ. ಇವರಿಬ್ಬರಲ್ಲದೆ ಭೀಮಣ್ಣ ಗೋನಾಲ ಹಾಗು ಇತರರು ಸ್ಪರ್ಧಿಸಿದ್ದರೂ ಅವರೆಲ್ಲ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಸ್ಥಿತಿಯಲ್ಲಿ ಇದ್ದಾರೆ.

ವೀರಭದ್ರ ಸಿಂಪಿ ಮತ್ತು ಮಹಿಪಾಲರೆಡ್ಡಿ - ಇವರೀರ್ವರಲ್ಲಿ ಯಾರು ಗೆದ್ದು ಬಂದರೂ ಕಲಬುರ್ಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ಗರಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಕಲಬುರ್ಗಿ: ಗಣಿ ಹಣಕ್ಕೆ ಬಾಯ್ಬಿಡುತ್ತಿರುವ ಜಿ.ಪಂ. ಸದಸ್ಯರು!

ಚೆಡ್ಡಿಗಳು ಯಾವತ್ತು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದವೋ ಅವತ್ತಿನಿಂದಲೆ ಅವಕ್ಕೆ ಎಲ್ಲಿ ಅಧಿಕಾರದ ಗದ್ದುಗೆಯಿಂದ ಜಾರಿ ಬೀಳುತ್ತೇವೋ ಎಂಬ ಆತಂಕ ಕಾಡಲಾರಂಭಿಸಿತು. ಅದಕ್ಕೆ ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳುವ, ಆ ಮೂಲಕ ತಮ್ಮ ಸರ್ಕಾರವನ್ನು ಭದ್ರಪಡಿಸಿಕೊಳ್ಳುವ ಷಡ್ಯಂತ್ರಕ್ಕೆ ಗಣಿ ಧಣಿಗಳು ಕೈಹಾಕಿದರು. ಈಗ ಬಳ್ಳಾರಿಯ ರೆಡ್ಡಿಗಳ ಪಾಪದ ದುಡ್ಡಿನಲ್ಲಿ ಎಲ್ಲವನ್ನು ಖರೀದಿಸುತ್ತೇವೆ ಎಂಬ ಉಮೇದಿನಲ್ಲಿರುವ ಚೆಡ್ಡಿಗಳ ಕಣ್ಣು ಈಗ ಮಹಾನಗರ ಪಾಲಿಕೆಗಳ ಮೇಲೆ ಬಿದ್ದಿದೆ. ಈಗಾಗಲೆ ಮೈಸೂರು ಮಹಾನಗರ ಪಾಲಿಕೆಯ ಸದಸ್ಯರನ್ನು ಖರೀದಿಸಿ, ಪಾಲಿಕೆಯನ್ನು ಸಂಪೂರ್ಣ ಚೆಡ್ಡಿಮಯ ಮಾಡಿಕೊಂಡಿದ್ದಾರೆ.

ಅದರಂತೆ ಕಲಬುರ್ಗಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನೂ ತನ್ನ ಬುಟ್ಟಿಗೆ ಹಾಕಿಕೊಂಡು ಮೆರೆಯಬೇಕೆಂಬ ಬಯಕೆ ಬಳ್ಳಾರಿ ರೆಡ್ಡಿಗಳ ಹಣದಿಂದ ಚೆಡ್ಡಿಗಳಿಗೆ ಆರಂಭವಾಗಿದೆ. ಕಳೆದ ಚುನಾವಣೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆಯದ ಕಾರಣ ಮೊದಲು ಜೆಡಿಎಸ್ ಹಾಗೂ ಕಾಂಗ್ರೆಸ್ ಕೂಡಿ ಸಮ್ಮಿಶ್ರವಾಗಿ ಆಡಳಿತ ನಡೆಸಲು ಒಪ್ಪಂದ ಮಾಡಿಕೊಂಡಿದ್ದವು. ಆದರೆ ಅದು ಕೂಡಿ ಬಾರದಿದ್ದಾಗ, ಜೆಡಿಎಸ್ ಮತ್ತು ಬಿಜೆಪಿ ಒಪ್ಪಂದ ಮಾಡಿಕೊಂಡಿದ್ದವು. ಆ ಒಪ್ಪಂದದ ಪ್ರಕಾರ ಮೊದಲ ಹತ್ತು ತಿಂಗಳವರೆಗೆ ಪಕ್ಷೇತರ ಅಭ್ಯರ್ಥಿಯಾದ ಭಾರತಿ ಶಂಕರಗೌಡರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿತ್ತು, ಆಕೆಯ ಅವಧಿನಂತರ ಎರಡನೆಯ ಹತ್ತು ತಿಂಗಳಿಗೆ ಅಧ್ಯಕ್ಷ ಸ್ಥಾನವನ್ನು ಬಿಜೆಪಿಗೆ ಬಿಟ್ಟುಕೊಡುವುದಾಗಿತ್ತು.

ಆದರೆ ಅಧಿಕಾರದ ರುಚಿ ಉಂಡ ಭಾರತಿ ಶಂಕರಗೌಡ 'ತುಪ್ಪದ ಸವಿಗೆ ಅಲಗ ನೆಕ್ಕುವ ಸೋಗಾಗಸಂತ್ನೆಸ್ನ ಬಾಳುವೆ' ಎಂಬಂತೆ ವರ್ತಿಸಿದರು. ಅಧಿಕಾರದ ಲಾಲಸೆಗೆ ಬಿಜೆಪಿಗೆ ಟಾಟಾ ಹೇಳಿ ಕಾಂಗ್ರೆಸ್ ಸೇರಿ ಮತ್ತೆ ಅಧಿಕಾರದಲ್ಲಿ ಮುಂದುವರೆದರು. ಇದು ಬಿಜೆಪಿಗೆ ಹೇಗೋ ಹಾಗೆಯೇ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದ ಪಕ್ಷದ ನಿಷ್ಠಾವಂತರಿಗೂ ಇರುಸುಮುರುಸು ಉಂಟುಮಾಡಿದೆ. ಈ ಹಿನ್ನೆಲೆಯನ್ನು ಉಪಯೋಗಿಸಿಕೊಂಡು ಬಿಜೆಪಿ ಕಲಬುರ್ಗಿ ಜಿಲ್ಲಾ ಪರೀಷತ್ ಗಾದಿ ಏರುವುದಕ್ಕೆ ಈಗ ಎಲ್ಲಾ ತಯಾರಿ ನಡೆಸಿದೆ.

ಕಲಬುರ್ಗಿ ಜಿಲ್ಲಾ ಪಂಚಾಯತ್‌ನ ಒಟ್ಟು ಸ್ಥಾನಗಳು 65. ಇದರಲ್ಲಿ ಕಾಂಗ್ರೆಸ್‌ಗೆ 25, ಜೆಡಿಎಸ್‌ಗೆ 21, ಬಿಜೆಪಿಗೆ 7, ಎಬಿಪಿಜೆಡಿಗೆ 10 ಸ್ಥಾನಗಳಿದ್ದರೆ ಇಬ್ಬರು ಪಕ್ಷೇತರರೂ ಇದ್ದಾರೆ. ಆದರೆ ಕಾಳಗಿ ಮತಕ್ಷೇತ್ರದಿಂದ ಜಿಪಂಗೆ ಆಯ್ಕೆಯಾಗಿದ್ದ ಸದಸ್ಯನೊಬ್ಬ ಮೃತ ಪಟ್ಟಿದ್ದಾನೆ. ಹೀಗಾಗಿ ಯಾವುದೆ ಪಕ್ಷಕ್ಕೂ ಸ್ಪಷ್ಟ ಬಹುಮತವಿಲ್ಲ. ಅಲ್ಲದೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ವಿಧಾನಸಭೆಯ ಸದಸ್ಯರನೇಕರು ತಮ್ಮ ಮೂಲ ಪಕ್ಷಗಳನ್ನು ತೊರೆದು ಬೇರೆ ಬೇರೆ ಪಕ್ಷಗಳಿಗೆ ಪಕ್ಷಾಂತರ ಹೊಂದಿದ್ದರಿಂದ ಈಗ ಜಿಲ್ಲಾ ಪಂಚಾಯತಿಯ ಸದಸ್ಯರು ಯಾರು - ಯಾವ ಪಕ್ಷದವರು ಎಂದು ಗುರುತಿಸುವುದೇ ಕಷ್ಟವಾಗಿದೆ.

ಇದನ್ನು ಸ್ಪಷ್ಟವಾಗಿ ಗುರುತಿಸಿದ ಬಳ್ಳಾರಿಯ ಗಣಿ ಧಣಿಗಳು ತಮ್ಮ ಪಾಪದ ಹಣವನ್ನು ಇವರೆಲ್ಲರಿಗೂ ಯಥೇಚ್ಛವಾಗಿ ಹರಿಸುವ ಸಾಧ್ಯತೆಗಳಿವೆ. ಕೇವಲ 7 ಜನ ಸದಸ್ಯರನ್ನು ಹೊಂದಿದ ಬಿಜೆಪಿ ತನ್ನ ಹಣಬಲದಿಂದಲೇ ಕಲಬುರ್ಗಿಯ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಸ್ಥಾನವನ್ನು ಹೊಡಕೊಂಡುದೆ ಆದರೆ ಗಣಿ ಹಣದ ಧೂಳಿನಲ್ಲಿ ಕಲಬುರ್ಗಿಯ ಜನರೂ ನರಳಬೇಕಾದ ದುರ್ದಿನಗಳು ಆರಂಭವಾದವು ಎಂದೇ ಹೇಳಬೇಕಾಗುತ್ತದೆ.

■ವಿಶ್ವಾರಾಧ್ಯ ಸತ್ಯಂಪೇಟೆ

ಸಾಹಿತ್ಯ ಪರಿಷತ್‌ನ ಚತುಷ್ಟಯರ ಪರಿಚಯ

ಥೂತ್ತೇರಿ

ಯಾಹೂ

ಕನ್ನಡ ಸಾಹಿತ್ಯ ಪರಿಷತ್‌ನ ಚುನಾವಣೆ ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಚುನಾವಣೆಗಳಂತೆ ರಂಗೇರುತ್ತಿದೆಯಂತಲ್ಲಾ. ಮೂರು ವರ್ಷ ಮೂರುದಿನದ ಈ ಹುದ್ದೆಗಾಗಿ ಸಮಗ್ರ ಕರ್ನಾಟಕದಲ್ಲಲ್ಲದೆ ಹೊರರಾಜ್ಯ ಮತ್ತು ಹೊರರಾಷ್ಟ್ರಗಳಲ್ಲೂ ಮತದಾರರಿದ್ದಾರಂತಲ್ಲಾ. ಅವರೆಲ್ಲರನ್ನು ಖುದ್ದು ಭೇಟಿಯಾಗಿ ಮತಕೇಳಲಾಗದ ಅಭ್ಯರ್ಥಿಗಳು ದೇವರ ಮೇಲೆ ಭಾರಹಾಕಿ ಕುಳಿತಿರಬೇಕಾದರೆ, ನಾವೊಂದಿಷ್ಟು ಸಹಾಯ ಮಾಡಬೇಕೆನಿಸಿತಲ್ಲಾ.

ಡಾ. ಎಸ್. ವಿದ್ಯಾಶಂಕರ್ ಕೊಳ್ಳೇಗಾಲದವರು. ಕುಳ್ಳಕೆಡಿಸಿದ ಕೊಳ್ಳೇಗಾಲವ ಎಂಬ ಗಾದೆಯೊಂದು ಕರ್ನಾಟಕ ರಾಜ್ಯದ ತುಂಬ ಹರಡಿದೆ. ಆದರೆ ವಿದ್ಯಾಶಂಕರ್ ಕುಳ್ಳರಲ್ಲ, ಹಾಗಾಗಿ ನಂಬಬಹುದು. ಸಾಹಿತ್ಯ ವಲಯದಲ್ಲಿ ನೂರಾರು ಲೇಖನ ಬರೆದು ಸಾವಿರಾರು ವಚನ ಓದಿರುವ ವಿದ್ಯಾಶಂಕರ್ ಹೆಸರಿಗೆ ತಕ್ಕಂತೆ ವಿದ್ಯಾವಂತರು. ಆದರೆ ಮಾತಿನಲ್ಲಿ ಅದು ಕಾಣುವುದಿಲ್ಲ. ಸಾಹಿತ್ಯ ಪರಿಷತ್‌ಗೆ ಇವರು ಹಾಕಿಕೊಂಡಿರುವ ಕಾರ್ಯಕ್ರಮಗಳು ಎಡೂರಪ್ಪನ ಬಜೆಟ್‌ನಂತಿವೆ. ಕಾಲಾವಕಾಶ ಮೂರು ವರ್ಷ. ಆದರೂ ಸಾಹಿತ್ಯ ಸಮ್ಮೇಳನಗಳನ್ನು ಸರಳ ಮದುವೆಯಂತೆ ನಡೆಸುವ ತೀರ್ಮಾನದ ಇವರನ್ನು ಸರಳವಾದ ಜನ ಬೆಂಬಲಿಸಲಿದ್ದಾರಂತೆ, ಥೂತ್ತೇರಿ!

****

ಇನ್ನ ನಮ್ಮ ಸೋಸಲೆ ಜವರಯ್ಯನವರಿಗೆ ಒಂದು ದೊಡ್ಡ ಇತಿಹಾಸವೇ ಇದೆಯಂತಲ್ಲಾ. ಆ ಕಾಲದಲ್ಲಿ ಬೆಂಗಳೂರು ಸಾರಿಗೆ ನಿರ್ವಹಿಸಿದ ಅನುಭವವಿರುವ ಜವರಯ್ಯ ಸಾಹಿತ್ಯ ಪರಿಷತ್‌ನ್ನು ಹಾಗೇ ನಿರ್ವಹಿಸುತ್ತೇನೆ ಎಂಬ ಛಲ ಹೊಂದಿದ್ದಾರಂತಲ್ಲಾ.

"ಕನ್ನಡದ ಹಳೇ ಹುಲಿಗಳಾದ ಅ.ನ.ಕೃ, ನಾಡಿಗ್, ರಾಮಮೂರ್ತಿ, ಕೋಣಂದೂರು ಲಿಂಗಪ್ಪ ಅವರ ಜೊತೆ ಸೇರಿ ಕನ್ನಡ ಚಳವಳಿ ಕಟ್ಟಿದ್ದೇನೆ" ಎಂದು ಜವರಯ್ಯ ಜವರಾಯನ ಗತ್ತಿನಲ್ಲೇ ಹೇಳಿದರೆ, "ಅವರೆಲ್ಲಾ ಯಾರು ಸ್ವಾಮಿ?" ಎಂದು ಬೆಂಗಳೂರಿನ ಕನ್ನಡಿಗರು ಕೇಳುತ್ತಿವೆಯಂತಲ್ಲಾ. ಹಣೆ ಗಟ್ಟಿಸಿಕೊಂಡ ಜವರಯ್ಯ "ಅವರೆಲ್ಲಾ ಕನ್ನಡದ ಕಲಿಗಳು. ಅವರೇನಾದರೂ ಕನ್ನಡ ಚಳವಳಿ ಪ್ರಾರಂಭಿಸದಿದ್ದರೆ ವಾಟಾಳ್ ನಾಗರಾಜ್ ಚಳವಳಿ ಸೇರಿ, ತಾನೇ ಅಧ್ಯಕ್ಷನಾಗಿ, ತಾನೇ ಅಭ್ಯರ್ಥಿಯಾಗಿ, ತಾನು ಮಾತ್ರ ಆಯ್ಕೆಯಾಗುತ್ತಾ ಬಂದು, ಇಂದು ಠೇವಣಿ ಕಳೆದುಕೊಳ್ಳುತ್ತಿರಲಿಲ್ಲ" ಎಂದು ವಿವರಿಸುತ್ತಿದ್ದಾರಂತಲ್ಲಾ, ಥೂತ್ತೇರಿ!!

****

ಇನ್ನು ಡಾ. ಸಿ.ವೀರಣ್ಣನವರ ಬಗ್ಗೆ ಹೇಳುವಂತೆಯೇ ಇಲ್ಲ, ಮಾತಿನಲ್ಲೇ ಕ್ರಾಂತಿ ಹುದುಗಿಸಿಕೊಂಡಿರುವ ವೀರಣ್ಣ ಆಗಿಹೋದ ಕ್ರಾಂತಿಯನ್ನು ಮನಮುಟ್ಟುವಂತೆ ವಿವರಿಸುವುದರಲ್ಲಿ ನಿಸ್ಸೀಮರಂತೆ. ಕ್ರಾಂತಿ, ಹೋರಾಟ ಯಾವುದನ್ನೂ ಕೈಗೆತ್ತಿಕೊಳ್ಳದೆ, ಬಾಯಿಗೆತ್ತಿಕೊಂಡ ಫಲವಾಗಿ ಇವರನ್ನು ಕೊಂಡಾಡಿದ ಸಾಹಿತಿಗಳು ತೀನಂಶ್ರೀ ಪ್ರಶಸ್ತಿ ಕೊಡಿಸಿದ್ದಾರಂತೆ. ಸಾಹಿತ್ಯ ಪರಿಷತ್‌ಗೆ ಹೇಳಿಮಾಡಿಸಿದಂತಿದ್ದೂ ಈ ತರಹದ ವಿದ್ವಾಂಸರೊಬ್ಬರು ಆಗಲೇ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಹಾಸನದ ಸಮ್ಮೇಳನವನ್ನು ಗಬ್ಬೆಬ್ಬಿಸಿ ಹೋಗಿರುವುದರಿಂದ ಅಂತಹ ಸಾ.ಸಿ.ಮರುಳಯ್ಯನ ಮುಂದುವರಿಕೆ ವೀರಣ್ಣನಾಗಬಾರದು, ಅವರು ಮತ್ತೊಬ್ಬ ಹಂಪನ ಆಗಬೇಕೆಂದು ಸಾಹಿತ್ಯವಲಯದಲ್ಲಿನ ಸಾಹಿತಿಗಳಲ್ಲದವರ ಅಭಿಪ್ರಾಯವಾಗಿದೆಯಂತಲ್ಲಾ. ಅದೇನೇ ಆದರೂ ಬುದ್ಧಿಗೂ, ಬದುಕಿಗೂ ತುಂಬಾ ಅಂತರವನ್ನು ಕಾಪಾಡಿಕೊಂಡು ಬಂದಿರುವ ವೀರಣ್ಣ, ಸಾಹಿತ್ಯ ಪರಿಷತ್‌ಗೂ, ತಮಗೂ ಅಂತರವಿಟ್ಟುಕೊಂಡೇ ಆಡಳಿತ ಮಾಡಿ ಒಂದಿಷ್ಟು ಯೋಗ್ಯವಾದ ಕೆಲಸ ಮಾಡಬಲ್ಲರೆಂಬುದು ಸಾಹಿತ್ಯಾಸಕ್ತರ ಅಭಿಪ್ರಾಯವಾಗಿದೆಯಲ್ಲಾ, ಥೂತ್ತೇರಿ!

****

ಇನ್ನ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಕುಮಾರಸ್ವಾಮಿಯಷ್ಟೇ ಉತ್ಸಾಹದಿಂದ ಓಡಾಡುತ್ತಿರುವ ನಲ್ಲೂರು ಪ್ರಸಾದ್‌ರನ್ನು ನೋಡಿದವರು "ಸಲವತ್ತೊಂದು ವರ್ಷಕ್ಕೆ ಯಾಕ್ರಿ ನಿಮಗಿಂತಹ ಹುದ್ದೆಬೇಕು? ಇನ್ನು ಕೆಲವು ವರ್ಷ ತಡೆಯಿರಿ. ಮೊದಲು ಹಿರಿಯರ ಸರದಿ ಮುಗಿಯಲಿ" ಎಂದು ಬುದ್ಧಿ ಹೇಳುತ್ತಿದ್ದಾರಂತಲ್ಲಾ. ಇದರಿಂದ ಕಂಗಾಲಾಗಿರುವ ನಲ್ಲೂರು ಪ್ರಸಾದ್ "ಅಯ್ಯೋ ನನಗಾಗಲೇ ಅರವತ್ತೊಂದು. ನಿವೃತ್ತನಾಗೇ ಮೂರು ವರ್ಷವಾಯ್ತು. ನನ್ನ ತಲೆಯಲ್ಲಿ ಮೂರು ಬಿಳಿಕೂದಲಿಲ್ಲ ಎಂದು ಅನುಮಾನ ಪಡಬೇಡಿ. ನಮ್ಮವ್ವ ಹಳ್ಳೆಣ್ಣೆ ಬೇಸಿ ತಲೆಗೆ ತಿಕ್ಕಿ ತಿಕ್ಕಿ ಚೆನ್ನಾಗಿ ಕುಡಿಸಿದ್ದರಿಂದ ಇನ್ನೂ ನೆರೆ ಕೂದಲು ಬಂದಿಲ್ಲ" ಎನ್ನತೊಡಗಿದ್ದಾರಂತಲ್ಲಾ. "ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಈ ಬಾರಿ ಸೋತವನು ಮುಂದಿನ ಬಾರಿ ಗೆಲ್ಲುತ್ತ ಬಂದಿದ್ದಾನೆ. ಆ ಲೆಕ್ಕದಲ್ಲಿ ನಾನು ಚಂಪಾ ಎದುರು ಸೋತಿದ್ದೇನೆ. ಆದ್ದರಿಂದ ಈ ಬಾರಿ ನಾನು ಗೆಲ್ಲಲು ಯಾವ ಸೋಲಿನ ಭಯವೂ ಇಲ್ಲ" ಎಂದು ಓಡಾಡುತ್ತಿದ್ದಾರಂತಲ್ಲಾ, ಥೂತ್ತೇರಿ!

****

ಇಂತಪ್ಪ ಅಭ್ಯರ್ಥಿಗಳೆಲ್ಲಾ ಸಾಹಿತ್ಯದ ದೊಣ್ಣೆ ಹಿಡಿದು ಪ್ರಸ್ತುತ ಲಾಠಿಗಳೊಂದಿಗೆ ಸೆಣಸಾಡುತ್ತಿರಬೇಕಾದರೆ, ನಮಗೆ ಇನ್ನು ನಾಲ್ಕು ಅಭ್ಯರ್ಥಿಗಳಾದ ಪ್ರಭಾಕರರಾವ್, ಮ.ಚಿ.ಕೃಷ್ಣ, ಲಕ್ಷ್ಮಣರಾವ್ ಗೋಗಿ ಎಂಬ ಅಪ್ಪಟ ಚಿನ್ನದಂತಹ ವ್ಯಕ್ತಿಗಳ ಮಾಹಿತಿ ಸಿಕ್ಕಿಲ್ಲವಾಗಿ ಅವರ ಮಾಹಿತಿ ಸಿಕ್ಕರೂ ನಾವು ನಿರ್ವಂಚನೆಯಿಂದ ದಾಖಲಿಸಲೇಬೇಕಲ್ಲಾ. ಈ ನಡುವೆ ಕಳೆದ ಚುನಾವಣೆಯಲ್ಲಿ ಅಲೆಮಾರಿಯಂತೆ ಅಲೆದು ಕಡೆಗೂ ಗೆದ್ದ ಚಂಪಾ ಗುಂಡೂರಾಯ ಸಿಕ್ಕ ಕೂಡಲೇ ವಾಟಾಳ್ ಬಾಯಿಮುಚ್ಚಿಕೊಂಡಂತೆ, ತೆಪ್ಪಗಿರುವುದೇಕೆಂದು ಚಂಪಾಭಿಮಾನಿಗಳು ಚೇಷ್ಟೆಮಾಡುತ್ತಿದ್ದಾರಂತಲ್ಲಾ. ಗೆದ್ದು ಅಧಿಕಾರ ಅನುಭವಿಸಿದವನು ಮತ್ತೆ ನಿಂತವರ ಪರ ಬರಲು ಇದೇನು ರಾಜಕೀಯ ಪಕ್ಷವೇ? ಹೇಳಿ ಕೇಳಿ ರಾಜಕಾರಣಕ್ಕಿಂತಲೂ ಹೊಟ್ಟೆಕಿಚ್ಚು, ಕರುಬತನ, ಸಣ್ಣತನ ತುಂಬಿರುವ ಸಾಹಿತ್ಯಲೋಕದಲ್ಲಿ ಹಿಂದಿನವರು ಮುಂದಿನವರ ಪರಬರುವುದು ಸುಳ್ಳು. ಹಾಗಾಗಿ ಚಂಪಾ ಬಂದಿಲ್ಲ ಎಂದವಲ್ಲಾ ಥೂತ್ತೇರಿ!!



****

ಸಾಹಿತ್ಯ ಪರಿಷತ್ ಚುನಾವಣೆ ಹೀಗೆ ರಂಗೇರಿದ ರಣಭೂಮಿಯಾಗುತ್ತಿರುವುದನ್ನು ನೋಡಿದ ಚೆಡ್ಡಿಗಳು, ತಮ್ಮ ಅಜೆಂಡಾಗಳಿಗೆ ಹತ್ತಿರವಿರುವ ಅಭ್ಯರ್ಥಿಗಳೇ ಇಲ್ಲವಲ್ಲಾ ಎಂದು ಕೊರಗುತ್ತಿವೆಯಂತಲ್ಲಾ. ಇದನ್ನು ಮನಗಂಡ ಬಿಜೆಪಿಗಳು "ನೀವೇನು ಹೆದರಬೇಡಿ. ಯಾರೇ ಗೆದ್ದು ಬಂದರೂ ಯಾರನ್ನ ಅಧ್ಯಕ್ಷರನ್ನಾಗಿ ಮಾಡಬೇಕು, ಗೋಷ್ಠಿಗಳಲ್ಲಿ ಯಾರಿರಬೇಕು ಮತ್ತು ಸಮ್ಮೇಳನವನ್ನು ಹೇಗೆ ನಡೆಸಬೇಕೆಂದು ನಾವು ನಿರ್ಧರಿಸುತ್ತೇವೆ. ಆದ್ದರಿಂದ ಯಾರಾದರೂ ಗೆದ್ದು ಬರಲಿ, ನೀವು ನಿಶ್ಚಿಂತೆಯಿಂದಿರಿ" ಎಂಬ ಸಂದೇಶ ಇನ್ನು ಕೊಟ್ಟಿಲ್ಲವಂತಲ್ಲಾ. ಆದರೂ ಬಿಜೆಪಿಯ ಸ್ಯಾಟ್‌ಲೈಟ್ ಯಂತ್ರವೊಂದರ ಅಲೋಚನೆ ಎಲ್ಲಾ ಚೆಡ್ಡಿಗಳಿಗೂ ತಲುಪುವಂತೆ ಈ ಬಗ್ಗೆ ಸ್ಪಷ್ಟ ಸೂಚಿ ಮಾತನಾಡದಿದ್ದರೂ, ಚೆಡ್ಡಿಗಳು ಇರುವಲ್ಲಿಯೇ ಇಂತಹ ಕಿಡಿಗೇಡಿ ಅರಿವು ಮೂಡಿ, ಸದ್ಯಕ್ಕೆ ನಾಟಕ ಬಗ್ಗೆ ತಲೆಕೆಡಿಸಿಕೊಂಡು ಕೂತಿವೆಯಂತಲ್ಲಾ ಥೂತ್ತೇರಿ!! ■



ಆಸ್ತಿಯ ಸುತ್ತ ಸುತ್ತೂರು ಕರಿನೆರಳು

ಆಸ್ತಿ, ಐಶ್ವರ್ಯ ಮತ್ತು ಅಧಿಕಾರ ಲಾಲಸೆಗಳು ಅದೆಂಥಾ ವ್ಯವಸ್ಥೆಯನ್ನೂ ಕುಲಗೆಡಿಸುತ್ತವೆ. ಸಿದ್ಧಗಂಗೆ ಹೇಳಿಕೇಳಿ ವಿರಕ್ತಮಠ. ಜಂಗಮತ್ವವೇ ಅದರ ಆತ್ಮ. ಹಿಂದಿದ್ದ ಅಟವೀ ಸ್ವಾಮಿಗಳು, ಆನಂತರ ಬಂದ ಉದ್ದಾನ ಶಿವಯೋಗಿಗಳು ಭಿಕ್ಷೆ ಎತ್ತಿಯೇ ಮಠಕಟ್ಟಿದರು. ಆದರೆ ಶಿವಕುಮಾರ ಸ್ವಾಮೀಜಿಯ ವೃದ್ಧಾಪ್ಯದ ಹೊತ್ತಿಗೆ ಮಠದ ಆಸ್ತಿ ಎರಡು ಸಾವಿರ ಕೋಟಿಗೂ ಮೀರಿ ಬೆಳೆದಿತ್ತಲ್ಲ; ಹುತ್ತಕ್ಕೆ ಹಾವುಗಳು ಹೊಕ್ಕಂತೆ ಉದ್ಯಮಿ ಎನ್.ಆರ್. ಜಗದೀಶ್, ಟಿ.ಕೆ. ನಂಜುಂಡಪ್ಪ, ಬಿ.ಎಸ್. ಪರಮಶಿವಯ್ಯರಂಥ ಪುಡಾರಿಗಳೆಲ್ಲ ಮಠದ ಸೂತ್ರಧಾರರಾದರು. ಸ್ವಾಮೀಜಿಯನ್ನೇ ತಮ್ಮ ಕೈಗೊಂಬೆ ಮಾಡಿಕೊಂಡರು.

ಇದರ ವಿರುದ್ಧ ತಿರುಗಿಬಿದ್ದವರು ಗೌರಿಶಂಕರ ಸ್ವಾಮೀಜಿ. ಗೌರಿಶಂಕರರನ್ನು ಸಲಿಂಗರತಿಯ ಕೇಸಿಗೆ ಸಿಲುಕಿಸಿ ಜೈಲಿಗೆ ಹಾಕಿಸಿ, ಆ ಸ್ಥಾನಕ್ಕೆ ಸಿದ್ಧಲಿಂಗಸ್ವಾಮಿಯನ್ನು ತಂದ ದುಷ್ಟಕೂಟದ ವಿರುದ್ಧ ಇವತ್ತಿಗೂ ಸಾಮಾನ್ಯ ಲಿಂಗಾಯತರಲ್ಲಿ ಸಿಟ್ಟಿದೆ. ಆ ಕಾರಣಕ್ಕೇ ಗೌರಿಶಂಕರರ ಪರ ತುಮಕೂರು ಸುತ್ತಮುತ್ತಲ ಲಿಂಗಾಯತರಲ್ಲಿ ವ್ಯಾಪಕ ಬೆಂಬಲವಿದೆ. ಗೌರಿಶಂಕರರ ಪಾಲಿಗೆ ಪೀಠವೆಂದರೆ ಅದು ಆರಾಧ್ಯದೈವ ಯಡಿಯೂರಪ್ಪ ಸಿದ್ಧಲಿಂಗೇಶ್ವರರ ಆಧ್ಯಾತ್ಮಿಕ ಗದ್ದುಗೆಯೇ ಹೊರತು ಆಸ್ತಿಯಲ್ಲ. ಆದರೆ ದುಷ್ಟಕೂಟಕ್ಕೆ ಮಠದ ಆಸ್ತಿಯ ಮೇಲೆ ಕಣ್ಣು.

ಯಾರೆಲ್ಲ ಗೌರಿಶಂಕರರನ್ನು ಬೆಂಬಲಿಸುತ್ತಾರೋ ಅಂಥವರನ್ನು ಮುಗಿಸುತ್ತಾ ಬರುವುದೇ ದುಷ್ಟಕೂಟದ ಕೆಲಸವಾಯಿತು. 2004 ರ ಹೊತ್ತಿಗೆ ತುಮಕೂರಿನ ಶ್ರೀಮಂತ ಚಿಕ್ಕಣ್ಣಯ್ಯಪ್ಪ ಮತ್ತವರ ಪತ್ನಿ ಲಲಿತಮ್ಮರನ್ನು ಅವರ ಮನೆಗೇ ನುಗ್ಗಿದ ಹಂತಕರು ಸೌದೆ ಸೀಳುಗಳಿಂದ ಹೊಡೆದು ಬರ್ಬರವಾಗಿ ಕೊಂದುಬಿಟ್ಟರು: ಚಿಕ್ಕಣ್ಣಯ್ಯಪ್ಪ ಗೌರಿಶಂಕರರ ಕಟ್ಟಾ ಬೆಂಬಲಿಗರಾಗಿದ್ದುದೇ ಅವರ ಹತ್ಯೆಗೆ ಕಾರಣವಾಯಿತೆ? ಅವರನ್ನು ಸುಪಾರಿಕೊಟ್ಟು ಕೊಲ್ಲಿಸಿದ್ದು ಯಾರು?



ಚಿಕ್ಕಣ್ಣಯ್ಯಪ್ಪ ಮತ್ತು ಲಲಿತಮ್ಮ

ಇತ್ಯಾದಿ ಪ್ರಶ್ನೆಗಳು ಇವತ್ತಿಗೂ ತುಮಕೂರಿನ ಜನರನ್ನು ಕಾಡುತ್ತಿವೆ. ಇವತ್ತಿಗೂ ಕೊಲೆಗಾರರು ಪತ್ತೆಯಾಗಿಲ್ಲವೆಂದರೆ ದುಷ್ಟಕೂಟದ ಪ್ರಭಾವ ಇನ್ನೆಷ್ಟಿರಬೇಡ? ಈಗ ನಡೆದ ಆಕ್ಸಿಡೆಂಟ್ ನೆಪದ ಹತ್ಯಾಯತ್ನ ಮತ್ತು ಗೌರಿಶಂಕರರ ಶಿಷ್ಯರ ಪಕ್ಷಾಂತರ ಇದೇ ದುಷ್ಟಕೂಟದ ದುರ್ಬುದ್ಧಿಯ ಮುಂದುವರಿಕೆಯಷ್ಟೇ.

ತಮ್ಮ ಪಾಡಿಗೆ ತಾವು ಗುಬ್ಬಿ ತಾಲ್ಲೂಕು ಗೊಲ್ಲಹಳ್ಳಿಯಲ್ಲಿ ಜಂಗಮಮಠ ಕಟ್ಟಿಕೊಂಡಿದ್ದ ಗೌರಿಶಂಕರರಿಗೆ ಯಾರೂ ದಾನ ಕೊಡಬಾರದು. ಬೆಂಬಲಿಸಕೂಡದು. ಕಳೆದ 20 ವರ್ಷಗಳಿಂದ ಗೊಲ್ಲಹಳ್ಳಿ ಮಠಕ್ಕೆ ಹೋಗುವ ಇಸ್ಲಾಂಪುರ ಚೇಳೂರು ರಸ್ತೆಗೆ ಟಾರ್ ಕೂಡ ಹಾಕದಂತೆ ವ್ಯವಸ್ಥಿತವಾದ ಪಿತೂರಿ ನಡೆಯುತ್ತಲೇ ಇದೆ. ಇದರರ್ಥ ಗೌರಿಶಂಕರರ ಮಠಕ್ಕೆ ಯಾರೂ ಹೋಗಬಾರದು. ಹೋಗಬೇಕೆಂದರೆ ರಸ್ತೆಯೇ ಇರಕೂಡದು. ವೀರಶೈವ ಯುವ ವೇದಿಕೆ ಇತ್ಯಾದಿ ಸಂಘಟನೆಗಳನ್ನು ಹುಟ್ಟುಹಾಕಿ ಗೌರಿಶಂಕರರ ಭಕ್ತಾದಿಗಳನ್ನು ಬುಟ್ಟಿಗೆ ಹಾಕಿಕೊಳ್ಳುವ ತಂತ್ರಕ್ಕೂ ದುಷ್ಟಕೂಟ ಕೈಯಿಟ್ಟಿದೆ.


ಹಾಗೊಮ್ಮೆ ಪೀಠಾಧಿಪತ್ಯಕ್ಕೆ ಗೌರಿಶಂಕರರೇ ಹಕ್ಕುದಾರರೆಂದು ಕೋರ್ಟೇನಾದರೂ ತೀರ್ಪಿತ್ತರೆ ಮುಂದೆ ಮಠದ ಯಾವುದೇ ಆಸ್ತಿಯೂ ಅವರಿಗೆ ದಕ್ಕದಂತೆ ಮಾಡುವ ಮತ್ತೊಂದು ಮಾಸ್ಟರ್ ಪ್ಲಾನ್ ಕೂಡ ರೂಪುಗೊಳ್ಳುತ್ತಿದೆ. ಅದು ಸುತ್ತೂರು ಸ್ವಾಮೀಜಿಯ ಅಧ್ಯಕ್ಷತೆಯ ಹೊಸ ಟ್ರಸ್ಟ್‌ಗೆ ಇಡೀ ಮಠದ ಆಸ್ತಿಯನ್ನೆಲ್ಲ ವರ್ಗಾಯಿಸು ವುದು. ಸದರಿ ಟ್ರಸ್ಟ್‌ನಲ್ಲಿ ಸಿದ್ಧಲಿಂಗಸ್ವಾಮಿ, ಎನ್.ಆರ್. ಜಗದೀಶ್, ಟೀಕೆ ನಂಜುಂಡಪ್ಪ ಎಮ್ಮೆಲ್ಸೀ ಸೋಮಣ್ಣ, ಬಿ.ಎಸ್. ಪರಮಶಿವಯ್ಯ ಇತ್ಯಾದಿಗಳೆಲ್ಲ ಟ್ರಸ್ಟಿಗಳಾಗಿರುವಂತೆ ನೋಡಿಕೊಳ್ಳುವುದು!



ಇದು ಸದ್ಯ ಶಿವಕುಮಾರ ಸ್ವಾಮಿಗಳ ತಲೆಹೊಕ್ಕಿರುವ ಹುನ್ನಾರ. ಪೀಠ ಗೌರಿಶಂಕರರ ಪಾಲಾದರೂ ಆಸ್ತಿ ದಕ್ಕಬಾರದು!

ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಬಸವಣ್ಣನವರ ಸಿದ್ಧಾಂತ ಅಂತಿಮವಾಗಿ ಸಿದ್ಧಗಂಗೆಯ ಆಸ್ತಿಯೊಂದಿಗೆ ಮಣ್ಣುಪಾಲಾಗುತ್ತಿರುವುದು ವೀರಶೈವರ ದುರಂತವೋ ಅಥವಾ ಸಿದ್ಧಗಂಗೆಯ ದುರಂತವೋ?

ಗೌರಿಶಂಕರರ ಹತ್ಯಾಯತ್ನ?



● ಸಲಿಂಗರತಿಯ ಕೇಸಿನಲ್ಲಿ ನಾಲ್ಕು ವರ್ಷಗಳಷ್ಟು ಸುದೀರ್ಘಕಾಲ ಜೈಲುಕಳೆದ ಗೌರಿಶಂಕರಸ್ವಾಮೀಜಿಗೆ ತಮ್ಮ ಕೊಲೆಯತ್ನ ಆನಂತರ ನಡೆದ ಗೂಂಡಾದಾಳಿಯ ಬಗ್ಗೆ ದೂರು ಕೂಡ ಕೊಡುವಂತಿಲ್ಲ. ಏಕೆಂದರೆ ಸಿದ್ಧಗಂಗೆಯ ಪೀಠಾಧಿಪತಿ ಶಿವಕುಮಾರ ಸ್ವಾಮೀಜಿಯೆಂದರೆ ಸದ್ಯ ಬಿಜೆಪಿ ಸರ್ಕಾರದ ರಾಜಗುರುವಿದ್ದಂತೆ. ಅವರ ವಿರುದ್ಧ ದೂರು ದಾಖಲು ಮಾಡುವ ಧೈರ್ಯ ಯಾವ ಪೊಲೀಸ್ ಅಧಿಕಾರಿಗಿದೆ?


● ನಡೆದಾಡುವ ಸ್ವಾಮಿಯ ನರಳಾಟ

■ ರಾ. ಸೋಮನಾಥ್

ನಡೆದಾಡುವ ದೇವರಿಗೆ ಅದೆಂಥದೋ ಚಿಂತೆ. ಅಸಂಖ್ಯಾತ ಭಕ್ತವೃಂದ, ಅಗಣಿತ ಆಸ್ತಿಪಾಸ್ತಿ, ಅಸದಳ ಪ್ರಭಾವವಿದ್ದೂ ಅವರದೇ ಸರ್ಕಾರವಿದ್ದೂ ಪೀಠಾಧಿಕಾರದ ಆಪತ್ತು ಮಾತ್ರ ನಿವಾರಣೆಯಾಗುತ್ತಿಲ್ಲ. ಇವತ್ತಲ್ಲ ನಾಳೆ ಗೌರಿಶಂಕರ ಸ್ವಾಮೀಜಿ ಎಂಬ ಜಂಗಮನಿಗೆ ಇಡೀ ಮಠವನ್ನೊಪ್ಪಿಸುವುದು ಅನಿವಾರ್ಯವಾಗಿಬಿಟ್ಟರೆ? ಶತಗತಾಯ ಸಿದ್ಧಲಿಂಗಸ್ವಾಮಿಯನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಲಾಗದೇ ಹೋದರೆ?


ಇದು ಸಿದ್ಧಗಂಗೆಯ ಆರಾಧ್ಯದೈವ ಯಡೆಯೂರು ಸಿದ್ಧಲಿಂಗೇಶ್ವರನ ಪರಮಪೀಠಾಧಿಪತಿ ನಡೆದಾಡುವ ದೈವ, ಶಿವಕುಮಾರ ಸ್ವಾಮೀಜಿಯವರನ್ನು ಕಾಡುತ್ತಿರುವ ಚಿಂತೆ!

ಏನೆಲ್ಲಾ ಷಡ್ಯಂತ್ರ ನಡೆಸಿಯೂ ಸಲಿಂಗರತಿಯ ಕೇಸಿನಲ್ಲಿ ಗೌರಿಶಂಕರ ಸ್ವಾಮಿಯನ್ನು ಸಿಲುಕಿಸಲಾಗದ ವ್ಯಥೆ. ಸುಪ್ರೀಂಕೋರ್ಟು ಗೌರಿಶಂಕರರನ್ನು ನಿರ್ದೋಷಿಯನ್ನಾಗಿ ಘೋಷಿಸಿದ ಹತಾಶೆ. ಈಗ ತುಮಕೂರಿನ ಜೆಎಂಎಫ್‌ಸಿ ಕೋರ್ಟೇನಾದರೂ ಗೌರಿಶಂಕರನೇ ಅಸಲೀ ಪೀಠಾಧಿಕಾರಿ ಎಂದು ತೀರ್ಪಿತ್ತರೆ ಅಲ್ಲಿಗೆ ಸರ್ವನಾಶ ಕಟ್ಟಿಟ್ಟ ಬುತ್ತಿ. ಇಡೀ ಎರಡೂಕಾಲು ಸಾವಿರ ಕೋಟಿಯ ಸಿದ್ಧಗಂಗೆಯ ಸಾಮ್ರಾಜ್ಯ ತನ್ನ ಕೈತಪ್ಪಿ ಗೌರಿಶಂಕರರ ಪಾಲಾಗಿಬಿಟ್ಟರೆ? ಮಾಡಿದ ತಪಸ್ಸೆಲ್ಲ ಜೀವಿತದ ಕೊನೇಗಾಲದಲ್ಲಿ ಮಣ್ಣುಪಾಲಾದರೆ?



ರಾಜೇಶ್

ಇಲ್ಲಿಗೆ ಮೂರು ತಿಂಗಳ ಹಿಂದೆ ನಡೆದ ರಸ್ತೆ ಅಪಘಾತದಲ್ಲಿ ಗೌರಿಶಂಕರ ಸ್ವಾಮೀಜಿ ಪವಾಡ ಸದೃಶವಾಗಿ ಬಚಾವಾದ ರೀತಿ, ಆತನಕ ಅವರ ಭಟ್ಟಂಗಿಗಳಿದ್ದಂಥವರೆಲ್ಲರ ನಿಗೂಢ ವರ್ತನೆಗಳು, ಗೌರಿಶಂಕರರ ಗೊಲ್ಲಹಳ್ಳಿ ಜಂಗಮ ಮಠದ ಮೇಲೆ ಇತ್ತೀಚೆಗೆ ನಡೆದ ಗೂಂಡಾದಾಳಿ ಮತ್ತು ಸದ್ಯ ಗೌರಿಶಂಕರ ಸ್ವಾಮಿಗೊದಗಿದ ದುರ್ಗತಿಗಳೆಲ್ಲವೂ ಇಂಥದೊಂದು ಅನುಮಾನವನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿವೆ. ಗೌರಿಶಂಕರ ಸ್ವಾಮಿ ಹಾಸಿಗೆ ಬಿಟ್ಟೇಳುತ್ತಿಲ್ಲ, ಯಾರನ್ನೂ ನಂಬುತ್ತಿಲ್ಲ. ಬಿಜೆಪಿ ಸರ್ಕಾರವಿರುವ ತನಕ, ಅದೂ ಯಡಿಯೂರಪ್ಪ ಮುಖ್ಯಮಂತ್ರಿಯಾಗಿರುವಷ್ಟೂ ಕಾಲ ತನಗೆ ಪ್ರಾಣಾಪಾಯ ತಪ್ಪಿದ್ದಲ್ಲ ಎಂಬುದು ಗೌರಿಶಂಕರರಿಗೆ ಮನದಟ್ಟಾಗಿಬಿಟ್ಟಿದೆ.













ಅದೂ ವಿನಾಕಾರಣದ ಅಳುಕಲ್ಲ. ಇಲ್ಲಿಗೆ ಮೂರು ತಿಂಗಳ ಹಿಂದೆ ಅಂದರೆ 2008 ರ ಏಪ್ರಿಲ್ 20 ರಂದು ಕ್ಯಾತ್ಸಂದ್ರದ ಕಡೆಯಿಂದ ತುಮಕೂರಿನ ಓವರ್‌ಬ್ರಿಡ್ಜ್ ಮೇಲೆ ಹೋಗುತ್ತಿದ್ದ ಗೌರಿಶಂಕರ ಸ್ವಾಮೀಜಿಯ ಕಾರು ಇದ್ದಕ್ಕಿದ್ದಂತೆ ಮೇಲ್ಸೇತುವೆಗೆ ಗುದ್ದಿದೆ. ಗುದ್ದಿದ ರಭಸಕ್ಕೆ ಸ್ವಾಮಿಯ ಜೊತೆಗಿದ್ದ ವಕೀಲ ರಾಮಲಿಂಗಯ್ಯ ಸ್ಥಳದಲ್ಲೇ ಸತ್ತು ಹೋಗಿದ್ದಾರೆ. ಅದೃಷ್ಟವಶಾತ್ ಬದುಕುಳಿದ ಗೌರಿಶಂಕರರಿಗೆ ಎಲ್ಲೆಂದರಲ್ಲಿ ಗಾಯವಾಗಿತ್ತಾದರೂ ಕಾರಿನ ಡ್ರೈವರ್ ರಾಜೇಶ್ ಎಂಬಾತ ಮಾತ್ರ ಗುದ್ದುವ ಮೊದಲೇ ಕೆಳಕ್ಕೆ ಹಾರಿಬಿಟ್ಟಿದ್ದ!

ಸಣ್ಣದೊಂದು ಮೂಗೇಟು ಇಲ್ಲದೇ ಪ್ರಜ್ಞಾಪೂರ್ವಕವಾಗಿ ಮೇಲ್ಸೇತುವೆಗೆ ಕಾರ್ ಗುದ್ದಿದ ಡ್ರೈವರ್‌ನ ಆವತ್ತಿನ ವರ್ತನೆಯೇ ಇಡೀ ಪ್ರಕರಣವನ್ನು ಮತ್ತಷ್ಟು ನಿಗೂಢವಾಗಿಸಿತ್ತು. ಮೇಲ್ಸೇತುವೆಯಿಂದ ಕೆಳಗಿನ ರೈಲ್ವೇ ಹಳಿಗೇನಾದರೂ ಕಾರು ನುಗ್ಗಿತ್ತೆಂದರೆ ಗೌರಿಶಂಕರಸ್ವಾಮಿ ಬದುಕುಳಿಯುವ ಸಾಧ್ಯತೆಗಳಿರಲಿಲ್ಲ. ಬಹುಶಃ ಅಂಥದೊಂದು ಲೆಕ್ಕ ಹಾಕಿಯೇ ಕಾರಿನಿಂದ ಕೆಳಕ್ಕೆ ಹಾರಿದ ಡ್ರೈವರ್ ರಾಜೇಶನ ಹುನ್ನಾರ ಫಲಿಸದೇ ಕಾರು ಮೇಲ್ಸೇತುವೆಯ ತಡೆಗೋಡೆಗೆ ಗುದ್ದಿ ಸ್ವಾಮೀಜಿ ಬದುಕಿಬಿಟ್ಟರು!

ಇನ್ನೂ ವಿಚಿತ್ರವೆಂದರೆ ಇದಾದನಂತರ ಡ್ರೈವರ್ ರಾಜೇಶ ಮಠದತ್ತ ಬರುವುದನ್ನೇ ನಿಲ್ಲಿಸಿಬಿಟ್ಟ! ಜೊತೆಗೆ ಆತನಕ ಗೌರಿಶಂಕರರಿಗೆ ಪರಮಾಪ್ತರಂತಿದ್ದ ಕ್ಯಾತ್ಸಂದ್ರದ ಪೆಟ್ರೋಲ್ ಬಂಕ್ ಮಾಲೀಕ ಕೆ.ಎಸ್. ಮಾದೇವಸ್ವಾಮಿ, ಆಡಿಟರ್ ಮುನಿರಾಜು, ಕಂಟ್ರಾಕ್ಟರ್ ದೊಡ್ಡ ಸಿದ್ಧಯ್ಯ, ಮಾಸ್ಟರ್ ಪಂಚಾಕ್ಷರಿ, ವಕೀಲ ನಿಂಗಪ್ಪ ಜೈಲರ್ ಶಂಕ್ರಪ್ಪ ನೆಲಮಂಗಲದ ಪುಢಾರಿ ಕೆ.ವಿ. ನಟರಾಜ್, ನಿವೃತ್ತ ಪೊಲೀಸ್ ಅಧಿಕಾರಿ ಸಿದ್ಧರಾಜು ಮುಂತಾದವರೆಲ್ಲ ಗೌರಿಶಂಕರರತ್ತ ತಲೆಹಾಕುವುದನ್ನೇ ನಿಲ್ಲಿಸಿಬಿಟ್ಟರು. ನಿನ್ನೆ ಮೊನ್ನೆಯ ತನಕ ಸಿದ್ಧಗಂಗೆಯ ಶಿವಕುಮಾರ ಸ್ವಾಮಿಯನ್ನು ವಾಚಾಮಗೋಚರ ಬೈದಾಡಿಕೊಂಡು ಓಡಾಡುತ್ತಿದ್ದ ಇವರೆಲ್ಲರೂ ಆಕ್ಸಿಡೆಂಟ್ ಮರುದಿನದಿಂದಲೇ ಗೌರಿಶಂಕರರನ್ನು ತೊರೆದು ಸಿದ್ಧಗಂಗೆಯ ಆಸ್ಥಾನದಲ್ಲಿ ಮಿಂಚಲಾರಂಭಿಸಿದ್ದು ಇಡೀ ದುರ್ಘಟನೆಗೆ ಹಿಡಿದ ಕನ್ನಡಿಯಂತಿತ್ತು.

ಸಲಿಂಗರತಿಯ ಕೇಸಿನಲ್ಲಿ ನಾಲ್ಕು ವರ್ಷಗಳಷ್ಟು ಸುದೀರ್ಘಕಾಲ ಜೈಲುಕಳೆದ ಗೌರಿಶಂಕರಸ್ವಾಮೀಜಿ ನಿರ್ದೋಷಿಯಾಗಿ ಹೊರಬಿದ್ದ ಹದಿನೈದನೆ ದಿನಕ್ಕೇ ಇಂಥಾದ್ದೊಂದು ಕಂಟಕಕ್ಕೆ ತುತ್ತಾದ ಬಗ್ಗೆ ಕನಿಷ್ಠ ತನಿಖೆಯಾದರೂ ನಡೆಯಬೇಕಿತ್ತು. ದೌರ್ಭಾಗ್ಯವೆಂದರೆ ಯಾರೆಲ್ಲ ಗೌರಿಶಂಕರ ಹತ್ಯಾಯತ್ನದ ವಿರುದ್ಧ ದನಿಯೆತ್ತಬೇಕಿತ್ತೋ ಅವರೇ ಶಿವಕುಮಾರ ಸ್ವಾಮಿಯ ಆಸ್ಥಾನದಲ್ಲಿ ಕಂಗೊಳಿಸುತ್ತಿದ್ದರು!

ಅನ್ಯಾಯವಾಗಿ ಗೌರಿಶಂಕರರ ಪರಮಾಪ್ತ ವಕೀಲ ರಾಮಲಿಂಗಯ್ಯ ದುರ್ಮರಣಕ್ಕೀಡಾದರು.

ಗೌರಿಶಂಕರರ ಕೈಗೆ ಸಿದ್ಧಗಂಗೆ ಪೀಠ ಸಿಲುಕದಂತೆ ಮಾಡಲು ಏನೆಲ್ಲಾ ಷಡ್ಯಂತ್ರಗಳು ನಡೆಯುತ್ತಿವೆ ಎಂಬುದಕ್ಕೆ ಈ ಒಂದೇ ಘಟನೆಯಲ್ಲ. ಅಂಥಾ ಗೌರಿಶಂಕರರನ್ನು ಸಲಿಂಗರತಿಯ ಕೇಸಿಗೆ ಸಿಲುಕಿಸಿ ಜೈಲಿಗೆ ಹಾಕಿಸಿ, ಮಠದಿಂದ ಹೊರದಬ್ಬಿದ ದುಷ್ಟಕೂಟಕ್ಕೆ ಅವರನ್ನು ಕೊಲ್ಲುವುದು ಯಾವ ಕಷ್ಟ? ಅದು ಹತಾಶೆ. ಸಿದ್ಧಗಂಗೆಯ ಒಟ್ಟೂ ಆಸ್ತಿಗೆ ಸದ್ಯದ ಮಾರುಕಟ್ಟೆಯಲ್ಲಿ ಎರಡೂಕಾಲು ಸಾವಿರ ಕೋಟಿಯ ಬೆಲೆಯಿದೆ. ಆ ಕಾಲದಿಂದಲೂ ಪೀಠಾಧಿಪತಿ ಶಿವಕುಮಾರ ಸ್ವಾಮಿಯನ್ನು ತಮ್ಮ ಕೈಗೊಂಬೆಯನ್ನಾಗಿ ಮಾಡಿಕೊಂಡು ಮಠವನ್ನು ಲೂಟಿಗೈಯುತ್ತಾ ಬಂದದ್ದು ತುಮಕೂರಿನ ನಟೋರಿಯಸ್ ಪಾತಕಿ ಎನ್ನಾರ್ ಜಗದೀಶ್ ಮತ್ತು ಟಿ.ಕೆ. ನಂಜುಂಡಪ್ಪ!

ಈ ಪೈಕಿ ಜಗದೀಶ್ ತುಮಕೂರಿನ ಗ್ರೈನ್ ಮರ್ಚೆಂಟ್ಸ್ ಕೋಆಪರೇಟಿವ್ ಬ್ಯಾಂಕಿಗೆ ಅಧ್ಯಕ್ಷನಾದರೆ ನಂಜುಂಡಪ್ಪ ಸಿದ್ಧಗಂಗಾ ವಿದ್ಯಾಸಂಸ್ಥೆಯ ಕಾರ್ಯದರ್ಶಿ. ಜೊತೆಗೆ ಬಿ.ಎಸ್. ಪರಮಶಿವಯ್ಯ ಎಂಬ ಪುಡಾರಿಯೂ ಸೇರಿಕೊಂಡ. ಇವರ ದುರಾಚಾರದ ವಿರುದ್ಧ ಮೊದಲ ಬಾರಿ ತಿರುಗಿಬಿದ್ದಿದ್ದೇ ಗೌರಿಶಂಕರರಿಗೆ ಮುಳುವಾಗಿತ್ತು. ಆಗ ತುಮಕೂರಿಗೆ ಎಸ್.ಪಿ.ಯಾಗಿದ್ದದ್ದು ಶಂಕರ್ ಬಿದರಿ. ಅನ್ಯಾಯದ ಸಲಿಂಗರತಿಯ ಕೇಸು ಗೌರಿಶಂಕರರ ಪಾಲಿಗೆ ಉರುಳಾಗಿ ಪರಿಣಮಿಸಿತ್ತು. ಅಂಥಾ ತೆಲಗಿಗೇ ಹಾಕಲಾರದಷ್ಟು ದಂಡ ಅಂದರೆ 25 ಲಕ್ಷ ರೂ ಜುಲ್ಮಾನೆ ಮತ್ತು ಹತ್ತು ವರ್ಷದ ಜೈಲುಶಿಕ್ಷೆಗೆ ತಲೆಕೊಟ್ಟ ಗೌರಿಶಂಕರರು ಹೈರಾಣಾದರು. ನಾಲ್ಕು ವರ್ಷ ಪರಪ್ಪನ ಅಗ್ರಹಾರ ಜೈಲು ಸವೆಸುವ ಹೊತ್ತಿಗೆ ಸುಪ್ರೀಂಕೋರ್ಟ ನ್ಯಾಯ ಕೊಟ್ಟಿತ್ತಾದರೂ ಪೀಠದ ಉತ್ತರಾಧಿಕಾರಿ ಸ್ಥಾನ ಸಿದ್ಧಲಿಂಗಸ್ವಾಮಿಯ ಪಾಲಾಗಿತ್ತು.

ಈ ಸಿದ್ಧಲಿಂಗಸ್ವಾಮಿ ಕೂಡ ಎನ್ನಾರ್ ಜಗದೀಶ್ ಮತ್ತು ನಂಜುಂಡಪ್ಪ ಕೈಗೊಂಬೆಯೆ. ಸಲಿಂಗರತಿ ಕೇಸಿನಲ್ಲಿ ಗೌರಿಶಂಕರರು ನಿರ್ದೋಷಿಯಾದ ಮೇಲೆ ಸಹಜವಾಗೇ ಉತ್ತರಾಧಿಕಾರಿ ಸ್ಥಾನಕ್ಕೆ ಮತ್ತೆ ಅರ್ಹತೆ ದಕ್ಕಲೇಬೇಕು. ಪೀಠಾಧಿಕಾರಕ್ಕಾಗಿ ಗೌರಿಶಂಕರರು ತುಮಕೂರು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಹೂಡಿದ ಕೇಸು ಈಗಾಗಲೇ ವಿಚಾರಣೆಯ ಹಂತದಲ್ಲಿದೆ. ಇವತ್ತಲ್ಲಾ ನಾಳೆ ಕೋರ್ಟು ತೀರ್ಪು ಕೊಡುತ್ತದೆ. ಆಗ ಇಡೀ ಸಿದ್ಧಗಂಗೆಯ ಎರಡೂಕಾಲು

▶▶▶



ಹಿಂದೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಮೈಸೂರು ದಸರಾ ಉದ್ಘಾಟಿಸಬೇಕಿದ್ದ ಇದೇ ಶಿವಕುಮಾರ ಸ್ವಾಮೀಜಿ ಕೊನೇಗಳಿಗೆಯಲ್ಲಿ ಕುಂಟು ನೆಪವೊಡ್ಡಿ ಕೈಕೊಟ್ಟರು. ಅದಕ್ಕೆ ಕಾರಣ ಜಾತಿ. ಲಿಂಗವಂತ ಯಡಿಯೂರಪ್ಪನವರಿಗೆ ಮುಖ್ಯಮಂತ್ರಿಗಿರಿ ತಪ್ಪಿಸಿದ ಅಸಹನೆ ಅವತ್ತು ಶಿವಕುಮಾರರ ಕಣ್ಣುಕಟ್ಟಿತ್ತು, ಆದರೆ ಇವತ್ತು ಎರಡು ಮಾತಿಲ್ಲದೇ ದಸರಾ ಉದ್ಘಾಟನೆಗೆ ಬರುತ್ತಿದ್ದಾರೆಂದರೆ ಸಿದ್ಧಗಂಗೆ ಒಡಲೊಳಗೆ ಅದೆಂಥಾ ಜಾತಿಪ್ರೇಮ ಹೆಪ್ಪುಗಟ್ಟಿರಬೇಡ?

ಆದರೆ ಸಿದ್ಧಗಂಗಾ ಮಠದ ಪರಂಪರೆಯೇ ಬೇರೆ. ಒಂದಾನೊಂದು ಕಾಲಕ್ಕೆ ಅದು ಸರ್ವಜಾತಿಗಳ, ಸರ್ವಧರ್ಮಗಳ ಶ್ರದ್ಧಾಕೇಂದ್ರವಾಗಿತ್ತು. ಅನೇಕ ಒಕ್ಕಲಿಗ ಅಧಿಕಾರಿಗಳು, ಮುಸ್ಲಿಮರು, ದಲಿತ ಮಕ್ಕಳೆಲ್ಲ ಸಿದ್ಧಗಂಗೆಯ ಮಡಿಲಲ್ಲೇ ಬೆಳೆದು ಬದುಕು ರೂಪಿಸಿಕೊಂಡಿದ್ದು ಇತಿಹಾಸ. ಯಾವತ್ತೂ ಜಾತಿವ್ಯಾಮೋಹದ ಕಳಂಕ ಅಂಟದಂತೆ ಜ್ಞಾನ ಮತ್ತು ದಾಸೋಹವನ್ನೇ ಗುರಿಯಾಗಿಸಿಕೊಂಡಿದ್ದ ಶಿವಕುಮಾರಸ್ವಾಮೀಜಿ ತಮ್ಮ ಬದುಕಿನ ಕೊನೇಗಾಲದಲ್ಲಿ ಜಾತಿಭೇದದ ಬಲೆಗೆ ಬಿದ್ದದ್ದು ಸಿದ್ಧಗಂಗೆಯ ದುರಂತವಲ್ಲದೇ ಮತ್ತೇನು?

▶▶▶

...ಸಾವಿರ ಕೋಟಿಯ ಸೊತ್ತು ಗೌರಿಶಂಕರರ ಹತೋಟಿಗೆ ಬರುತ್ತದೆ. ಅದನ್ನು ...ತೆಗಟ್ಟಬೇಕೆಂದರೆ ಒಂದೋ ಗೌರಿಶಂಕರ ಸ್ವಾಮೀಜಿ ರಾಜಿಗೆ ಬರಬೇಕು ಅಥವಾ ಅವರನ್ನೇ ಮುಗಿಸಬೇಕು!

ಇದು ದುಷ್ಟಕೂಟದ ಹುನ್ನಾರ. ಈ ನಿಟ್ಟಿನಲ್ಲಿ ಮೊದಲ ದಾಳವೇ ಇಲ್ಲಿಗೆ ...ಮೂರು ತಿಂಗಳ ಹಿಂದೆ ನಡೆದ ಆಕ್ಸಿಡೆಂಟ್ ಅಥವಾ ಪೂರ್ವಯೋಜಿತ ...ಹತ್ಯಾಯತ್ನ?

ಅದಕ್ಕೆ ವಯೋವೃದ್ಧ ಸ್ವಾಮೀಜಿ ಪಡುತ್ತಿರುವ ಬಾಧೆಗಳು ಒಂದೆರಡಲ್ಲ. ...ಸ್ನಾರ್ ಜಗದೀಶ್ ಮತ್ತು ಟಿ.ಕೆ. ನಂಜುಂಡಪ್ಪ ಮಾತ್ರವಲ್ಲದೇ ಈಗ ...ವಿಜಯನಗರದ ವೀರಪುತ್ರ' ಸೋಮಣ್ಣ ಕೂಡ ಸಿದ್ಧಗಂಗೆಗೆ ಕಾಲಿಟ್ಟಿದ್ದಾರೆ. ...ಸಿದ್ಧಲಿಂಗಸ್ವಾಮಿಯನ್ನೇ ಪೀಠಾಧಿಕಾರಿಯಾಗಿ ಒಪ್ಪಿಕೊಳ್ಳುವಂತೆ ಗೌರಿಶಂಕರರ ...ಮೇಲೆ ಒತ್ತಡ ಹೇರಲು ಲಿಂಗಾಯತರ ದೊಡ್ಡ ಲಾಬಿಯೇ ಕಾರ್ಯಾಚರಣೆಗಿಳಿದಿದೆ. ...ಮೊದಲು ಗೌರಿಶಂಕರರನ್ನು ಕಂಡು ಹತ್ತು ಕೋಟಿ ಬೇಕಾದ್ರೂ ಕೊಡ್ತೀವಿ. ...ಪೀಠಾಧಿಕಾರ ಕೋರಿ ಹಾಕಿರುವ ಕೇಸನ್ನು ವಾಪಸ್ಸು ತಗೊಳ್ಳಿ' ಎಂದು ...ಜಬರ್‌ದಸ್ತಿಗಿಳಿದದ್ದು ಕನಕಪುರದ ದೇಗುಲಮಠದ ಮುಮ್ಮಡಿ ನಿರ್ವಾಣ ...ಸ್ವಾಮೀಜಿ. ಆನಂತರ ಶಿವಗಂಗೆಯ ಹೊನ್ನಂಗಾವಿ ಮಠದ ಪಟ್ಟದ್ಸ್ವಾಮಿ ...ಸಿದ್ಧಲಿಂಗಶಿವಾಚಾರ್ಯ ಸ್ವಾಮೀಜಿಯನ್ನು ಕಳಿಸಿದ್ದಾರೆ.

ಹೊತ್ತಲ್ಲದ ಹೊತ್ತಲ್ಲಿ ಗೌರಿಶಂಕರರನ್ನು ಪೀಡಿಸಲಾರಂಭಿಸಿದ ಸಿದ್ಧಲಿಂಗ ...ಶಿವಾಚಾರ್ಯ ಸ್ವಾಮೀಜಿ ಒಂದು ಹಂತದಲ್ಲಿ ಕೊಲೆ ಬೆದರಿಕೆ ಕೂಡ ಹಾಕಿಬಿಟ್ಟ. ...ಕೊನೆಕೊನೆಗೆ ಗೌರಿಶಂಕರರ ಪರ ವಕೀಲರುಗಳೇ ರಾಜಿಗಾಗಿ ...ಪೀಡಿಸಲಾರಂಭಿಸಿದ್ದಾರೆ. ಇದ್ಯಾವುದಕ್ಕೂ ಜಗ್ಗದೇ ಹೋದಾಗ ಅಂತಿಮವಾಗಿ ...ಯಾರೆಲ್ಲ ಈತನಕ ಗೌರಿಶಂಕರ ಪರವಹಿಸಿ ಶಿವಕುಮಾರ ಸ್ವಾಮಿಯನ್ನು



ವಿರೋಧಿಸುತ್ತಿದ್ದರೋ ಅವರನ್ನೇ ದುಷ್ಟಕೂಟ ಬುಟ್ಟಿಗೆ ಹಾಕಿಕೊಂಡಿದೆ. ಜೈಲಿಂದ ಹೊರಬೀಳುವತನಕ ಗೌರಿಶಂಕರರ ಪರಮಭಕ್ತರಂತಿದ್ದ ಪೆಟ್ರೋಲ್ ಬಂಕ್ ಸ್ವಾಮಿ ಮತ್ತು ಆಡಿಟರ್ ಮುನಿರಾಜು ವರ್ತನೆ ಸದ್ಯ ಹೇಗಿದೆಯೆಂದರೆ, ಸ್ವಾಮೀಜಿ ಅಪಘಾತದಲ್ಲಿ ಬಚಾವಾಗಿದ್ದು ಗೊತ್ತಾಗಿದ್ದೇ ಗೌರಿಶಂಕರರ ಗೊಲ್ಲಹಳ್ಳಿ ಮಠದತ್ತ ತಲೆಹಾಕುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ. ಯಾರೆಲ್ಲ ತನ್ನ ಭವಿಷ್ಯದ ಆಧಾರಸ್ತಂಭದಂತಿದ್ದರೋ ಅವರೇ ವಿರೋಧಿ ಪಾಳಯ ಸೇರಿಕೊಂಡದ್ದು, ಮತ್ತೊಂದೆಡೆ ಅಪಘಾತದಲ್ಲೂ ಗಾಯಗೊಂಡಿದ್ದು ಮಗದೊಂದೆಡೆ ತಮ್ಮ ಗೊಲ್ಲಹಳ್ಳಿ ಜಂಗಮ ಮಠದಲ್ಲಿ ದಾಸೋಹಕ್ಕೆಂದು ಕಾಳು ಅಕ್ಕಿಗೂ ಗತಿಯಿಲ್ಲದಂತ ದಾರಿದ್ರ್ಯಗಳೆಲ್ಲ ಗೌರಿಶಂಕರರನ್ನು ...ರಾಜಿಗೆ ಬಿಟ್ಟೇಳದಂತೆ ಕಟ್ಟಿಹಾಕಿವೆ.

ಇಷ್ಟೆಲ್ಲ ಹತಾಶೆಯ ನಡುವೆಯೂ ಹೇಗೋ ಜೀವ ಹಿಡಿದುಕೊಂಡಿದ್ದ ಗೌರಿಶಂಕರರನ್ನು ಇಲ್ಲಿಗೆ ಹತ್ತುದಿನಗಳ ಹಿಂದೆ ನಡೆದ ಗೂಂಡಾದಾಳಿ ನಿಜಕ್ಕೂ ...ಅಲ್ಲಾಡಿಸಿಹಾಕಿದೆ. ಕಳೆದ ಜುಲೈ 30 ರ ಬುಧವಾರದ ಅಪರಾಹ್ನ ಕಂಠಮಟ್ಟ ...ಕುಡಿದಿದ್ದ ಆಡಿಟರ್ ಮುನಿರಾಜು, ಪೆಟ್ರೋಲ್ ಬಂಕ್ ಸ್ವಾಮಿ, ಅಡ್ವೋಕೇಟ್ ...ಲಿಂಗಪ್ಪ ಮತ್ತು ಇತರೇ ಮೂವರು ಗೂಂಡಾಗಳು ಗೊಲ್ಲಹಳ್ಳಿಯ ಜಂಗಮ ...ಮಠಕ್ಕೆ ನುಗ್ಗಿದ್ದೇ ಗೌರಿಶಂಕರರನ್ನು ಕೋಣೆಯೊಂದರಲ್ಲಿ ಕೂಡಿ ಹಾಕಿದ್ದಾರೆ. ...ಅವಾಚ್ಯವಾಗಿ ಬೈದಾಡಿ ಕೆಲ ಖಾಲಿ ಚೆಕ್ಕು ಮತ್ತು ದಾಖಲೆಗಳಿಗೆ ಸಹಿ ...ಹಾಕುವಂತೆ ಬೆದರಿಸಿದ್ದಾರೆ.

ಇದು ಗೌರಿಶಂಕರರ ಬ್ಯಾಂಕ್ ಖಾತೆಯಲ್ಲಿರುವ ಸರಿಸುಮಾರು ಹತ್ತು ...ಲಕ್ಷವನ್ನು ಕಿತ್ತುಕೊಳ್ಳುವ ಯತ್ನ ಮತ್ತು ಖಾಲಿ ಕಾಗದಪತ್ರಗಳ ಮೇಲೆ ಸಹಿ ...ಪಡೆದು ಪೀಠಾಧಿಕಾರಕ್ಕೆ ಸಂಬಂಧಪಟ್ಟಂತೆ ಕೋರ್ಟಿನಲ್ಲಿ ಹೂಡಿರುವ ...ಮೊಕದ್ದಮೆಯನ್ನು ವಾಪಸ್ಸು ಪಡೆಯುವ ಷಡ್ಯಂತ್ರ.

'ಬೇಕಿದ್ದರೆ ಇಲ್ಲೇ ನನ್ನನ್ನು ಕೊಂದುಬಿಡಿ. ಸಹಿ ಮಾತ್ರ ಹಾಕೊಲ್ಲ' ಎಂದು ...ಗೌರಿಶಂಕರರು ಹಠಕ್ಕೆ ಬಿದ್ದಿದ್ದಾರೆ. ಅಲ್ಲಿಗೆ ಜಬರ್‌ದಸ್ತಿಗೆ ಬಂದ ಮಾಜಿ ...ಭಕ್ತರುಗಳ ಗ್ಯಾಂಗ್ ಜಾಗ ಖಾಲಿ ಮಾಡಿದೆ. ಸದ್ಯ ಗೌರಿಶಂಕರ ಸ್ವಾಮೀಜಿಗೆ ...ಉಣ್ಣಲು ಕಾಳಿಲ್ಲ, ಮಠದಲ್ಲಿ ಒಪ್ಪತ್ತು ಊಟಕ್ಕೂ ಗತಿಯಿಲ್ಲ, ತಮ್ಮ ...ಮೇಲೆಯಷ್ಟೆ ಅನಂತರ ನಡೆದ ಗೂಂಡಾದಾಳಿಯ ಬಗ್ಗೆ ದೂರು ಕೂಡ ...ದಾಖಲಾಗಿಲ್ಲ, ಏಕೆಂದರೆ ಅಧಿಕಾರದಲ್ಲಿರುವುದು ಯಡಿಯೂರಪ್ಪನವರ ಸರ್ಕಾರ. ...ಸಿದ್ಧಗಂಗೆಯ ಪೀಠಾಧಿಪತಿ ಶಿವಕುಮಾರ ಸ್ವಾಮೀಜಿಯೆಂದರೆ ಸದ್ಯ ಬಿಜೆಪಿ ...ಸರ್ಕಾರದ ರಾಜಗುರುವಿದ್ದಂತೆ. ಅವರ ವಿರುದ್ಧ ದೂರು ದಾಖಲು ಮಾಡುವ ...ಧೈರ್ಯ ಯಾವ ಪೊಲೀಸ್ ಅಧಿಕಾರಿಗಿದೆ? ■

ಶ್ರೀರಾಮ ಸೇನೆಯ ಆಪರೇಷನ್ ಹಂದಿ ತಲೆ

"ಇದು ಪ್ರಮೋದ್ ಮುತಾಲಿಕ್ ಎಂಬ ವೈದಿಕ ಪೊಮೇನಿಯದೇ ಕೃತ್ಯವೆಂಬ ಬಗ್ಗೆ ಪೊಲೀಸರಿಗಾಗಲಿ ಸರ್ಕಾರಕ್ಕಾಗಲಿ ಅನುಮಾನವೇ ಉಳಿದಿಲ್ಲ. ಸಿಕ್ಕಿಬಿದ್ದವರೆಲ್ಲರೂ 'ಶ್ರೀರಾಮ ಸೇನೆ'ಯ ಸೈನಿಕರೆ.

ಮಸೀದಿಗೆ ಹಂದಿತಲೆ ಹಾಕಿ, ಮುಸ್ಲಿಮರನ್ನು ಕೆರಳಿಸಿ, ಹಿಂದೂ ತಾಕತ್ತನ್ನು ಮೆರೆಯಲು ಹೊರಟ ತಲೆತಿರುಕ ಮುತಾಲಿಕನ 'ಪರಮಭಕ್ತ' ಶೈಲೇಶ್ ಹೊಳ್ಳ, ಆತನ ಸ್ನೇಹಿತರಾದ ನಂದೀಶ್ ಮತ್ತು ಮಹೇಶ ಸದ್ಯ ಪರಪ್ಪನ ಅಗ್ರಹಾರದಲ್ಲಿ ಕಂಬಿ ಎಣಿಸುತ್ತಿರಬೇಕು. ಕಳೆದ ಜುಲೈ 10 ರಂದು ಬೆಂಗಳೂರಿನ ಜೆ.ಸಿ. ನಗರ ಮತ್ತು ಹೆಬ್ಬಾಳದ ಮಸೀದಿಗಳಿಗೆ ಹಂದಿಯ ತಲೆ ಎಸೆದಿದ್ದು ಇದರಿಂದ ರೊಚ್ಚಿಗೆದ್ದ ಮುಸ್ಲಿಮರು ಪ್ರತಿಭಟಿಸಿದ್ದು ಇದು ಹಿಂಸಾರೂಪ ಪಡೆದು ಲಾಠಿಚಾರ್ಜ್ ಮತ್ತು ಗೋಲಿಬಾರ್‌ಗೆ ಕಾರಣವಾಗಿದ್ದು ರಾಜಧಾನಿಯ ಮಟ್ಟಿಗೊಂದು ಕೆಟ್ಟ ಕನಸೇ. ಅಂತಿಮವಾಗಿ ಮುಸ್ಲಿಂ ಮತ್ತು ಹಿಂದೂಗಳ ಸಂಯಮದಿಂದ ಬೆಂಗಳೂರು ಶಾಂತಿಗೆ ಮರಳಿದ್ದು ಕೂಡ ಭರವಸೆಯ ಬೆಳಕೆಸರಿ.



ಮುತಾಲಿಕ್


ಆದರೆ ಇಂಥಾದ್ದೊಂದು ಕುಕೃತ್ಯದ ಹಿಂದಿದ್ದವನು ಪ್ರಮೋದ್ ಮುತಾಲಿಕ್. ಬಹುಶಃ ಬೆಂಗಳೂರು ಉತ್ತರವಲಯದ ಡಿಸಿಪಿ ಉಲ್ಫತ್ ಹುಸೇನ್, ಜೆ.ಸಿ.ನಗರದ ಎಸಿಪಿ ಎಸ್.ವೈ. ಹಾದಿಮನಿ, ಆರ್‌ಎಂಸಿ ಯಾರ್ಡ್‌ನ ಇನ್ಸ್‌ಪೆಕ್ಟರ್ ಕೆಂಚೇಗೌಡ ಮತ್ತು ಜೆ.ಸಿ.ನಗರದ ಇನ್ಸ್‌ಪೆಕ್ಟರ್ ಬೋಪಯ್ಯ ಏನಾದರೂ ಯಾಮಾರಿಬಿಟ್ಟಿದ್ದರೆ ಇಡೀ ಷಡ್ಯಂತ್ರವೇ ಮುಚ್ಚಿಹೋಗಬೇಕಿತ್ತು. ಏಕೆಂದರೆ ಈ ಹಿಂದೆ ಇಂಥ ಅನೇಕ ಕೃತ್ಯಗಳಲ್ಲಿ ದುಷ್ಕರ್ಮಿಗಳು ಪತ್ತೆಯಾಗದೇ ಪೊಲೀಸರು 'ಸಿ' ರಿಪೋರ್ಟ್ ಸಲ್ಲಿಸಿ ಪತ್ತೆಯಾಗದ ಪ್ರಕರಣ ಎಂದು ಕೈಚೆಲ್ಲಿ ಕೂತ ಅದೆಷ್ಟು ಉದಾಹರಣೆಗಳಿಲ್ಲ?

ಮೇಲ್ನೋಟಕ್ಕೆ ಈ ಕೃತ್ಯ ಕೂಡ ಯಾರೋ ಕಿಡಿಗೇಡಿಗಳು ಗಲಾಟೆ ಎಬ್ಬಿಸಲೆಂದೇ ಹುಟ್ಟುಹಾಕಿದಂತೆ ಕಂಡುಬಂದಿತ್ತು. ಹೆಬ್ಬಾಳದ ಫ್ಲೈಓವರ್ ಪಕ್ಕದ ಮಸೀದಿ ಮತ್ತು ಜೆ.ಸಿ.ನಗರ ವ್ಯಾಪ್ತಿಯ ಮುನಿರೆಡ್ಡಿ ಪಾಳ್ಯದ ಮಸೀದಿಗಳಲ್ಲಿ ಜುಲೈ 11 ರ ಬೆಳ್ಳಂಬೆಳಿಗ್ಗೆಯೇ ಹಂದಿ ತಲೆಗಳು ಕಂಡುಬಂದಿದ್ದವು. ಅದು ಶುಕ್ರವಾರ ಬೇರೆ. ಮುಸ್ಲಿಮರ ಪಾಲಿಗೆ 'ಹಂದಿ' ದೈವಘಾತುಕ ಪ್ರಾಣಿ. ಅದರ ತಲೆಯನ್ನು ಮಸೀದಿಗೆ ಹಾಕುವವರ್‍ಯಾರು ಮುಸ್ಲಿಮರಾಗಿರಲಿಕ್ಕಿಲ್ಲ ಎಂಬುದು ಏಂಥವರಿಗೂ ಅರ್ಥವಾಗುವಂತಿತ್ತು.

ನಾಗವಾರದ ಹಂದಿಜೋಗರು

ಬಿಜೆಪಿ ಸರ್ಕಾರ ಇರುವುದಕ್ಕೂ ಇಂಥ ಮುಸ್ಲಿಂ ವಿರೋಧಿ ಕೃತ್ಯಕ್ಕೂ ತಾಳೆಹಾಕಿದ ಮುಸ್ಲಿಮರು ಮೊದಮೊದಲು ರೊಚ್ಚಿಗೆದ್ದರಾದರೂ ಡಿಸಿಪಿ ಉಲ್ಫತ್ ಹುಸೇನ್ ಬಹುತೇಕ ಮುಸ್ಲಿಂ ಮುಖಂಡರನ್ನು ಕರೆಸಿ ಪರಿಪರಿಯಾಗಿ ಬೇಡಿಕೊಂಡ ಫಲವಾಗಿ ಗಲಾಟೆ ಶುರುವಲ್ಲೇ ಶಮನವಾಗಿತ್ತು. ಹಾಗಂತ ಪೊಲೀಸರು ಕೈಕಟ್ಟಿ ಕೂರಲಿಲ್ಲ.





ಹಂದಿ ತಲೆ ಹಾಕಿದ್ದು ಜುಲೈ 10 ರಾತ್ರಿ. ಅಂದರೆ ಯಾರೋ ಅಕ್ಕಪಕ್ಕದ ಏರಿಯಾಗಳ ಕಿಡಿಗೇಡಿಗಳೇ ಮಾಡಿರಬೇಕು. ಅವರಿಗೆ ಹಂದಿ ತಲೆ ಸಿಗಬೇಕೆಂದರೆ ಹಂದಿ ಮಾಂಸದ ಅಂಗಡಿಗಳಿಂದಲೇ ಬರಬೇಕು. ಇಂಥದೊಂದು ಜಾಡು ಹಿಡಿದು ಮೊದಲು ನಾಗವಾರದ ಹಂದಿಜೋಗರ ನಾಯಕ ಯಲಗೂರಯ್ಯನನ್ನು ಹುಡುಕಿ ಹೊರಟ ಪೊಲೀಸರಿಗೆ ಒಂದರ ಮೇಲೊಂದಾಗಿ ವಿಚಿತ್ರ ಘಟನೆಗಳು ಎದುರಾದವು.

ಅದು ಪ್ರಕರಣಕ್ಕೆ ಯಾವುದೇ ರೀತಿಯ ಸಂಬಂಧವಿಲ್ಲದ ಪ್ರಸಂಗ. ಹೆಬ್ಬಾಳದ ಮಸೀದಿಗೆ ಅನತಿದೂರದ ನಾಗವಾರದಲ್ಲಿ ಇಪ್ಪತ್ತೈದು ಹಂದಿಜೋಗರ ಕುಟುಂಬಗಳಿವೆ. ಈ ಪೈಕಿ ನಾಗಮ್ಮ ಎಂಬಾಕೆಯ ಮೇಲೆ ಸ್ಟೀಲ್‌ಪ್ಲೇಟ್ ಕದ್ದ ಆರೋಪ ಹೊರಿಸಿದ ಹಂದಿಜೋಗರ ನಾಯಕ ಯಲಗೂರಯ್ಯ ಆಕೆಯ ವಿರುದ್ಧ ಪಂಚಾಯ್ತಿ ನಡೆಸಿ ಮೂರು ಸಾವಿರ ರೂಪಾಯಿ ದಂಡ ವಿಧಿಸಿದ್ದ. ಹಂದಿ ಮೇಯಿಸಿಕೊಂಡು ಜೀವನ ಸಾಗಿಸುತ್ತಿದ್ದ ನಾಗಮ್ಮನಿಗೆ ಈ ಕಾರಣಕ್ಕೇ ಯಲಗೂರಯ್ಯನ ಮೇಲೆ ಸಿಟ್ಟಿತ್ತು. ಇದೇ ಹೊತ್ತಿಗೆ ಮಸೀದಿಗೆ ಹಂದಿ ತಲೆ ಹಾಕಿದ ಕೇಸಿನ ಮೇಲೆ ಯಲಗೂರಯ್ಯನನ್ನು ಹುಡುಕಿಬಂದಿದ್ದ ಪೊಲೀಸರಿಗೆ ನಾಗಮ್ಮನೇ 'ಯಲಗೂರಯ್ಯ ಊರಲ್ಲಿ ಇಲ್ಲ' ಎಂದು ಸುಳ್ಳು ಹೇಳಿ ಸಾಗಹಾಕಿದ್ದಳು.

ಅದೇ ಹೊತ್ತಿಗೆ ನಾಗವಾರದ ಪಲ್ಲವಿ ಥಿಯೇಟರ್ ಹಿಂಭಾಗದಲ್ಲಿ ಹಂದಿ ಮಾಂಸದ ಅಂಗಡಿ ಇಟ್ಟುಕೊಂಡಿದ್ದ ಮಹದೇವ ಎಂಬಾತ ಆತ್ಮಹತ್ಯೆಗೆ ಯತ್ನಿಸಿದ. ಅಕ್ಕಪಕ್ಕದಲ್ಲಿದ್ದವರೆಲ್ಲ ಸೇರಿ ಆತನನ್ನು ಪಾರು ಮಾಡಿದ್ದರು. ಈತನ ಆತ್ಮಹತ್ಯೆಗೆ ಕಾರಣ ಗೊತ್ತಿಲ್ಲದೇ ನಾಗಮ್ಮ ಇದಕ್ಕೂ ಪಂಚಾಯ್ತಿ ಮುಖಂಡ ಯಲಗೂರಯ್ಯನೇ ಕಾರಣವೆಂದು ಭಾವಿಸಿ 'ನೋಡು ಆ ಯಲಗೂರಯ್ಯ ನಿನಗೂ ಕಾಟ ಕೊಟ್ಟವ್ನೆ. ನನಗೂ ದಂಡ ಹಾಕಿದ್ದಾನೆ. ಈಗ ತಡ ಮಾಡೋದು ಬ್ಯಾಡ. ಅವನ ಮೇಲೆ ಪೊಲೀಸರಿಗೆ ಕಂಪ್ಲೇಂಟ್ ಕೊಡೋಣ' ಎಂದಿದ್ದಾಳೆ. ಆಗ ಬಾಯಿ ಬಿಟ್ಟಿದ್ದಾನೆ ಮಾದೇವ.

ಎರಡು ಹಂದಿ ತಲೆಗಳು

'ಮಸೀದಿಗೆ ಹಾಕಿದ ಹಂದಿ ತಲೇನ ಮಾರಿದ್ದೇ ನಾನು. ಇನ್ನು ಪೊಲೀಸರು ನನ್ನನ್ನ ಬಿಡ್ತಾರಾ? ಅದಕ್ಕೇ ಭಯ ಬಿದ್ದು ನೇಣು ಹಾಕ್ಕೊಳ್ಳಕ್ಕೆ ಹೋಗಿದ್ದೆ' ಎಂದಿದ್ದಾನೆ ಮಾದೇವ. ಬಹುಶಃ ಬೇರೆ ಯಾರಾದರೂ ಆಗಿದ್ದರೆ ಇದನ್ನು ಅಲ್ಲಿಗೇ ಮುಚ್ಚಿಡುತ್ತಿದ್ದರೋ ಏನೋ. ದೇಶಭಕ್ತಿ ಕಾನೂನು, ಕೋಮು-ಸೌಹಾರ್ದತೆ ಎಂಬ ಪದಗಳ ಅರ್ಥವೇ ಗೊತ್ತಿರದ ಅನಕ್ಷರಸ್ಥೆ ನಾಗಮ್ಮ ಮಾದೇವನ ಮನ ಒಲಿಸಿ ನೇರವಾಗಿ ಪೊಲೀಸರ ಎದುರು ತಂದು ನಿಲ್ಲಿಸಿದ್ದಾಳೆ. ಮಾದೇವ ಇದ್ದ ಸಂಗತಿಯನ್ನು ಪೊಲೀಸರೆದುರು ಹೇಳಿಬಿಟ್ಟ.

ಆತನ ಪ್ರಕಾರ ಮಾಟಮಂತ್ರ ಪೂಜೆಗೆಂದು ಎರಡು ಹಂದಿ ತಲೆಗಳನ್ನು ಕೊಂಡೊಯ್ದದ್ದು ಆತನ ಮಾಮೂಲಿ ಗಿರಾಕಿ ಮತ್ತು ಅದೇ ನಾಗವಾರದ ನಿವಾಸಿ ವಸಂತ್‌ಕುಮಾರ್ (ಗೌಪ್ಯತೆ ಮತ್ತು ಪ್ರಾಣ ರಕ್ಷಣೆಯ ದೃಷ್ಟಿಯಿಂದ ಇಲ್ಲಿ ಕೆಲವರ ಹೆಸರನ್ನು ಬದಲಿಸಲಾಗಿದೆ) ಇದು ಗೊತ್ತಾಗಿದ್ದೇ ಮೊದಲು ಆತನನ್ನು ಬಂಧಿಸಿದ ಪೊಲೀಸರಿಗೆ ಗೊತ್ತಾಗಿದ್ದು ಶೈಲೇಶ್ ಹೊಳ್ಳನ ಹೆಸರು.

ವಸಂತ್‌ಗೆ ನಿಜ ಹುನ್ನಾರ ತಿಳಿಸದೇ ಯಾವುದೋ ಪೂಜೆಗೆ ಬೇಕೆಂದು ಆತನಿಂದ ಎರಡು ತಲೆಗಳನ್ನು ತರಿಸಿಕೊಂಡಿದ್ದ ಈ ಶೈಲೇಶ್ ಹೊಳ್ಳ 'ಶ್ರೀರಾಮ ಸೇನೆ'ಯ ಬೆಂಗಳೂರು ಸಂಚಾಲಕ. ರಾಷ್ಟ್ರೀಯ ಹಿಂದೂ ಸೇನೆಯ ರಾಜ್ಯಾಧ್ಯಕ್ಷ ಮತ್ತು ಸ್ವಯಂಘೋಷಿತ 'ಹಿಂದೂ ಟೆರರಿಸ್ಟ್' ಪ್ರಮೋದ್ ಮುತಾಲಿಕ್‌ನ ಪಕ್ಕಾ ಬಂಟ. ವಸಂತನನ್ನು ಕರೆದೊಯ್ದು ಆತನ ಮೂಲಕ ಶೈಲೇಶ್ ಹೊಳ್ಳನನ್ನು ಬೆನ್ನುಹತ್ತಿದ ಪೊಲೀಸರಿಗೆ ಸಿಕ್ಕಿದ್ದು ಹೆಬ್ಬಾಳದ ಸುಮಂಗಲಿ ಸೇವಾಶ್ರಮ ಪಕ್ಕ ಮಹೇಶ್ ಎಂಬಾತ ಬಾಡಿಗೆಗಿದ್ದ ರೂಮು.

ಅಲ್ಲಿ ಶೈಲೇಶ್ ಹೊಳ್ಳ, ಮಹೇಶ ಮತ್ತು ನಂದೀಶ ಮೂವರೂ ಸಿಕ್ಕಿಬಿದ್ದಿದ್ದಾರೆ. ಪೊಲೀಸರು ಬಾಯಿಬಿಡಿಸುತ್ತಿದ್ದಂತೆ "ಹೌದು, ನಾವೇ ಮಾಡಿದ್ದು" ಎಂದು ಒಪ್ಪಿಕೊಂಡ ಶೈಲೇಶ "ಅಮರನಾಥದಲ್ಲಿ ಹಿಂದೂ ದೇವಸ್ಥಾನಕ್ಕೆ ಕಾಶ್ಮೀರಿಗಳು ಜಾಗ ಕೊಡಲಿಲ್ಲ ಎಂದು ಸಿಟ್ಟಿಗೆದ್ದ ನಾವುಗಳು ಈ ರೀತಿ ಪ್ರತಿಭಟಿಸಿದ್ದೇವೆ"

▶▶▶12

ಸ್ಕೆಚ್ಚು ಹುಟ್ಟಿದ್ದೇ ಮುತಾಲಿಕನ ತಲೆಯಲ್ಲಿ

ಕೇವಲ ಶ್ರೀರಾಮಸೇನೆಯ ಸಂಚಾಲಕನೆಂಬ ಒಂದೇ ಕಾರಣಕ್ಕೆ ಪೊಲೀಸರು ಪ್ರಕರಣದ ರೂವಾರಿ ಶೈಲೇಶ್ ಹೊಳ್ಳನಿಗೂ, ಪ್ರಮೋದ್ ಮುತಾಲಿಕ್‌ಗೂ ಸಂಬಂಧ ಕಲ್ಪಿಸುತ್ತಿಲ್ಲ. ಕೃತ್ಯ ನಡೆಯುವ ಕೆಲದಿನಗಳ ಹಿಂದೆ ಅಂದರೆ ಜುಲೈ 3ರತನಕ ಪ್ರಮೋದ್ ಮುತಾಲಿಕ್ ತನ್ನ ಮೊಬೈಲ್ ನಂ.9448056195ನಿಂದ ಶೈಲೇಶ್‌ನ ಮೊಬೈಲ್ ನಂ.9448350988ಗೆ ನಿರಂತರ ಸಂಪರ್ಕದಲ್ಲಿದ್ದಾನೆ. ಜುಲೈ 3ರಂದು ಮೂರು ಬಾರಿ ಶೈಲೇಶನಿಗೆ ಕರೆಮಾಡಿ ಸುದೀರ್ಘವಾಗಿ ಮಾತನಾಡಿದ್ದಾನೆ. ಅಲ್ಲಿಯತನಕ ಸಹಜವಾಗಿ ಪ್ರತಿನಿತ್ಯ ಮಾತಾಡಿಕೊಳ್ಳುತ್ತಿದ್ದ ಶೈಲೇಶ್ ಮತ್ತು ಮುತಾಲಿಕ್ ಜುಲೈ 3ರ ನಂತರ ಪರಸ್ಪರ ಮಾತಾಡುವುದನ್ನೇ ನಿಲ್ಲಿಸಿದ್ದೇಕೆ?

ಇದರರ್ಥ ಆ ಹೊತ್ತಿಗಾಗಲೇ ಸ್ಕೆಚ್ಚು ರೂಪುಗೊಂಡಾಗಿತ್ತೇ? ಎಲ್ಲಿ ತಮ್ಮ ಸಂಬಂಧ ಬಯಲಾಗುತ್ತೋ ಎಂದು ಮೊಬೈಲ್ ಮೂಲಕದ ಸಂಪರ್ಕವನ್ನು ಮುಚ್ಚಿಡಬೇಕಾಗಿತ್ತೇ?


ಹಿಂದೆ ಆಂಧ್ರದ ತಿರುಪತಿಯಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಮತಾಂತರ ಮಾಡುತ್ತಿದ್ದಾರೆಂದು ಹುಯಿಲೆಬ್ಬಿಸಿದ ಕೇಸರಿಗಳೇ ಮನೆಬಾಗಿಲುಗಳ ಮೇಲೆ ಶಿಲುಬೆ ಚಿತ್ರ ಬರೆಯಲು ಹೋಗಿ ಸಿಕ್ಕಿಬಿದ್ದರು. ಮಹಾರಾಷ್ಟ್ರದ ನಾಂದೇಡ್ ಮತ್ತು ತಮಿಳುನಾಡಿನ ಶಿವಕಾಶಿಯಲ್ಲಿ ತಾವೇ ಬಾಂಬ್ ತಯಾರಿಸಲು ಹೋಗಿ ಆರೆಸ್ಸೆಸ್ ಕಾರ್ಯಕರ್ತರು ಪ್ರಾಣತೆತ್ತರು. ಈಗ ಮಸೀದಿಗೆ ಹಂದಿ ತಲೆ ಹಾಕಲು ಹೋಗಿ ಮುತಾಲಿಕ್‌ನ ಹಿಂದೂ ಸೈನಿಕರು ಜೈಲುಪಾಲಾಗಿದ್ದಾರೆ. ಬಾಯಿಬಿಟ್ಟರೆ ಸಮಸ್ತ ಹಿಂದೂಗಳ ರಕ್ಷಣೆಗೆಂದು ತಾನೇ 'ಜಿಪಿಎ' ಪಡೆದವನಂತೆ ಹಾರಾಡುವ ಮುತಾಲಿಕ್ ತನ್ನ ಸೇನೆಯಲ್ಲಿ 1130 ಆತ್ಮಹತ್ಯಾ ದಾಳಿಕೋರರಿದ್ದಾರೆ ಎಂದು ಬೊಬ್ಬೆ ಹಾಕುತ್ತಾನೆ.

ಮೊನ್ನೆ ನಡೆದ ಬೆಂಗಳೂರು ಸರಣಿ ಸ್ಫೋಟದ ಹಿಂದೆ ಮುತಾಲಿಕ್‌ನ ಕೈವಾಡವಿಲ್ಲದಿರಬಹುದು ಅಥವಾ ಇಂತ ಆತ್ಮಹತ್ಯಾದಳದ ಮನಸ್ಥಿತಿಯೇ ಕೆಲಸ ಮಾಡಿರಲೂಬಹುದು. ಭಯೋತ್ಪಾದಕ ಮುಸ್ಲಿಮನಿರಲಿ, ಹಿಂದೂ ಆಗಿರಲಿ ಅವರ ಜಾತಿ ಮಾತ್ರ ಒಂದೇ. ಈಗ ಮಸೀದಿಗೆ ಹಂದಿ ತಲೆ ಹಾಕಿದ ಕೇಸಿನಲ್ಲಿ ಮುತಾಲಿಕ್‌ನ ನೇರಪಾತ್ರವಿರುವುದು ಎಂಥವರಿಗೂ ಸ್ಪಷ್ಟವಾಗುತ್ತಿದೆ. ಹಾಗಿದ್ದೂ ಪೊಲೀಸರು ಶೈಲೇಶ್ ಹೊಳ್ಳನಂಥ ಮಾಮೂಲಿ ಸೈನಿಕನನ್ನು ಜೈಲಿಗೆ ಹಾಕುತ್ತಾರೆಯೇ ಹೊರತು ಮುತಾಲಿಕ್‌ನನ್ನು ಯಾಕೆ ಮುಟ್ಟಲ್ಲ?

ಮುತಾಲಿಕ್‌ನ ಸ್ಥಾನದಲ್ಲಿ ಬೇರೆ ಯಾರೇ 'ಮುಸ್ಲಿಂ' ಇದ್ದರೆ ಬಿಡುತ್ತಿದ್ದರೇ?



ಮಂಡ್ಯ: ಆಯುಕ್ತ ರಾಮಸ್ವಾಮಿಯಿಂದ ಪುರಸಭೆ ಉಳಿಯುವುದೇ!?



ರಾಮಸ್ವಾಮಿ

ಮಂಡ್ಯ ನಗರಸಭೆಯ ಆಯುಕ್ತನಾಗಿರುವ ರಾಮಸ್ವಾಮಿ ಹುಟ್ಟಿದ್ದು ಸಾಮಾನ್ಯ ರೈತ ಕುಟುಂಬದಲ್ಲಿ, ವೃತ್ತಿ ಜೀವನ ಪ್ರಾರಂಭಿಸಿದ್ದು ಬೆರಳಚ್ಚುಗಾರನಾಗಿ. ಆದರೆ ಇವತ್ತು ಈತ ಕೋಟ್ಯಂತರ ರೂಪಾಯಿ ಆಸ್ತಿಗಳ ಕುಬೇರ! ಮೊನ್ನೆ ಈತನ ಅಕ್ರಮ ಆಸ್ತಿಪಾಸ್ತಿಯನ್ನು ಜಪ್ತಿ ಮಾಡುವಂತೆ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದಲ್ಲಿನ ವಿವರಗಳನ್ನು ನೋಡಿ ಮಂಡ್ಯದ ಜನತೆ ಬೆಚ್ಚಿಬಿದ್ದಿದೆ.





ಮೈಸೂರಿನ ಸ್ಟರ್ಲಿಂಗ್ ಮತ್ತು ಸ್ಕೈಲಾರ್ಕ್ ಥಿಯೇಟರ್, ಫೋರ್ಟ್ ಮಹಲ್ ವಿಶ್ವೇಶ್ವರ ನಗರದಲ್ಲಿ 12 ಮಳಿಗೆಗಳುಳ್ಳ ಕಮರ್ಷಿಯಲ್ ಕಾಂಪ್ಲೆಕ್ಸ್, ಹಾಸನದ ಸಹ್ಯಾದ್ರಿ ಥಿಯೇಟರ್, ಮಾಳವಿಕಾ ವಿದ್ಯಾಸಂಸ್ಥೆಯ ಹೆಸರಿನಲ್ಲಿ ಮೂರು ಬಿಲ್ಡಿಂಗ್‌ಗಳು, ಹಾಸನದಲ್ಲಿ 11 ಸೈಟುಗಳು, ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ದಾರಿಯಲ್ಲಿನ ಅಮೃತಹಳ್ಳಿಯಲ್ಲೊಂದು ಸೈಟು, ತಮಿಳುನಾಡಿನಲ್ಲೂ ಜಮೀನು, ಒಂದೂವರೆ ಕೆಜಿ ಚಿನ್ನ, 4 ಕೆಜಿ ಬೆಳ್ಳಿ, ಮಾವ ಅತ್ತೆ ಮತ್ತು ತನ್ನ ಹೆಂಡತಿಯ ಹೆಸರಿನ ಒಟ್ಟು 20 ಅಕೌಂಟ್‌ಗಳಲ್ಲಿ ಹಣ...... ಇದು ರಾಮಸ್ವಾಮಿ ಮಂಡ್ಯಕ್ಕೆ ಬರುವ ಮುಂಚೆಯೇ ಕೆ.ಆರ್.ಪುರ ನಗರಸಭೆ ಆಯುಕ್ತನಾಗಿದ್ದಾಗ ಮಾಡಿಕೊಂಡ ಆಸ್ತಿ.

ಇನ್ನು ಮಂಡ್ಯದಲ್ಲಿ ಪ್ರತಿನಿತ್ಯವೂ ಈತ ನಡೆಸುತ್ತಿರುವ ಅವ್ಯವಹಾರಗಳನ್ನು ಸೇರಿಸಿದರೆ ರಾಮಸ್ವಾಮಿ ಗುಡ್ಡೆ ಹಾಕಿಕೊಂಡಿರುವುದು ಎಷ್ಟಾಗುತ್ತೋ ತನಿಖೆಯಾಗಬೇಕಿದೆ.

ಸಾಮಾನ್ಯ ನೌಕರ ಕೋಟ್ಯಾಧಿಪತಿಯಾದ!

ಆಯುಕ್ತ ರಾಮಸ್ವಾಮಿಯೇನು ಹುಟ್ಟುತ್ತಲೇ ಬೆಳ್ಳಿ ಚಮಚದಲ್ಲಿ ಹಾಲು ಕುಡಿದವನಲ್ಲ, ಚನ್ನಪಟ್ಟಣ ತಾಲೂಕಿನ ರಾಮಾಪುರದ ಎರಡು ಎಕರೆ ಜಮೀನು ಹೊಂದಿದ್ದ ಸಾಮಾನ್ಯ ಕುಟುಂಬದಿಂದ ಬಂದ ರಾಮಸ್ವಾಮಿ, ತುತ್ತಿನ ಚೀಲ ತುಂಬಿಸಿಕೊಳ್ಳಲು ಬೆಂಗಳೂರು ಡೈರಿಯಲ್ಲಿ ಬೆರಳಚ್ಚುಗಾರನಾಗಿ ಕೆಲಸಕ್ಕೆ ಸೇರಿದ. ಆದರೆ ಯಾವಾಗ ಆತನಿಗೆ ರಾಜಕಾರಣಿಗಳ, ಅಧಿಕಾರಿಗಳ ಸಂಪರ್ಕ ಸಿಕ್ಕಿತೋ ಆಗ ಅವರ ಚೇಲನಾಗಿ ಪೌರಾಡಳಿತ ಇಲಾಖೆಗೆ ಅಕೌಂಟೆಂಟ್ ಆಗಿ 1985ರಲ್ಲಿ ವರ್ಗವಿಸಿಕೊಂಡ. ಅಲ್ಲಿಂದ ಶುರು ಮಾಡಿದ ಮೇಯುವ ಯೋಜನೆ ಶುರುವಾಯಿತು. ಅದು ಎಷ್ಟು ಲಾಭಕರವಾಗಿತ್ತೆಂದರೆ ಈತ ಅಕ್ರಮವಾಗಿ ಸಂಪಾದಿಸಿದ ಹಣವನ್ನು ರಾಜಕಾರಣಿಗಳಿಗೆ ಮೇಯಿಸುತ್ತಲೇ ಈಗ ಆಯುಕ್ತನಾಗಿದ್ದಾನೆ.

ಮೊದಲಿಗೆ ಈತ ಕೆಜಿಎಫ್ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಆಯುಕ್ತನಾಗಿದ್ದಾಗ ಅಲ್ಲಿ ಸೈಟು ಅವ್ಯವಹಾರ ಮತ್ತು ಕಾಮಗಾರಿಗಳ ಖೊಟ್ಟಿ ಬಿಲ್ಲುಗಳ ಕಾರಣದಿಂದ 1996ರಲ್ಲಿ ಸಸ್ಪೆಂಡಾಗಿದ್ದ. ಆದರೆ ಅದರಿಂದ ಆತ ಯಾವ ರೀತಿಯಲ್ಲೂ ಧೃತಿಗೆಡಲಿಲ್ಲ. ಹಿಂದೆ ಮಾಡಿಕೊಂಡಿದ್ದ ಹಣವನ್ನು ಮಂತ್ರಿಗಳಿಗೆ ತಿನ್ನಿಸಿ ಅಮಾನತ್ತನ್ನು ರದ್ದುಪಡಿಸಿಕೊಂಡ ರಾಮಸ್ವಾಮಿ ಸೀದಾ ಹೋಗಿ ಕುತಿದ್ದು ಬೆಂಗಳೂರಿನ ಹೊರವಲಯದ ಕೆ.ಆರ್.ಪುರ ನಗರಸಭೆಯ ಆಯುಕ್ತನಾಗಿ.

ಅಲ್ಲಿಯೂ ಈತ ನಡೆಸಿದ ಮೇಯ್ದಾಟ ಅಷ್ಟಿಷ್ಟಲ್ಲ. ಇದನ್ನು ಗಮನಿಸುತ್ತಲೇ ಬಂದಿದ್ದ ಕೆಲವರು ಲೋಕಾಯುಕ್ತರಿಗೆ ದೂರು ನೀಡಿದ್ದರಿಂದ 2002ರ ನವೆಂಬರ್ 20ರಂದು ಈತನ ಮನೆ ಮೇಲೆ ದಾಳಿ ನಡೆದಿತ್ತು. ಅಷ್ಟೊತ್ತಿಗಾಗಲೇ ಲೋಕಾಯುಕ್ತರು ಇವನಂತಹ ನೂರಾರು ತಿಮಿಂಗಿಲಗಳನ್ನು ನೋಡಿದ್ದರೂ ರಾಮಸ್ವಾಮಿಯ ಆಸ್ತಿ ವಿವರ ನೋಡಿ ಸ್ವತಃ ಅವರೇ ಗಾಬರಿಗೊಂಡಿದ್ದರು! ಈಗಾಗಲೇ ವಿವರಿಸಿರುವ ಆಸ್ತಿ ಪಾಸ್ತಿಗಳಲ್ಲದೆ ಬೇನಾಮಿ ಹೆಸರಿನ ಆಸ್ತಿಪಾಸ್ತಿಗಳ ಲೆಕ್ಕವಿವರಗಳನ್ನೂ ಲೋಕಾಯುಕ್ತರು ಶೋಧಿಸಿದರು.

ತನ್ನ ಹೆಸರಿನಲ್ಲಿ ಬೆಂಗಳೂರಿನ ಕಾವೇರಿ ಗೃಹನಿರ್ಮಾಣ ಸಹಕಾರ ಸಂಘ ಲೇಔಟ್‌ನಲ್ಲಿನ ಬಹುಕೋಟಿ ಬೆಲೆಬಾಳುವ ಸೈಟಿದ್ದರೆ, ಹೆಂಡತಿಯ ತಂದೆ-ತಾಯಿಯರ ಹೆಸರಿನಲ್ಲಿ ಹಾಸನದ ಆಡಲಹಳ್ಳಿಯಲ್ಲಿ ಸರ್ವೇ ನಂ. 54/1ರಲ್ಲಿ 10 ಗುಂಟೆ ಸೈಟು, ಚಿಕ್ಕಹೊನ್ನೇನಹಳ್ಳಿಯಲ್ಲಿ 32 ಗುಂಟೆಯ ಸೈಟು ಹೀಗೆ ಹತ್ತಾರು ನಿವೇಶನಗಳಿವೆ. ಇದಲ್ಲದೆ ಹಾಸನದ ಸಹ್ಯಾದ್ರಿಯ ಥಿಯೇಟರ್‌ನ ಮಾಲೀಕನೂ ಈತನೇ ಆಗಿದ್ದಾನೆ. ಮೈಸೂರಿನ ಸ್ಟರ್ಲಿಂಗ್ ಥಿಯೇಟರ್ ಮತ್ತು ಸ್ಕೈಲೈನ್ ಥಿಯೇಟರ್‌ಗಳನ್ನು ಕೊಂಡಿರುವ ರಾಮಸ್ವಾಮಿ, ಮಾಳವಿಕಾ ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ ಹಲವಾರು ಆಸ್ತಿಪಾಸ್ತಿ ಮಾಡಿಕೊಂಡಿದ್ದಾನೆ.

ಕರ್ನಾಟಕದಲ್ಲಿ ಮಾತ್ರ ಸಾಲದೆಂದು ತಮಿಳುನಾಡಿನ ಬಾಗಲೂರಿನಲ್ಲಿ ಜೈನ್ ಫಾರ್ಮ್ಸ್ ಹೆಸರಿನಲ್ಲಿ ಪ್ಲಾಟ್ ನಂ.207ಅನ್ನು ಖರೀದಿಸಿದ್ದಾನೆ. ಹೊಸೂರು ತಾಲೂಕಿನ ಬೆಳ್ತೂರಿನಲ್ಲಿ ಸೈಟ್‌ನಂ.21 ಈತನದ್ದೇ ಎನ್ನುವುದಕ್ಕೆ ಲೋಕಾಯುಕ್ತರಿಗೆ ದಾಖಲೆಗಳು ಸಿಕ್ಕಿವೆ.

ರಾಜಾಜಿನಗರದ ಸಿಟಿಜನ್ ಕೋ-ಆಪರೇಟಿವ್ ಬ್ಯಾಂಕ್‌ನ ಖಾತೆ ನಂ.2822, ವಿಜಯಬ್ಯಾಂಕ್‌ನ ಕೆ.ಆರ್.ಪುರ ಶಾಖೆಯಲ್ಲಿನ ಖಾತೆ ನಂ.11915, ಎಂ.ಜಿ.ರಸ್ತೆಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಖಾತೆ ನಂ. 12729 ಹೀಗೆ ಹಲವಾರು ಬ್ಯಾಂಕ್‌ಗಳಲ್ಲಿ ಹಣ ಇಟ್ಟಿದ್ದಾನೆ. ಇಷ್ಟೂ ಸಾಲದೆಂಬಂತೆ ತನ್ನ ಹೆಂಡತಿಯ ಹೆಸರಿನಲ್ಲಿ ಮಾವ ಎಚ್.ಕೆ.ರಂಗಯ್ಯ ಮತ್ತು ಅತ್ತೆ ಲಲಿತಮ್ಮನ ಹೆಸರಿನಲ್ಲೂ ಹಲವಾರು ಬ್ಯಾಂಕ್ ಅಕೌಂಟ್‌ಗಳಲ್ಲಿ ಹಣ ಮಡಗಿರುವುದಕ್ಕೆ ಲೋಕಾಯುಕ್ತರು ದಾಖಲೆ ಸಂಗ್ರಹಿಸಿದ್ದಾರೆ.

ಹೀಗೆ ಲೋಕಾಯುಕ್ತರು ದಾಖಲೆಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ಇವೆಲ್ಲವನ್ನೂ ಈತ ಮಾರದಂತೆ ಜಪ್ತಿ (ಅಟ್ಯಾಚ್‌ಮೆಂಟ್) ಮಾಡಲು ಶಿಫಾರಸ್ಸು ಮಾಡಿದ್ದಾರೆ. ಇವು 2002ರ ನವೆಂಬರ್‌ವರೆಗೆ ಮಾಡಿದ್ದ ಆಸ್ತಿಯಾದರೆ ಅಲ್ಲಿಂದ ಮುಂದಕ್ಕೆ ಮಾಡಿಕೊಂಡಿರುವುದು ಹಳೆಯದನ್ನು ಮೀರಿಸುವಂತಿದೆ ಎಂಬುದು ಈತನ ಆಪ್ತವಲಯದ ಅಭಿಪ್ರಾಯವಾಗಿದೆ.

ಅಧ್ಯಕ್ಷರಿಗೆ ನಾಮ ತಿಕ್ಕಿದ

ಇಷ್ಟೊಂದು ಭ್ರಷ್ಟಾಚಾರದ ಆರೋಪ ಹೊತ್ತಿರುವ ರಾಮಸ್ವಾಮಿಯನ್ನು ಮನೆಯಲ್ಲಿ ಕೂಡಿಸುವುದು ಬಿಟ್ಟು, ಮಂಡ್ಯ ನಗರಸಭೆಗೆ ಆಯುಕ್ತನನ್ನಾಗಿ ಕಳಿಸಲಾಯಿತು. ಮೇಯುವುದರಲ್ಲಿ ಸಾಕಷ್ಟು ಅನುಭವ ಸಂಪಾದಿಸಿರುವ ಈತನಿಗೆ ಮಂಡ್ಯ ನಗರಸಭೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವುದು ಕಷ್ಟವಾಗಲಿಲ್ಲ. ಮೊದಲಿಗೆ ಅಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ನಗರಸಭೆ ಸದಸ್ಯ ರೌಡಿ ಕಿಟ್ಟಿ, ಹೊಸಳ್ಳಿ ಬೋರೇಗೌಡ ಮುಂತಾದವರು ಈತನ ಜೊತೆ ಅಡ್ಜಸ್ಟ್ ಆಗಿ ತಾವೂ ಮೇದು ಈತನನ್ನೂ ಪೊಗದಸ್ತಾಗಿ ಮೇಯಲು ಬಿಟ್ಟರು.



ಚಿತ್ರಮಂದಿರ



ಕಾಂಪ್ಲೆಕ್ಸ್

ಕಳೆದ ಸಾಲಿನಲ್ಲಿ ವಿಜಯಲಕ್ಷ್ಮಿಯ ಅಧ್ಯಕ್ಷಾವಧಿ ಮುಗಿಯುವ ಕೊನೆ ಹಂತದಲ್ಲಿ ಆಕೆಯಿಂದ 149 ಕಡತಗಳಿಗೆ ಅರ್ಜೆಂಟಾಗಿ ಸಹಿ ಹಾಕಿಸಿಕೊಂಡ ರಾಮಸ್ವಾಮಿ ಆ ಮೂಲಕವೇ ಲಕ್ಷಾಂತರ ಹಣವನ್ನು ಗುಳುಂ ಮಾಡಿರುವುದಕ್ಕೆ ನಗರಸಭೆಯ ಸಿಬ್ಬಂದಿಯೇ ಸಾಕ್ಷಿಯಾಗಿದ್ದಾರೆ. ಹಾಗೆಯೇ ನಗರಸಭೆಯ ಆಡಳಿತಾಧಿಕಾರಿಯಾಗಿರುವ ಜಿಲ್ಲಾಧಿಕಾರಿಗಳ ಸಹಿಯನ್ನು ಹಾಕಿಸದೇ, ಆಗದೇ ಇರುವ ಕಾಮಗಾರಿಗಳ ಬಿಲ್ಲುಗಳನ್ನೂ ಪಾಸುಮಾಡುವ ಪವಾಡಕ್ಕೂ ರಾಮಸ್ವಾಮಿಯೇ ಕಾರಣನಾಗಿದ್ದಾನೆ.

ಈಗಿನ ಅಧ್ಯಕ್ಷೆ ಕೆ.ಸಿ.ನಾಗಮ್ಮನವರ ಅಸಹಾಯಕತೆಯನ್ನು ಬಳಸಿಕೊಂಡು ನುಂಗಿ ನೀರು ಕುಡಿಯುವ ತನ್ನ ಚಾಳಿಯನ್ನು ಈತ ಯಥಾಪ್ರಕಾರ ಮುಂದುವರೆಸುತ್ತಿದ್ದಾನೆ. ತಮಿಳು ಕಾಲೋನಿ ಸ್ಲಂಗೆ ಬೆಂಕಿ ಬಿದ್ದಾಗ 1200 ರೂ.ಬೆಲೆಯ ಮನೆ ಸಾಮಾನುಗಳನ್ನು ಕೊಡಬೇಕೆಂದು ಮಂಜೂರಾಗಿತ್ತು, ಅದರಲ್ಲಿ ಅರ್ಧದಷ್ಟು ಬೆಲೆಯ ಸಾಮಾನುಗಳೂ ಅವರಿಗೆ ದಕ್ಕಿಲ್ಲ ಎಂಬುದು ಮೇಲ್ನೋಟಕ್ಕೆ ಎದ್ದು ಕಾಣುತ್ತಿದ್ದರೂ ಅದೇ ಏರಿಯಾದ ನಗರಸಭೆ ಉಪಾಧ್ಯಕ್ಷ ರಮೇಶ್ ಸುಮ್ಮನಿರುವುದೇಕೋ ಗೊತ್ತಿಲ್ಲ.

ಕಸದಲ್ಲೂ ಹಣ

ಮಂಡ್ಯನಗರದ ತ್ಯಾಜ್ಯ ವಿಲೇವಾರಿಯನ್ನು ಮಾಡಲಾಗಿದೆಯೆಂದು ಕಳೆದ ವರ್ಷ 1 ಕೋಟಿ ರೂ. ಬಿಡುಗಡೆ ಮಾಡಿಕೊಂಡಿದ್ದರು, ಈ ಸಾಲಿನಲ್ಲಿ ಮತ್ತೆ ಅದೇ ಕಾಮಗಾರಿಗೆ 2 ಕೋಟಿ ರೂ. ಬಿಡುಗಡೆ ಮಾಡಿಕೊಂಡಿರುವುದು ಯಾತಕ್ಕಾಗಿ ಎಂಬುದಕ್ಕೆ ಆಯುಕ್ತ ಉತ್ತರ ಹೇಳಬೇಕಿದೆ. ತ್ಯಾಜ್ಯ ವಿಲೇವಾರಿಯ ಲೆಕ್ಕ ತೋರಿಸಿ ಡೀಸೆಲ್‌ನ ಲೆಕ್ಕದಲ್ಲಿ ಲಕ್ಷಾಂತರ ಗುಳುಂ ನಡೆಯುತ್ತಿದೆ.

ಈತನ ಎಲ್ಲಾ ಪರಮಭ್ರಷ್ಟ ಕೃತ್ಯಗಳಿಗೆ ಜೂನಿಯರ್ ಇಂಜಿನಿಯರ್ ಶಶಿಕುಮಾರ್, ಶಿವರಾಜು, ಎಇಇ ಶ್ರೀನಿವಾಸ್, ಶಿವರಾಮಯ್ಯ ಮತ್ತು ಸ್ಟೋರ್‌ಕೀಪರ್ ರಾಜಣ್ಣ ಸಹಕಾರಿಯಾಗಿದ್ದಾರೆಂದು ನಗರಸಭೆಯ ಮೂಲಗಳು ಹೇಳುತ್ತವೆ. ಬ್ಲೀಚಿಂಗ್ ಪೌಡರ್, ಫೆನಾಯಿಲ್, ಸೊಳ್ಳೆ ಔಷಧಿಗಳಲ್ಲೂ ಸುಳ್ಳು ಲೆಕ್ಕ ತೋರಿಸಲಾಗಿದೆಯೆಂಬ ಆರೋಪಕ್ಕೂ ಇವರು ಉತ್ತರ ಹೇಳಬೇಕಿದೆ.

ಶಾಸಕರಿಗೂ ಪಾಲಿದೆಯಾ?

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯದ ಜನತೆಗೆ ತಾನು ಮಾಡಿದ್ದೇನು ಎಂಬುದನ್ನು ತೋರಲು ಬಣ್ಣಬಣ್ಣದ ಪುಸ್ತಕಗಳನ್ನು ಪ್ರಿಂಟ್ ಹಾಕಿದ್ದ ಎಂ.ಶ್ರೀನಿವಾಸ್ ಅದರಲ್ಲಿ ಹೇಳಿದ್ದರಲ್ಲಿ ಅರ್ಧವನ್ನೂ ಮಾಡಿರಲಿಲ್ಲ, ಆದರೂ ಮತ್ತೆ ಗೆದ್ದು ಬಂದ ಶ್ರೀನಿವಾಸ್ ರಾಮಸ್ವಾಮಿಯ ಜೊತೆ ಅಡ್ಜಸ್ಟ್ ಆಗಿಬಿಟ್ಟಿದ್ದಾರೆಂದು ಜನರು ಹೇಳಲೂ ಕಾರಣವಿದೆ. ಸುಳ್ಳು ಕಾಮಗಾರಿಗಳಲ್ಲಿ ಮತ್ತು ತಿಂಗಳ ಮಾಮೂಲಿಯಲ್ಲಿ ಶಾಸಕರಿಗೂ ಪಾಲಿದೆಯೆಂಬುದು ಸತ್ಯವಲ್ಲ ಎಂದು ಅವರೇ ಸಾಬೀತುಮಾಡಬೇಕಿದೆ. ಏಕೆಂದರೆ ಇದುವರೆಗೂ ರಾಮಸ್ವಾಮಿಯ ಭಾನಗಡಿಗಳ ವಿರುದ್ಧ ಅವರು ಒಮ್ಮೆಯೂ ಮಾತನಾಡಿದ ಉದಾಹರಣೆಗಳಿಲ್ಲ.

ಕೆ.ಆರ್.ಪುರ ನಗರಸಭೆಯಲ್ಲಿದ್ದಾಗ ಮಾಡಿಕೊಂಡ ಆಸ್ತಿಯನ್ನು ಲೋಕಾಯುಕ್ತರ ಶಿಫಾರಸ್ಸಿನ ಮೇರೆಗೆ ಸರ್ಕಾರವು ಜಪ್ತಿ ಮಾಡಿ ಮೊನ್ನೆ ಆದೇಶ ಹೊರಡಿಸಿದೆ. ಆದರೆ ಮಂಡ್ಯದ ಜನತೆಯ ಹಣವನ್ನು ಗುಳುಂ ಮಾಡಿ ಈತ ಸಂಪಾದಿಸಿರುವ ಹಣವನ್ನು ಕಕ್ಕಿಸುವವರು ಯಾರು?

■ ವರದಿಗಾರ

▶▶▶11

ಆಪರೇಷನ್ ಹಂದಿ ತಲೆ

ಎಂದು ದುಷ್ಕೃತ್ಯಕ್ಕೆ ಧಾರ್ಮಿಕ ಹಣೆಪಟ್ಟಿ ಕಟ್ಟುವ ನಾಟಕವಾಡಿದ. ಆದರೆ ವಸಂತ್ ಸೆರೆಸಿಕ್ಕ ನಂತರ ಹಲವಾರು ದಿನಗಳಿಂದ ಶೈಲೇಶ್ ಹೊಳ್ಳನ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದ ಪೊಲೀಸರಿಗೆ ಆತ ಪಕ್ಕಾ ಮುತಾಲಿಕ್‌ನ ಸಂತತಿಯೆಂಬ ಬಗ್ಗೆ ಯಾವುದೇ ಅನುಮಾನಗಳಿರಲಿಲ್ಲ.

ಶೈಲೇಶ್ ಹೊಳ್ಳ

ಶೈಲೇಶ್ ಹೊಳ್ಳ ಮೂಲತಃ ಉಡುಪಿಯ ವಿಶ್ವಹಿಂದೂ ಪರಿಷತ್ ಕಾರ್ಯಕರ್ತ ನರಸಿಂಹ ಹೊಳ್ಳ ಎಂಬಾತನ ಮಗ. ಬಾಲ್ಯದಿಂದಲೂ ಚಡ್ಡಿ ತೊಟ್ಟು ದೊಣ್ಣೆ ತಿರುಗಿಸಿದ ಆರೆಸ್ಸೆಸ್ ಹಿನ್ನೆಲೆಯಿಂದ ಬಂದಿದ್ದ ಶೈಲೇಶ್ ಬೆಂಗಳೂರಿನ ಆರ್.ಸಿ. ಕಾಲೇಜಿನಲ್ಲಿ ಬಿಕಾಂ ಓದುತ್ತಿದ್ದವನು ಅದನ್ನು ಅರ್ಧಕ್ಕೇ ಕೈಬಿಟ್ಟು ಭಜರಂಗದಳದ ಸಂಘಟನೆಗಿಳಿದಿದ್ದ ಕ್ರಮೇಣ ಹೆಬ್ಬಾಳದಲ್ಲಿ 'ವಾಸು' ಅಗರಬತ್ತಿ ಮತ್ತು ಬ್ಯಾಂಬಿನೊ ಶ್ಯಾವಿಗೆಯ ಏಜೆನ್ಸಿ ಹಿಡಿದ. ಈತನ ಪಕ್ಕಾ ಸಹಚರರೇ ನಂದೀಶ ಮತ್ತು ವಾಸು. ಇವರಿಬ್ಬರೂ ಶ್ರೀರಾಮ ಸೈನಿಕರೆ. ಕಳೆದ ಒಂದು ವರ್ಷದಿಂದ ಎಲ್ಲೆಲ್ಲಿ ಮುತಾಲಿಕ್‌ನ ಸಭೆಯಿರುತ್ತದೋ ಅಲ್ಲಿಗೆಲ್ಲಿ ಶೈಲೇಶ್ ಇವರಿಬ್ಬರನ್ನು ಕರೆದೊಯ್ದಿದ್ದ, ತನ್ನ ಮತ್ತೊಬ್ಬ 'ಗುರು' ರಾಘವೇಶ್ವರ ಭಾರತಿಯ ಗೋರಕ್ಷಕ ಸಭೆಗಳಿಗೂ ಚಕ್ರವರ್ತಿ ಸೂಲಿಬೆಲೆ ಎಂಬ ತಲೆತಿರುಕ ಲೇಖಕ ಕಂ ಹಾಲಿ ಆರ್ಟ್ ಆಫ್ ಲೀವಿಂಗ್‌ನ ಅರೆಬರೆ ಸನ್ಯಾಸಿಯ ಉಪನ್ಯಾಸಗಳಿಗೂ ಕರೆದೊಯ್ಯುತ್ತಿದ್ದ.

ಈ ಪೈಕಿ ನಂದೀಶ ಬಸವರಾಜು ಎಂಬಾತನ ಮಗ. ಐದು ತಿಂಗಳ ಹಿಂದಷ್ಟೇ ಬಿಎಂಟಿಸಿಯಲ್ಲಿ ಕಂಡಕ್ಟರ್ ಕೆಲಸಕ್ಕೆ ಸೇರಿಕೊಂಡಿದ್ದ. ಮಹೇಶ ಎಂಬಾತ ಖಾಸಗಿ ಕಾರಿನ ಡ್ರೈವರ್ ಮತ್ತು ಕೃಷ್ಣಪ್ಪ ಎಂಬ ಕೂಲಿಯ ಮಗ. ಈ ಮೂವರೂ ಹೆಬ್ಬಾಳದ ಮಹೇಶನ ರೂಮಿನಲ್ಲಿ ಪ್ರತಿನಿತ್ಯ ಕೂತು ಬೈಠಕ್ ಮಾಡಿದ್ದಾರೆ. ಈ ರೂಮಿನಲ್ಲಿ ಪೊಲೀಸರಿಗೆ ದೊರೆತ ಅಸಂಖ್ಯಾತ 'ಓಲ್ಡ್‌ಮಂಕ್' ರಮ್ಮಿನ ಬಾಟಲಿಗಳು ಇವರ ಪ್ರತಿಸಂಜೆಯ ಬೈಟಕ್‌ಗೆ ಸಾಕಷ್ಟು ಪುರಾವೆ ಒದಗಿಸುತ್ತವೆ. ಇಲ್ಲೇ ಮಸೀದಿಗಳಿಗೆ ಹಂದಿ ತಲೆ ಹಾಕುವ ಸ್ಕೆಚ್ಚು ರೂಪುಗೊಂಡಿದೆ. ಇವರೊಂದಿಗೆ ಪ್ರಶಾಂತ ಮತ್ತು ಬಾಬು ಅಲಿಯಾಸ್ ಡಾಬರ್ ಎಂಬಿಬ್ಬರು ಪೋರ್ಕಿಗಳು ಕೈಜೋಡಿಸಿದ್ದಾರೆ.

ಆಪರೇಷನ್ ಹಂದಿ ತಲೆ

ಆದರೆ ಇವರೆಲ್ಲ ಸೇರಿ ಹಂದಿ ತಲೆಗಾಗಿ ಅವಲಂಬಿಸಿದ್ದು ವಸಂತ್ ಮತ್ತು ಗಣೇಶ್ ಎಂಬಿಬ್ಬರು ಅಮಾಯಕರನ್ನು. ಇವರಿಬ್ಬರೂ ಪ್ರತಿನಿತ್ಯ ಓಲ್ಡ್‌ಮಂಕ್ ರಮ್ ಕುಡಿದು ಹಂದಿ ಮಾಂಸ ತಿನ್ನಲೆಂದು ಮಹೇಶನ ರೂಮಿಗೆ ಬರುತ್ತಿದ್ದರು.. "ನನ್ನ ಬಿಜಿನೆಸ್ ಇಂಪ್ರೂವ್ ಆಗೋದಿಕ್ಕೆ, ಕೇರಳದ ಮಾಂತ್ರಿಕನೊಬ್ಬ ಮಾಟ ಮಾಡಿಕೊಡ್ತೀನಿ" ಅಂತ ಹೇಳಿದ್ದಾನೆ. ಅದಕ್ಕೆ ಮೂರು ಹಂದಿ ತಲೆಬೇಕಂತೆ. ಪಕ್ಕಾ ಬ್ರಾಹ್ಮಣನಾದ ನಾನು ಹಂದಿ ಮಾಂಸದ ಅಂಗಡಿಗೆ ಹೋಗುವಂತಿಲ್ಲ. ಹೇಗಿದ್ದರೂ ವಾರಕ್ಕೆ ಮೂರು ದಿನ ಹಂದಿಮಾಂಸ ತಿನ್ನುವ ನೀನೇ ಹೋಗಿ ಹಂದಿತಲೆ ತಂದು ಬಿಡು ಎಂದಿದ್ದಾನೆ ಶೈಲೇಶ್ ಹೊಳ್ಳ. ನಂಬಿದ ವಸಂತ ನಾಗವಾರದ ತನ್ನ ಮಾಮೂಲಿಯ ಮಾದೇವನ ಅಂಗಡಿಯಿಂದ ಜುಲೈ 9 ರಂದು ಮೂರು ಹಂದಿ ತಲೆಗಳನ್ನು ತಂದು ಶೈಲೇಶನಿಗೆ ಕೊಟ್ಟಿದ್ದಾನೆ.



ಅಲ್ಲಿಗೆ 'ಆಪರೇಷನ್ ಹಂದಿ ತಲೆಯ ಒಂದು ಹಂತ ಮುಗಿದಂತಾಗಿತ್ತು. ಅನಂತರ 'ಆದಿತ್ಯ ಬಿರ್ಲಾ ವರ್ಲ್ಡ್‌ವೈಡ್' ಕಂಪೆನಿಯಲ್ಲಿ ಡ್ರೈವರ್ ಆಗಿರುವ ಗಣೇಶನ ಇಂಡಿಕಾ ಕಾರಿನಲ್ಲಿ ರಾತ್ರಿ ಹನ್ನೆರಡರ ಹೊತ್ತಿಗೆ ಮುನಿರೆಡ್ಡಿಪಾಳ್ಯದ ಮಸೀದಿಗೆ ಬಂದಿದ್ದಾರೆ. ಕಾರನ್ನು ನಿಲ್ಲಿಸಿದ್ದೇ ಹಂದಿ ತಲೆಯೊಂದಿಗೆ ಶೈಲೇಶ, ಮಹೇಶ ಮತ್ತು ನಂದೀಶ ಮೂವರೂ ಮಸೀದಿಯನ್ನು ಸಮೀಪಿಸಿದ್ದಾರೆ. ಎರಡೂ ಹಂದಿ ತಲೆಗಳನ್ನು ಮಸೀದಿಯ ಕಾಂಪೌಂಡ್ ಗೋಡೆಯೊಳಗೆ ಎಸೆದಿದ್ದಾರೆ.

ಆ ವೇಳೆ ಪ್ರಶಾಂತ ಮತ್ತು ಡಾಬರ್ ಇಬ್ಬರೂ ಒಂದೊಂದು ದಿಕ್ಕಿಗೆ ನಿಂತು ಯಾರಾದರೂ ಬರುತ್ತಾರಾ? ಎಂದು ಕಾವಲಿಗೆ ನಿಂತಿದ್ದಾರೆ. ಇದೇ ರೀತಿ ಹೆಬ್ಬಾಳದ ಜುಮ್ಮಾ ಮಸೀದಿಗೆ ಬಂದು ಹಿಂದಿನ ಗೋಡೆ ಹಾರಿ ಮಸೀದಿಯೊಳಕ್ಕೆ ಹೋಗಿ ಹಂದಿತಲೆ ಇಟ್ಟು ಬಂದಿದ್ದಾರೆ. ರೂಮಿಗೆ ಬಂದವರೇ ವಿಜಯದ ಖುಷಿಯಲ್ಲಿ 'ಓಲ್ಡ್‌ಮಂಕ್' ರಂ ಕುಡಿದು ಹಂದಿಮಾಂಸದ ಫ್ರೈ ತಿಂದಿದ್ದಾರೆ. ಮರುದಿನ ನಡೆದ ಹಿಂಸಾಚಾರ-ಗೋಲಿಬಾರ್ ಕಂಡು ಹಿಗ್ಗಿದ್ದಾರೆ. ಆದರೆ ಯಾವ ಹಂದಿರುಂಡವನ್ನು ಇವರು ಮಸೀದಿಗೆಸೆದರೋ ಅದೇ ಇವರನ್ನು ಜೈಲಿಗೆ ಹಾಕುತ್ತದೆ ಎಂಬುದು ಯಾರಿಗೆ ಗೊತ್ತಿತ್ತು?

ಸದ್ಯ ಶೈಲೇಶ್ ಹೊಳ್ಳ, ನಂದೀಶ್ ಮತ್ತು ಮಹೇಶ ಮೂವರೂ ಜೈಲುಪಾಲಾಗಿದ್ದಾರೆ. ಪ್ರಶಾಂತ್ ಮತ್ತು ಡಾಬರ್ ತಲೆಮರೆಸಿಕೊಂಡಿದ್ದಾರೆ. ದುರಂತವೆಂದರೆ ಇಷ್ಟೆಲ್ಲಕ್ಕೂ ಕಾರಣಕರ್ತನಾದ ಪ್ರಮೋದ್ ಮುತಾಲಿಕ್‌ನನ್ನು ಮಾತ್ರ ಪೊಲೀಸರು ಈತನಕ ಮುಟ್ಟಿಲ್ಲ, ಅದು ಬಿಜೆಪಿಯ ಕೇಸರಿ ಬುದ್ಧಿಯೋ ಅಥವಾ ಮುತಾಲಿಕನ ಪಾಪದ ಕೊಡವಿನ್ನೂ ಭರ್ತಿಯಾಗದ ಅಪಾಯವೋ?

■ ರಾ. ಸೋಮನಾಥ್

ಈ ಜನರಿಗೇನು ಹುಚ್ಚು ಹಿಡಿದಿದೆಯೇ? ಅಥವಾ ಮುಗ್ಧ ಜನರನ್ನು ಹುಚ್ಚರನ್ನಾಗಿ ಮಾಡಲಾಗುತ್ತಿದೆಯೇ? ಮುಗ್ಧ ಜನರ ಮೌಢ್ಯವನ್ನೇ ಬಂಡವಾಳ ಮಾಡಿಕೊಂಡು ತಮ್ಮ ತಿಜೋರಿ ತುಂಬಿಸಿಕೊಳ್ಳುವ ಮನೆಹಾಳ ಮುಠ್ಠಾಳ ಪೂಜಾರಿ - ಪುರೋಹಿತರ ಹಿಂಡು ಒಂದಲ್ಲ ಒಂದು ಕಡೆ ಜನತೆಯನ್ನು ದಿಶಾಬೂಲ್ ಮಾಡುತ್ತಾ ಹೊರಟಿದ್ದಾರೆ. ಬೆಂಗಳೂರಿನಲ್ಲಿ ಯಾವನೋ ತಿಕ್ಕಲು ಬಾಬು ತನ್ನ ತಿಜೋರಿ ತುಂಬಿಸಿಕೊಳ್ಳುವುದಕ್ಕೆ ಸಾಯಿಬಾಬ ಕಣ್ಣು ತೆರೆದ ಎಂದ ತಕ್ಷಣ ಒಂದು ಮುಂದು ನೋಡದೇ ಸಾವಿರಾರು ಜನ ನುಗ್ಗಿಬಂದು ದುಡ್ಡು ಸುರಿದಿದ್ದು ನಿಮಗೆ ನೆನಪಿರಬಹುದು. ಈಗ ಇಂತಹದ್ದೇ ಎರಡು ಪ್ರಕರಣಗಳು ಮತ್ತೆ ವರದಿಯಾಗಿವೆ. ಅತ್ತ ರಾಯಚೂರಿನಲ್ಲಿ ಅದ್ಯಾವನೋ ತಿಕ್ಕಲು ಹುಡುಗ ಹೊಲದಲ್ಲಿ ಬಾವಿ ತೋಡಿ ಆಂಜನೇಯ ವಿಗ್ರಹ ಸಿಗುತ್ತೆ ಎಂದು ಹೇಳಿ ಕೊನೆಗೆ ತಾನೇ ನಾಪತ್ತೆಯಾಗಿದ್ದಾನೆ. ಇತ್ತ ದಾವಣಗೆರೆಯಲ್ಲಿ ನಮ್ಮ ಮನೆಯ ಹೋತದ ಹಾಲು ಕುಡಿದರೆ ಎಲ್ಲಾ ಕಾಯಿಲೆಗಳೂ ವಾಸಿಯಾಗುತ್ತವೆ ಎಂದು ಹೋತ (!)ದ ಹಾಲು ಜನರಿಗೆ ಕುಡಿಸುತ್ತಿದ್ದಾನೆ. ಇದೇನು ಜನ ಮರುಳೋ ಜಾತ್ರೆ ಮರುಳೋ?

ಜನತೆಯನ್ನು ದಿಶಾಬೂಲ್ ಮಾಡಿದ

ಮಟಮಾರಿಯ ಹುಡುಗನೂ ಪುಂಡ ಪುರೋಹಿತರು



ತೀರಾ ಇತ್ತೀಚೆಗೆ ರಾಯಚೂರು ತಾಲೂಕಿನ ಮಟಮಾರಿ ಗ್ರಾಮವೊಂದರ ಹೊಲದಲ್ಲಿ ಆಂಜನೇಯ ಮೂರ್ತಿ ಇದೆ ಎಂದು ಹೇಳಿದ ಬಾಲಕ, ಮಾತನ್ನು ಕೇಳಿ ದಿಶಾಬೂಲ್ ಆದ ಜನತೆಯನ್ನು ಕಂಡು ವ್ಯಥೆಯಾಗುತ್ತಿದೆ. ಮಾನ್ವಿ ತಾಲೂಕಿನ ಮಟಮಾರಿ ಗ್ರಾಮದ ಸರಕಾರಿ ಪ್ರಾಥಶಾಲೆಯಲ್ಲಿ 9 ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ನಾಗೇಶ್ ತನ್ನ ಮನಸ್ಸಿಗೆ ಏನೇನು ತೋಚುತ್ತದೋ ಅದನ್ನೆಲ್ಲ ಹೇಳಿದ. ಅಪಕ್ವ ಬುದ್ಧಿಯ ಬಾಲಕನ ಮಾತನ್ನು ನಂಬಿದ ಸ್ಥಳೀಯ ಸ್ವಾಮಿಗಳು ಶ್ರಾವಣ ಮಾಸದ ಈ ದಿನಗಳಲ್ಲಿ ಹುಡುಗ ಹೇಳಿದ್ದು ನೂರಕ್ಕೆ ನೂರು ಸತ್ಯ ಇರಬೇಕು ಎಂದು ಇಂಬು ನೀಡಿದರು. ಜನರಿಗೂ ಇಷ್ಟೇ ಸಾಕಾಗಿತ್ತು. ಎಲ್ಲರೂ ಕೂಡಿ ರಾಯಚೂರು ತಾಲೂಕಿನ ಮಟಮಾರಿ ಗ್ರಾಮದ ಸಮೀಪಕ್ಕಿರುವ ಬುಡ್ಡೆಸಾಬನ ಹೊಲಕ್ಕೆ ಹೊರಟರು.

ನೋಡನೋಡುತ್ತಿರುವಂತೆ ಕೆಲವೇ ಕ್ಷಣಗಳಲ್ಲಿ ನಾಗೇಶ ಎಂಬ ಹುಡುಗನನ್ನು ದೈವಾಂಶಸಂಭೂತನೆಂಬಂತೆ ಜನ ಭಾವಿಸಲಾರಂಭಿಸಿದರು. ಆತ ಏನು ಹೇಳುತ್ತಾನೊ ಅದೆಲ್ಲ ದೇವರ ಆಜ್ಞೆ ಎಂಬಂತೆ ಚಾಚೂತಪ್ಪದೆ ಪಾಲಿಸತೊಡಗಿದರು. ಜನಜಂಗುಳಿ ನೆರೆಯಿತು. ಆಗ ಮತ್ತಷ್ಟು ಭ್ರಾಮಕ ಲೋಕ ಹೊಕ್ಕ ಹುಡುಗ, ಆತನ ಪಾಲಕರು ಸತ್ಯಾಸತ್ಯತೆಯನ್ನು ನೋಡದೆ ನಾಗೇಶ ತೋರಿದ ಜಾಗದಲ್ಲಿ 14 ಅಡಿ ಆಳ ತೋಡಲು ಶುರುಹಚ್ಚಿಕೊಂಡರು. ಕೆಲವೇ ತಾಸುಗಳಲ್ಲಿ 14 ಅಡಿ ಆಳ ತೋಡಿಕೊಡಬಲ್ಲ ಜೆಸಿಬಿ ಅಥವಾ ಯಾವುದೆ ಯಂತ್ರವನ್ನು ಬಳಸುವಂತಿಲ್ಲ ಎಂದು ಹುಡುಗ ಶರತ್ತು ಹಾಕಿದ. ಇದಕ್ಕೆ ಒಗ್ಗೊಟ್ಟು 9 ಜನ ಮಾತ್ರ ನೆಲವನ್ನು ತೋಡಿ ತೋಡಿ ಸುಸ್ತಾದರೆ ಹೊರತು ಅಲ್ಲಿ ಏನು ಸಿಗಲಿಲ್ಲ.

ಆಂಜನೆಯ ವಿಗ್ರಹ ಚಿನ್ನದ್ದೋ, ಬೆಳ್ಳಿಯದ್ದೋ - ಕೊನೆಗೆ ಕಲ್ಲಿನದಾದರೂ ಸಿಕ್ಕುತ್ತದೆ ಎಂದು ಹೇಳಿದ್ದ ನಾಗೇಶನ ಮಾತು ಮರುದಿನವೆ ಹುಸಿಯಾಗಿ ಹೋಯ್ತು. 14 ಅಡಿ ಆಳವನ್ನು ಹಗಲುರಾತ್ರಿಯೆನ್ನದೆ ತೋಡಿದ ಜನ ಹೈರಾಣಾಗಿ ಬರೀ ಗೊರಸು ಮಣ್ಣನ್ನು ಕಂಡು ಪೆಕರಗಳಾದ ಪ್ರಸಂಗ ಜರುಗಿತು. ಆಗ ಅಲ್ಲಿ ಸೇರಿದ್ದ ನೂರಾರು ಜನ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಹೋದರು. ಇಂಥ ವಿವೇಕರಹಿತ ಸಂಗತಿಯನ್ನು ಕೆಲವು ಚಾನಲ್‌ಗಳು ವಿಶೇಷ ಕಾಳಜಿವಹಿಸಿ ಪ್ರಸಾರ ಮಾಡಿದವು. ಆದರೆ ಇಂಥ ಮೂಢನಂಬಿಕೆಗಳನ್ನು ಪೋಷಿಸುವುದು, ಬೆಳೆಸುವುದು ಸಂವಿಧಾನದ ಉಲ್ಲಂಘನೆಯಾಗುತ್ತದೆ ಎಂಬ ಸತ್ಯವನ್ನು ಮರೆತವು.

ನಮ್ಮ ನಿತ್ಯದ ಬದುಕು ನೂರಾರು ಸಂಕಟ - ಸಮಸ್ಯೆಗಳ ಸರಮಾಲೆಯನ್ನು ಹೊತ್ತುಕೊಂಡು ನಡೆದಿದೆ. ಎಷ್ಟೋ ಜನಕ್ಕೆ ನಿತ್ಯ ತಮ್ಮ ಹೊಟ್ಟೆಗೆ ಅನ್ನವನ್ನು ಹುಡುಕುವುದೇ ಸಮಸ್ಯೆಯಾಗಿದೆ. ಆಡಳಿತದ ಹೆಸರಿನ ಮೇಲೆ ದೇಶವನ್ನು ಒಂದೇ ಸಮ ಮುಕ್ಕಿ ಬಿಡುವ ಖೂಳ ರಾಜಕಾರಣಿಗಳು, ಘಟಿಂಗ ಅಧಿಕಾರಿಗಳು ಕೂಡಿನಡೆದಿದ್ದಾರೆ. ಇವರೆಲ್ಲರ ಕೌಲು ಕೂಟ ದುಷ್ಟ ಆಡಳಿತಕ್ಕೆ ಮೂಲ ಕಾರಣವಾಗಿದೆ. ಈ ಘಟಿಂಗರೆ ಮುದ್ದಾಂ ಆಗಿ ಅಲ್ಲಲ್ಲಿ ಕೆಲವು ಸ್ವಾಮಿ - ಸನ್ಯಾಸಿಗಳೆಂಬ ಠಕ್ಕರನ್ನು ಸೃಷ್ಟಿಸಿ ಅವರ ಮೂಲಕ ಇಂಥೆಲ್ಲ ಕಿತ್ತಿಬಾಜಿ ಕೆಲಸದಲ್ಲಿ ತೊಡಗಿಸುತ್ತಾರೆ. ಜನತೆಯ ಆಲೋಚನಾ ಲಹರಿಯನ್ನು ಬೇರೆಡೆಗೆ ತಿರುಗಿಸಿ ತಾವು ಕೊಳ್ಳೆ ಹೊಡೆಯುತ್ತಾರೆ.

ರಾಷ್ಟ್ರಕವಿ ಕುವೆಂಪು ಅವರು ಬಹಳಷ್ಟು ವರ್ಷಗಳ ಹಿಂದೆಯೇ

ಗುಡಿಯೊಳಗೆ ಕಣ್ ಮುಚ್ಚಿ
ಬೆಚ್ಚಗಿರುವವರನೆಲ್ಲ
ಭಕ್ತರಕ್ತವ ಹೀರಿ ಕೊಬ್ಬಿಹರನೆಲ್ಲ
ಗಂಟೆ ಜಾಗಟೆಗಳಿಂ ಬಡಿದು, ಕುತ್ತಿಗೆ ಹಿಡಿದು
ಕಡಲಡಿಗೆ ತಳ್ಳಿರೈ ಶಂಖದಿಂ ನುಡಿದು!

ಎಂದಿದ್ದರು. ಬಸವಾದಿ ಶರಣರು ಸಹಿತ ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ ಎಂದು ಗೇಲಿ ಮಾಡಿದ್ದರೂ ನಾವು ಮತ್ತದೆ ಪೂಜಾರಿ ಪುರೋಹಿತರ ತಂತ್ರಗಳಿಗೆ ಬಲಿಯಾಗುತ್ತಲೇ ನಡೆದಿದ್ದೇವೆ. ನಮ್ಮನ್ನು ಬಹುಶಃ ಆ ಪರಮಾತ್ಮನೆ ಬಂದು ಎದುರು ನಿಂತು ರಕ್ಷಿಸಿದರೂ ಆತನ ಮಾತನ್ನು ಕೇಳುತ್ತೇವೋ ? ಬಿಡುತ್ತೇವೋ ಎಂಬ ಸ್ಥಿತಿಯಲ್ಲಿ ನಾವೆಲ್ಲ ಇದ್ದೇವೆ.

■ ವಿಶ್ವಾರಾಧ್ಯ ಸತ್ಯಂಪೇಟೆ



ದಾವಣಗೆರೆ: ಹೋತದ ಹಾಲು ಎಂಬ ವಂಚನೆ

ಈಗ್ಗೆ ಏಳೆಂಟು ತಿಂಗಳ ಹಿಂದೆ ದಾವಣಗೆರೆ ಪಿ.ಬಿ. ರಸ್ತೆಯ ಮರವೊಂದರಿಂದ ಹಾಲು ಸುರಿಯುತ್ತಿದೆ ಎಂಬ ಸುದ್ದಿ ಹಬ್ಬಿ ನೂರಾರು ಜನರು ಆ ಬೇವಿನ ಮರಕ್ಕೆ ಪ್ರದಕ್ಷಿಣೆ ಹಾಕಿ ವರಗಳನ್ನು ಬೇಡಿದ್ದರು. ಆದರೆ ಅಂದು ಪ್ರದಕ್ಷಿಣೆ ಹಾಕಿದ ಜನರಿಗೆ ಯಾವುದೇ ವರಗಳು ಸಿಕ್ಕದೆ ಬೇವಿನಮರದಿಂದ ಸುರಿಯುತ್ತಿದ್ದ ಹಾಲಿನ ರೂಪದ ದ್ರವಕ್ಕೆ ಭಂಡಾರ ಹಚ್ಚಿ ಪೂಜಿಸುತ್ತಿದ್ದ ಜೋಗತಿಯ ಉಡಿ ಮಾತ್ರ ಜನರ ದುಡ್ಡಿನಿಂದ ತುಂಬಿಹೋಗಿತ್ತು!

ಇದೀಗ ಬೆಳಗಾವಿ ಕಡೆಯಿಂದ ಕುರಿ ಮಂದೆಯನ್ನು ಹೊಡೆದುಕೊಂಡು ಇಲ್ಲಿಗೆ ಸಮೀಪದ ಶಿವಪುರದ ಹೊರವಲಯದಲ್ಲಿ ಬೀಡುಬಿಟ್ಟಿರುವ ಬಾಳುಮಾಮನೆಂಬ ವಂಚಕ 'ಹೋತವೊಂದು ಹಾಲು ಕೊಡುತ್ತದೆ' ಎಂದು ಪ್ರಚಾರವೆಬ್ಬಿಸಿ ಜನಸಾಮಾನ್ಯರನ್ನು ಸುಲಿಯಲಾರಂಭಿಸಿದ್ದಾನೆ. ಇಂತಹವನನ್ನು ದಾವಣಗೆರೆ ಮಾಜಿ ಸಭಾಧ್ಯಕ್ಷ ಬಿ.ವೀರಣ್ಣ ವೀಳ್ಯ ಕೊಟ್ಟು ಸ್ವಾಗತಿಸಿ ಬಾಳುಮಾಮನ ಪವಾಡದ ಹುಸಿ ಪ್ರದರ್ಶನಕ್ಕೆ ತನ್ನ ಹೊಲವನ್ನೇ ವೇದಿಕೆಯಾಗಿ ನೀಡಿರುವುದಲ್ಲದೇ ಹೋತದ ಹಾಲು ಕುಡಿಯಲು ಬಂದ ಸಹಸ್ರಾರು ಜನರಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದಾರೆ. ಬಾಳುಮಾಮ ಜನರ ದುಡ್ಡನ್ನು ದೋಚುತ್ತಿರುವುದು ಕಣ್ಣಿಗೆ ರಾಚುತ್ತಿದ್ದರೂ ಅದರ ಬಗ್ಗೆ ಚಕಾರವೆತ್ತದೆ ಮಾಜಿ ಶಾಸಕ ಕೆ.ಮಲ್ಲಪ್ಪನಂತಹವರು ತಮ್ಮ ಭಕ್ತಿಯನ್ನು ಸಮರ್ಪಿಸಿದ್ದಾರೆ.

ಹೋತದ ಹಾಲನ್ನು ಕುಡಿಯಲು ಜನರು ಸ್ಪರ್ಧೆಗೆ ಬಿದ್ದಿದ್ದಾರೆ. ಇವರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡುತ್ತಿದ್ದಾರೆ. ಈ ಹಿಂದೆ ಹರಪನಹಳ್ಳಿಯ ಹತ್ತಿರ ಇದೇ ರೀತಿಯ ಚಾಣಾಕ್ಷತನ ತೋರಿಸಿ ಜನರಿಗೆ ಮೋಸಮಾಡಿದ್ದ ಈ ಬಾಳುಮಾಮನೆಂಬ ಅಪ್ಪಟ ಸುಲಿಗೆಕೋರ ಈಗ ಇಲ್ಲಿ ಹೋತದ ಹಾಲನ್ನು ಕುಡಿಸಿ ಕೈತುಂಬಾ ಕಾಸೂ ಮಾಡಿಕೊಳ್ಳುತ್ತಿದ್ದಾನೆ. ಕುಂಟರು, ಕುರುಡರು, ಮೂಕರು ಹಾಗೂ ಕ್ಯಾನ್ಸರ್ ಮುಂತಾದ ರೋಗಗಳಿಂದ ನರಳುತ್ತಿರುವವರು, ದಾವಣಗೆರೆ ನಗರ ಮತ್ತು ಸುತ್ತಮುತ್ತಲ ಹಳ್ಳಿಗಳ ಜನರು-ವಿದ್ಯಾವಂತರು ಮತ್ತು ಪೊಲೀಸರು ಹಾಗೂ ಮಕ್ಕಳಾಗದಿರುವವರು ಹಾಲು ಕೊಡುತ್ತದೆ ಎನ್ನುತ್ತಿರುವ ಈ ಹೋತದ ಕಾಲಿಗೆ ಅಡ್ಡಡ್ಡ ಬಿದ್ದು [illegible].

ಹೋತ ಕೊಡುತ್ತಿರುವುದು ಹಾಲಲ್ಲ!

ಹೋತದ ಹಾಲನ್ನು ಕುಡಿದು ಕೃತಾರ್ಥರಾಗಲು ಬಂದಿದ್ದ ಸಹಸ್ರಾರು ಮಂದಿಗೆ ಸಾಕಾಗುವಷ್ಟು ಹಾಲನ್ನು ಈ ಹೋತವೇ ಕೊಡುತ್ತದೆಯೇ? ಎಂದು ಬಾಳುಮಾಮ ಮತ್ತು ಇವನನ್ನು ಸಂತನನ್ನಾಗಿಸುತ್ತಿರುವ ಮಂದಿಗೆ ಕೇಳಿದರೆ ಬೆಳಗಿನ ಜಾವ 3 ಗಂಟೆಗೆ ಮೂರು ಕಪ್ಪು ಹಾಲು ಕರೆ ದಿತ್ತು, ಅದನ್ನೇ ಬೇರೆ ಹಾಲಿನ ಜೊತೆ ಪಾತ್ರೆಗಳಲ್ಲಿ ಬೆರೆಸಿದ್ದೇವೆ ಎನ್ನುತ್ತಾರೆ. ಜನರಿಗೆ ನಂಬಿಕೆ ಮೂಡಿಸಲು ಹೋತವನ್ನು ವೇದಿಕೆಯ ಮೇಲೆ ಎಳೆತಂದು ಅದರ ಚಿಕ್ಕಮೊಲೆಗಳನ್ನು ಎಲ್ಲರಿಗೂ ಕಾಣುವಂತೆ ಹಿಂಡುತ್ತಾರೆ. ಆಗ ಎಳೆಂಟು ಹನಿ ಬಿಳಿಬಣ್ಣದ ದ್ರವ ಒಸರುತ್ತದೆ. ಇದನ್ನೇ ಹಾಲು ಎಂದು ನಂಬಿಸಿ ಬೇರೆ ಪಾತ್ರೆಗಳಲ್ಲಿರುವ ಹಾಲಲ್ಲಿ ಬೆರೆಸಿ ಬಂದ ಜನರಿಗೆ ಒಂದೊಂದು ಚಮಚೆ ಕುಡಿಸುತ್ತಿದ್ದಾರೆ.







ಅಸಲಿಗೆ ಹೋತವೊಂದು ಹಾಲು ಕೊಡುತ್ತದೆಂಬುದನ್ನು ನಂಬಲು ಅಸಾಧ್ಯವಾಗಿರುವಾಗ, ಅದರ ಹಾಲಿಗೆ ಕುರುಡುತನದಿಂದ ಮೊದಲಾಗಿ ಕ್ಯಾನ್ಸರ್ ಕಾಯಿಲೆಯವರೆಗೆ ವಾಸಿ ಮಾಡಬಹುದಾದ ಸತ್ವಗಳಿವೆ ಎಂದರೆ ಅದು ಅಪ್ಪಟ ಮೋಸದ ವರಸೆಯಾಗಿದೆ ಎನ್ನುವುದು ತಲೆಯಲ್ಲಿ ಮೆದುಳಿರುವ ಎಲ್ಲರಿಗೂ ಅರ್ಥವಾಗುತ್ತದೆ. ಇಲ್ಲಿನ ಪಶು ಸಂಗೋಪನೆ ಇಲಾಖೆಯ ಉಪನಿರ್ದೇಶಕ ಡಾ. ಜಯಣ್ಣನವರ ಪ್ರಕಾರ ಇದೊಂದು ತಪ್ಪು ಕಲ್ಪನೆ. ಗಂಡುಪ್ರಾಣಿಗಳ ದೇಹದಲ್ಲಿ ಇಸ್ಟ್ರೋಜೆನ್ ಎಂಬ ಹಾರ್ಮೋನು ಅಗತ್ಯಕ್ಕಿಂತ ಹೆಚ್ಚಾಗಿದ್ದರೆ ಹೀಗೆ ಹಾಲಿನಂತಹ ದ್ರವ ಒಸರುತ್ತದೆಯೇ ಹೊರತು ಅದು ಹಾಲಲ್ಲ, ಅದನ್ನು ಸೇವಿಸಿದ ಮಾತ್ರಕ್ಕೆ ಯಾವುದೇ ಕಾಯಿಲೆಗಳು ವಾಸಿಯಾಗುವುದಿಲ್ಲ.

ವಿಚಿತ್ರವೆಂದರೆ ಕಾಣಿಕೆ ನೀಡಲು ಬಂದ ಭಕ್ತರ ಕಣ್ಣು, ಕಿವಿ ಮತ್ತು ಬಾಯಿ ಬರಿಸುತ್ತೇನೆಂದು ಹಾಲನ್ನು ಬಾಯಿಗೆ ಹುಯ್ಯುವ ವಂಚಕ ಬಾಳುಮಾಮನ ತಂಡದಲ್ಲಿಯೇ ಮೂಗನೊಬ್ಬನಿದ್ದಾನೆ! ಈ ಮೂಗ ಗಂಟೆಗಟ್ಟಲೆ ಪೂಜೆ ಮಾಡುತ್ತಲೇ ಇರುತ್ತಾನೆ- ಹೋತದ ಹಾಲಿನಿಂದ ಮೂಗನಿಗೆ ಮಾತುಬರುವುದಾಗಿದ್ದರೆ ದಿನನಿತ್ಯ ಇವನ ಸೇವೆ ಮಾಡುತ್ತಿರುವ ಈ ಮೂಗನಿಗೇಕೆ ಮಾತು ಬಂದಿಲ್ಲ? ಎಂದು ಪ್ರಶ್ನಿಸಿದರೆ ಬಾಳುಮಾಮ ಉತ್ತರ ನೀಡದೆ ನುಣುಚಿಕೊಳ್ಳುತ್ತಾನೆ.

ವಂಚಕ ಬಾಳುಮಾಮನ ಹೇಳಿಕೆಗಳು ಎಲ್ಲಿಯವರೆಗೆ ತಲುಪುತ್ತಿವೆ ಎಂದರೆ 5 ದಿನ, 21 ದಿನ, ಒಂದು ತಿಂಗಳು ಇವನ ಕುರಿಮಂದೆಯನ್ನು ಕಾದರೆ ಒಳ್ಳೆಯದಾಗುತ್ತದಂತೆ! ಈಗಾಗಲೇ ಎಡೂರಪ್ಪ, ಬಸವರಾಜ ಬೊಮ್ಮಾಯಿಯಂಥ ಮಹಾಮಹಿಮರು ಬಾಳುಮಾಮನ ಕುರಿ ಕಾಯ್ದಿದ್ದಕ್ಕೆ ಒಳ್ಳೆಯದಾಗಿದೆಯಂತೆ! ಇವನ ಮಾತನ್ನು ನಂಬಿ ಈಗಾಗಲೇ ಜನರು ಇವನ ಕುರಿಮಂದೆಯನ್ನು ಕಾಯಲು ತಯಾರಾಗಿದ್ದಾರೆ.

ಇದು ಅಪ್ಪಟ ಮೋಸದ ವ್ಯಾಪಾರ

ಜನರಿಗೆ ಒಳ್ಳೆಯದನ್ನು ಮಾಡಬೇಕೆಂದು ಕೊಂಡಿದ್ದರೆ ಈ ಬಾಳುಮಾಮ ಜನರಿಗೆ ಪುಗಸಟ್ಟೆ ಹೋತದ ಹಾಲನ್ನು ಕುಡಿಸಬಹುದಿತ್ತಲ್ಲವೇ? ಆದರೆ ಬಾಳುಮಾಮ ಇಲ್ಲಿ ಅಪ್ಪಟ ವ್ಯಾಪಾರಿ ಕುತಂತ್ರಗಳನ್ನೂ ಹೆಣೆದಿದ್ದಾನೆ. 8-10 ರೂ. ಕೊಟ್ಟು ಒಂದು ತೆಂಗಿನಕಾಯಿ ಕೊಟ್ಟವರಿಗೆ ಮಾತ್ರ ಒಂದು ಚಮಚ ಹಾಲನ್ನು ಬಾಯಿಗೆ ಹಾಕಲಾಗುತ್ತದೆ. ಹಣ ಕೊಡದೆ, ತೆಂಗಿನಕಾಯಿಯನ್ನು ತರದೇ ಹಾಲಿಗಾಗಿ ಬಾಯಿ ತೆರೆದವರನ್ನು ಮುಲಾಜಿಲ್ಲದೆ ತೆಂಗಿನಕಾಯಿ ತರಲು ಓಡಿಸಲಾಗುತ್ತಿದೆ. ಹಾಲು ಕುಡಿಯಲಿಕ್ಕಾಗಿ ಭಕ್ತರು ತಂದ ತೆಂಗಿನಕಾಯಿಗಳನ್ನು ಇಡಿಯಾಗಿ ಚೀಲದಲ್ಲಿ ತುಂಬಿ ಮತ್ತೆ ಅವುಗಳನ್ನೇ ಮಾರಾಟ ಮಾಡುತ್ತಿದ್ದುದ್ದು ಎಲ್ಲರ ಕಣ್ಣೆದುರಿಗೆ ನಡೆಯುತ್ತಿದ್ದರೂ ಭಕ್ತರಿಗೆ ಇದು ಮೋಸವಾಗಿ ಕಾಣಿಸಲಿಲ್ಲ!

ಬಾಳುಮಾಮನ ಸುಲಿಗೆಯು ಒಂದೇ ತೆಂಗಿನಕಾಯಿಯನ್ನು ಹತ್ತಾರು ಬಾರಿ ಮಾರಿಕೊಳ್ಳುವುದಕ್ಕಷ್ಟೇ ಸೀಮಿತವಾಗದೆ, ಹತ್ತು ರೂಪಾಯಿಗೊಂದರಂತೆ ತಾಯಿತ, 51 ರೂ.ಗಳಿಗೆ ಹರಕೆಯ ಕಾಯಿ ಮಾರಾಟ, ಮಕ್ಕಳಾಗದಿದ್ದವರಿಗೆ ಉಡಿ ತುಂಬಿ ಅವರಿಂದ 51ರೂ. ವಸೂಲಿ ಮಾಡುವವರೆಗೆ ಮುಂದುವರೆದಿದೆ. ಹೋತದ ಹಾಲು ಕುಡಿಯಲು ಸೇರಿದ್ದ ಹತ್ತಾರು ಸಾವಿರ ಮಂದಿಯಿಂದ ಒಂದೇ ದಿನದಲ್ಲಿ ಲಕ್ಷಾಂತರ ರೂ.ಗಳನ್ನು ಕಾನೂನುರಕ್ಷಕ ಪೊಲೀಸರನ್ನೇ ತನ್ನ ಕಾಲಿಗೆ ಅಡಬೀಳಿಸಿಕೊಂಡು ಅವರ ಎದುರೇ [illegible] ಮಾತ, ಬಾಳುಮಾಮನ ಚಾಣಾಕ್ಷತನವೋ ಅಥವಾ [illegible] ವಿರೋಧಿಸಲು ಮುಂದೆ ಬರದ ಜನರ ದಾರುಣ ಅಮಾಯಕತನವೋ [illegible] ಸಿದ್ಧರಿರುವಂತಾರು!

■ ಚಂದ್ರಶೇಖರ ತೋರಣಘಟ್ಟ

ದುಡಿಯುವ ದನಿಗಳು ಗಂಧರ್ವ ಗಾನವಲ್ಲ

ಆಗಸ್ಟ್ 6, 2008ರ 'ಲಂಕೇಶ್' ವಾರಪತ್ರಿಕೆಯಲ್ಲಿ ಡಾ. ಎಚ್.ವಿ. ವಾಸು ಅವರ 'ಗಂಧರ್ವರಾ ಸೀಮೆ ಯಾಯಿತು ಕ್ಷಣದೊಳು ಕಾಡಿನಾ ನಾಡು' ಎಂಬ ಲೇಖನ ನೋಡಿದೆ. ದ.ರಾ. ಬೇಂದ್ರೆಯವರ ಸುಂದರ ಕವನವಾದ 'ಮೂಡಲ ಮನೆಯಾ ಮುತ್ತಿನ ನೀರಿನ ಎರಕಾವಾ ಹೊಯ್ದಾ ನುಣ್ಣನೆ ಎರಕಾವಾ ಹೊಯ್ದಾ....' ಎಂದು ಸಾಗುವುದನ್ನು ಉಲ್ಲೇಖಿಸುತ್ತಾ ಲೇಖನ ಆರಂಭವಾಗಿ 'ಗಿಡಗಂಟೆಗಳ ಕೊರಳೊಳಗಿಂದ ಹಕ್ಕಿಗಳಾ ಹಾಡು, ಹೊರಟಿತು ಹಕ್ಕಿಗಳಾ ಹಾಡು ಗಂಧರ್ವರಾ ಸೀಮೆಯಾಯಿತು ಕಾಡಿನಾ ನಾಡು ಕ್ಷಣದೊಳು ಕಾಡಿನ ನಾಡು' ಎಂಬ. ಚರಣದೊಂದಿಗೆ ಲೇಖನದ ಉದ್ದೇಶ ತೆರೆದುಕೊಳ್ಳುತ್ತಾ ಸಾಗುತ್ತದೆ. ದೇಶದಲ್ಲಿ ಇಂದು ಪ್ರಧಾನ ಆಂತರಿಕ ಸಮಸ್ಯೆ ಎಂದು ಪ್ರಧಾನಮಂತ್ರಿ ಮನಮೋಹನ ಸಿಂಗ್ ಪದೇಪದೇ ಪ್ರಸ್ತಾಪಿಸುತ್ತಿರುವ ನಕ್ಸಲೈಟ್ (ಮಾವೋವಾದಿ) ಚಳವಳಿಯ ಬಗ್ಗೆ ಲೇಖಕರು ಬೇಂದ್ರೆಯವರ ಈ ಸುಂದರ ಕವನವನ್ನು ತಮಗನಿಸಿದಂತೆ ಬಳಸಿಕೊಂಡು ಲೇಖನದಲ್ಲಿ ಹೇಳಿದ್ದಾರೆ.

ಇನ್ನು ನಕ್ಸಲೈಟ್ ಚಳವಳಿ ಬಗ್ಗೆ ನೋಡುವುದಾದರೆ 1967ರ ಪಶ್ಚಿಮ ಬಂಗಾಳದ ಸಣ್ಣ ಹಳ್ಳಿ ನಕ್ಸಲ್ಬರಿಯಿಂದ ಆರಂಭವಾಗಿ ಇವತ್ತು ಸರ್ಕಾರದ ಪ್ರಕಾರವೇ ದೇಶದ 16-17 ರಾಜ್ಯಗಳಲ್ಲಿ ಹರಡಿದೆ. ಒರಿಸ್ಸಾದ ಕಳಿಂಗನರ ಹೋರಾಟ ಇರಲಿ, ಬಾಕ್ಸೈಟ್ ಗಣಿಗಾರಿಕೆ ವಿರೋಧಿ ಹೋರಾಟ ಇರಲಿ, ಪಶ್ಚಿಮ ಬಂಗಾಳದ ನಂದಿಗ್ರಾಮ ಹೋರಾಟ ಇರಲಿ, ಎಸ್ಸಾರ್ ಗಣಿಗಾರಿಕಾ ವಿರೋಧಿ ಹೋರಾಟ ಇರಲಿ, ಬೀದರಿನ ಕೈಗಾರಿಕಾ ಮಾಲಿನ್ಯ ವಿರೋಧಿ ಹೋರಾಟ ಇರಲಿ, ಕರ್ನಾಟಕದ ಬಿಡದಿ ಸಾತನೂರಿನ ಜಪಾನ್ ಕೈಗಾರಿಕಾ ನಗರ ವಿರೋಧಿ ಹೋರಾಟ ಇರಲಿ, ಕುದುರೆಮುಖ ಗಣಿಗಾರಿಕೆ ವಿರೋಧಿ ಹೋರಾಟ ಇರಲಿ, ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟ ಇರಲಿ... ಹೀಗೆ ಜನರಿಗೆ ಹಾಗೂ ನಾಡಿಗೆ ಕಂಟಕವಾಗಿರುವ ಯೋಜನೆಗಳ ವಿರುದ್ಧದ ದೇಶದ ಹಲವಾರು ಹೋರಾಟಗಳಲ್ಲಿ ನಕ್ಸಲೈಟರ ಹೆಸರುಗಳು ಕೇಳಿಬಂದಿವೆ. ಇವುಗಳಲೆಲ್ಲ ಮಾವೋವಾದಿಗಳ ಒಂದು ಪ್ರಧಾನ ಪಾತ್ರ ಇದೆಯೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಸಶಸ್ತ್ರ ಹೋರಾಟವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ ಯಾಕೆಂದರೆ, ಭಾರತದ ಜನರಿನ್ನೂ ಸಶಸ್ತ್ರ ಹೋರಾಟಕ್ಕೆ ಸಿದ್ಧರಾಗಿಲ್ಲ. ಭಾರತದ ಸರ್ಕಾರಿ ಶಕ್ತಿ ಬಲಿಷ್ಠವಾಗಿದೆ, ಹಾಗಾಗಿ ಪಾರ್ಲಿಮೆಂಟನ್ನು ಉಪಯೋಗಿಸಿಕೊಳ್ಳುತ್ತಾ ಬಹಿರಂಗ ಕಾನೂನುಬದ್ಧ ಹೋರಾಟಗಳ ಮೂಲಕ ಜನರನ್ನು ಜಾಗೃತಗೊಳಿಸುತ್ತಾ ಚಳವಳಿ ಕಟ್ಟಿ ನಂತರ ಕ್ರಾಂತಿ ಮಾಡುವುದು ಎಂಬ ವಾದಗಳೊಂದಿಗೆ ಕೆಲಸ ಮಾಡುತ್ತಿದ್ದ ಪಕ್ಷಗಳು ಆಳುವ ಜನರೆಡೆಗೆ ಸೇರಿಹೋದವು. ಸಿಪಿಐ, ಸಿಪಿಐಎಂನಂತಹ ಪಕ್ಷಗಳು ಇಂದು ಅಮೆರಿಕ ಸಾಮ್ರಾಜ್ಯವಾದ ಬೇಡ ರಷ್ಯಾ ಪರ ಇರೋಣ ಎಂಬಂತೆ ನಡೆದುಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ.

ಆದರೆ ಇಂದು ಕಾಣುತ್ತಿರುವ ಮಾವೋವಾದಿ ಶಕ್ತಿಗಳು ಸಶಸ್ತ್ರ ಹೋರಾಟ ಹಾಗೂ ಭೂಗತ ಪಕ್ಷವನ್ನು ಬಲವಾಗಿ ಸಮರ್ಥಿಸುತ್ತಾ ಚಳವಳಿಯನ್ನು ಕಟ್ಟಿ ಬೆಳೆಸುತ್ತಾ ಸಾಗಿಬಂದಿದೆ. ಜೊತೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬಹಿರಂಗ ಹೋರಾಟಗಳು, ಕಾನೂನುಬದ್ಧ ಹೋರಾಟಗಳನ್ನು ಕಟ್ಟಿವೆ. ಇದರಿಂದಾಗಿ ನಕ್ಸಲೈಟ್ ಚಳವಳಿಯಲ್ಲಿ ಇಂಜಿನಿಯರ್‌ಗಳು, ಡಾಕ್ಟರ್‌ಗಳು, ಪದವೀಧರರು, ಸ್ನಾತಕೋತ್ತರ ಪದವೀಧರರು, ಸರ್ಕಾರಿ ಹಾಗೂ ಖಾಸಗಿ ನೌಕರರು, ವಿದ್ಯಾರ್ಥಿಗಳು ಸೇರಿಕೊಳ್ಳಲು ಸಾಧ್ಯವಾಗಿದೆ. ಬುದ್ಧಿಜೀವಿಗಳು ಹಾಗೂ ಅತ್ಯಂತ ಉನ್ನತ ವಿದ್ಯಾಭ್ಯಾಸ ಹೊಂದಿರುವವರಿಂದ ಹಿಡಿದು ವಿದ್ಯಾಭ್ಯಾಸವನ್ನೇ ಕಾಣದ ಹಳ್ಳಿಗಾಡಿನ ದಲಿತರು, ಆದಿವಾಸಿಗಳು ಈ ಚಳವಳಿಯಲ್ಲಿ ಭಾಗವಾಗಿದ್ದಾರೆಂಬುದು ಏನನ್ನೂ ಸೂಚಿಸುತ್ತದೆ? ಆಂಧ್ರದ ನಕ್ಸಲೈಟ್ ಚಳವಳಿಯ ಪ್ರಭಾವದಿಂದಲೇ ಕರ್ನಾಟಕದಲ್ಲಿ ದಲಿತ ಚಳವಳಿ ಪ್ರೇರಪಣೆ ಪಡೆಯಿತು ಎಂಬ ಮಾತುಗಳಿವೆ. ಇದನ್ನು ಪುಷ್ಟೀಕರಿಸುವಂತೆ ದಲಿತ ಚಳವಳಿ ನಕ್ಸಲೈಟ್ ಚಳವಳಿಯ ಹಾಡುಗಳು, ಸಾಹಿತ್ಯಗಳನ್ನು ಆರಂಭದಲ್ಲಿ ಬಳಸಿಕೊಂಡಿದೆ. ಭೂಮಾಲೀಕ ವಿರೋಧಿ ಹೋರಾಟಗಳನ್ನು ಹಾಗೂ ಭೂಹಂಚಿಕೆಗಾಗಿ ಹೋರಾಟಗಳನ್ನು ನಡೆಸಿದ್ದಕ್ಕೆ ನಕ್ಸಲೈಟ್ ಚಳವಳಿಯ ಪ್ರಭಾವ ಕೂಡ ಕಾರಣ ಎಂದು ಗುರುತಿಸಲಾಗುತ್ತಿದೆ.

ಕನ್ನಡ ಸಾಹಿತ್ಯದಲ್ಲೂ ನಕ್ಸಲೈಟ್ ಹೋರಾಟದ ಪ್ರಭಾವ ಅಲ್ಪಮಟ್ಟಕ್ಕೆ ಕಂಡುಬರುತ್ತದೆ. ಬಂಡಾಯ ಸಾಹಿತ್ಯದಲ್ಲಿ ಇದು ಕಾಣುತ್ತದೆ. ಈ ಚಳವಳಿಯ ಕಥೆಗಳನ್ನು ಇಟ್ಟುಕೊಂಡ ಸಿನಿಮಾಗಳು ಸಾಕಷ್ಟು ಬಂದಿವೆ. ಈಗಲೂ ಬರುತ್ತಿವೆ. ತೆಲುಗಿನಲ್ಲಿ ಇದರ ಪ್ರಮಾಣ ಜಾಸ್ತಿ ಇದೆ. ಆ ಚಳವಳಿಯನ್ನು ವಿಕೃತಗೊಳಿಸಿರುವ ಚಿತ್ರಗಳೂ ಇವೆ. ಇತ್ತೀಚೆಗೆ ಕನ್ನಡದಲ್ಲೂ ನಕ್ಸಲೈಟ್ ಕಥಾವಸ್ತುವನ್ನು ಹೊಂದಿರುವ ಕೆಲವು ಸಿನಿಮಾಗಳು ಬಂದಿವೆ. ಆದರೆ ಅವುಗಳು ಆ ಚಳವಳಿಯನ್ನು ಸರಿಯಾಗಿ ಗ್ರಹಿಸಿ ನಿರ್ಮಾಣ ಆದವುಗಳಲ್ಲ. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಮಾತಾಡ್ ಮಾತಾಡ್' ಮಲ್ಲಿಗೆ ಚಲನಚಿತ್ರದಲ್ಲಿ ಈ ಚಳುವಳಿಯ ಕುರಿತು ಒಂದಷ್ಟು ವಿಚಾರಗಳನ್ನು ವಾಸ್ತವಕ್ಕೆ ಹತ್ತಿರವಿರುವಂತೆ ಚಿತ್ರೀಕರಿಸಲಾಗಿದೆ. ಬರಗೂರು ರಾಮಚಂದ್ರಪ್ಪನವರ 'ಶಬರಿ' ಕಾದಂಬರಿಯಲ್ಲೂ ಈ ಹೋರಾಟದ ಛಾಪನ್ನು ಗುರುತಿಸಬಹುದು.

ಬಂಗಾಳಿ ಭಾಷೆಯಲ್ಲಿ ಮಹಾಶ್ವೇತಾದೇವಿಯರ 'ದ್ರೋಪ್ದಿ', '1084ರ ತಾಯಿ' (ಇವುಗಳು ಕನ್ನಡದಲ್ಲೂ ಅನುವಾದಗೊಂಡು ಪ್ರಕಟವಾಗಿವೆ) ಮೊದಲಾದ ಕೃತಿಗಳಲ್ಲೂ ಈ ಚಳವಳಿಯ ಪ್ರಭಾವವನ್ನು ನೋಡಬಹುದು. ಬೂಕರ್ ಪ್ರಶಸ್ತಿ ವಿಜೇತೆ ಅರುಂಧತಿರಾಯ್‌ರವರು ತಮ್ಮ ಹಲವಾರು ಲೇಖನ, ಪ್ರಬಂಧಗಳಲ್ಲಿ ಮಾವೋವಾದಿ ಚಳವಳಿಯ ಬಗ್ಗೆ ಉಲ್ಲೇಖಿಸಿದ್ದಾರೆ. ಆ ಚಳುವಳಿಯ ಆಶಯಗಳ ಬಗ್ಗೆ ಮಾತನಾಡಿದ್ದಾರೆ. ಪ್ರಭುತ್ವ ಮಾಡುತ್ತಿರುವ ಜನರ ಮೇಲಿನ ಹಿಂಸೆಗೆ ಪ್ರತಿಯಾಗಿ ಮಾವೋವಾದಿ ಸಶಸ್ತ್ರ ಹೋರಾಟ ನಡೆಯುತ್ತಿದೆ ಎಂಬುದನ್ನು ಗುರುತಿಸಿದ್ದಾರೆ. ಆಂಗ್ಲ ಭಾಷೆಯ 'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ' ಎಂಬ ವಾರಪತ್ರಿಕೆಯ 2008ರ ಏಪ್ರಿಲ್-ಮೇ ತಿಂಗಳ ಕೆಲವು ಸಂಚಿಕೆಗಳಲ್ಲೂ ಈ ಚಳವಳಿಯ ಕುರಿತಾದ ಲೇಖನಗಳು ಪ್ರಕಟವಾಗಿವೆ. ಪ್ರಕಾಶ್ ಸಿಂಗ್ ಎಂಬ ಹಿರಿಯ ಐಪಿಎಸ್ ಅಧಿಕಾರಿ 'ದಿ ನಕ್ಸಲೈಟ್ ಮೂವ್‌ಮೆಂಟ್ ಇನ್ ಇಂಡಿಯ' ಎಂಬ ಆಂಗ್ಲ ಕೃತಿಯಲ್ಲಿ ಈ ಚಳವಳಿಯನ್ನು ತುಳಿತಕ್ಕೊಳಗಾದವರ ಶೋಷಿತ ವರ್ಗದ ಸಹನೆ ಮೀರಿದ ಹೋರಾಟ ಎಂಬಂತೆ ಬರೆದಿದ್ದಾರೆ. ಬಹುಶಃ ದೇಶದಲ್ಲಿ ಜನಮಾನಸದೊಂದಿಗೆ ಈ ಮಟ್ಟಕ್ಕೆ ಸೇರಿಹೋಗಿ ಸಂಚಲನೆ ಉಂಟುಮಾಡುತ್ತಿರುವ ಸಾಹಿತ್ಯವೆಂದರೆ ಅದು ನಕ್ಸಲೈಟ್ ಹೋರಾಟದ ನೆಲೆಯಲ್ಲಿ ಹೊರಬಂದ ಸಾಹಿತ್ಯ ಮಾತ್ರ ಎನಿಸುತ್ತದೆ.


ಕರ್ನಾಟಕದಲ್ಲಿ ನಕ್ಸಲೈಟ್ ಚಳವಳಿ 80ರ ದಶಕದಲ್ಲಿ ಆರಂಭವಾದರೂ ಇಂದು ಕಾಣುತ್ತಿರುವ ಪ್ರಭಾವವನ್ನು ಆಗ ಹೊಂದಿರಲಿಲ್ಲ. ಉತ್ತರ ಕರ್ನಾಟಕದ ಬೀದರ್, ರಾಯಚೂರುಗಳ ನಗರ ಹಾಗೂ ಹಳ್ಳಿಗಾಡಿನಲ್ಲಿ ಚಳವಳಿ ಬೇರುಬಿಟ್ಟಿತು. ಆದರೆ 2003ರ ನಂತರ ಈ ಚಳವಳಿ ಮಲೆನಾಡು ಪ್ರದೇಶದಿಂದ ಸುದ್ದಿ ಮಾಡುತ್ತಿದೆ. ಹಲವು ಎನ್‌ಕೌಂಟರ್‌ಗಳು ನಡೆದು ಹತ್ತಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇಂದು ಇದು ಕರ್ನಾಟಕದಾದ್ಯಂತ ಪ್ರಚಲಿತ ಚರ್ಚೆಯಾಗಿ ಪರ, ವಿರೋಧ, ಸಹಾನುಭೂತಿಪರ ಹೀಗೆ ನಡೆಯುತ್ತಿವೆ. ಹಲವರಿಗೆ ಉದ್ದೇಶಗಳ ಬಗ್ಗೆ ಭಿನ್ನಾಭಿಪ್ರಾಯ ಇಲ್ಲವಾದರೂ ಹಾದಿ ಬಗ್ಗೆ ಭಿನ್ನಾಭಿಪ್ರಾಯಗಳು ಇವೆ.



ಪ್ರತಿಕ್ರಿಯೆ

ಎಲ್ಲಾ ಚಳವಳಿಗಳಂತೆ ನಕ್ಸಲೈಟ್ ಚಳುವಳಿ ಬಗ್ಗೆ ಖಂಡಿತ ವಿಮರ್ಶಾತ್ಮಕ ವಾಗಿರಬೇಕು. ಆದರೆ ಅದು ವಾಸ್ತವಕ್ಕೆ ವಿರುದ್ಧವಾಗಿರಬಾರದು. ಯಾಕೆಂದರೆ ಈ ದೇಶದ ದಲಿತರು, ಆದಿವಾಸಿಗಳು, ಮಹಿಳೆಯರು ಸೇರಿದಂತೆ ಶೋಷಿತರ ಒಂದು ಪ್ರಬಲ ಶಕ್ತಿಶಾಲಿ ಧ್ವನಿಯಾಗಿ ಮಾವೋವಾದಿ ಚಳುವಳಿ ನಿಂತು ಬೆಳೆಯುತ್ತಿದೆ.ಎಂಬುದನ್ನು ಮರೆಯ ಬಾರದು.

ಸಜ್ಜನ ಶ್ರೀಕಂಠಪ್ಪ



ಇತ್ತೀಚೆಗೆ ನಿಧನರಾದ ಚಿಕ್ಕಮಗಳೂರು ಸಂಸದ ಸಿ. ಶ್ರೀಕಂಠಪ್ಪನವರು ಬಿಜೆಪಿ ಸಂಸದರಾಗಿದ್ದರು ಎನ್ನುವುದಕ್ಕಿಂತ ಒಳ್ಳೆಯ ರೈತರಾಗಿದ್ದರು ಎನ್ನುವುದೇ ಸೂಕ್ತ, ಸರಳತೆ ಮತ್ತು ಸಜ್ಜನಿಕೆಗೆ ಹೆಸರಾದ ಶ್ರೀಕಂಠಪ್ಪ ನಿಜಲಿಂಗಪ್ಪನವರ ಕಾಲದ ಕಾಂಗ್ರೆಸ್ಸಿಗರು. ಆ ಕಾಲದ ಕಾಂಗ್ರೆಸ್ಸಿಗರ ಮೊದಲ ಗುಣವೆಂದರೆ. ಎಲ್ಲ ಜನಾಂಗವೂ ಗೌರವಿಸುವಂತಹ ಸೆಕ್ಯೂಲರ್ ಮನಸ್ಸಿಗೆ ಸಜ್ಜನಿಕೆ ವ್ಯಕ್ತಿಗಳು. ಅದು ಶ್ರೀಕಂಠಪ್ಪನವರಲ್ಲಿ ಕಡೆಯವರೆಗೂ ಮನೆಮಾಡಿತ್ತು. ಶ್ರೀಕಂಠಪ್ಪ ಅಪ್ಪಟ ಕೃಷಿಕರು. ಕೃಷಿಯಿಂದಲೇ ಮೇಲೆ ಬಂದವರು. ನಮ್ಮ ನೆಲದ ರೈತನಿಗೆ ಹೇಗೆ ಮೋಸ, ವಂಚನೆ, ಸುಳ್ಳುಗಳು ಅಷ್ಟಾಗಿ ಹಿಡಿಸುವುದಿಲ್ಲವೋ ಹಾಗೆಯೇ ಶ್ರೀಕಂಠಪ್ಪನವರು ರಾಜಕಾರಣದಲ್ಲಿದ್ದರೂ ಮುಗ್ಧ ರೈತನಂತಿದ್ದರು. ಆ ಕಾರಣಕ್ಕೆ ಅವರನ್ನು ಎಲ್ಲಾ ಪಾರ್ಟಿಯ ಜನರೂ ಗೌರವಿಸುತ್ತಿದ್ದರು. ಆದರೆ ಬಿಜೆಪಿಯವರನ್ನು ಬಿಟ್ಟು. ಏಕೆಂದರೆ ಶ್ರೀಕಂಠಪ್ಪನವರಿಗೂ, ಬಿಜೆಪಿ ಸಿದ್ಧಾಂತಗಳಿಗೂ ಆಷ್ಟಕಷ್ಟೆ. ಆ ಕಾರಣಕ್ಕೆ, ಅವರು ಚಿಕ್ಕಮಗಳೂರಿನ ಹುಂಬ ರಾಜಕಾರಣಿಗಳ ಜೊತೆ ಕಾಣಿಸಿಕೊಳ್ಳಲಿಲ್ಲ, ಅಲ್ಲದೆ ಬಾಬಾಬುಡನ್‌ಗಿರಿ ವಿಷಯದಲ್ಲೂ ಮಾತನಾಡಲಿಲ್ಲ, ಸದಾನಂದಗೌಡನಂತಹ ರಾಜಕಾರಣಿ ಬಂದು ದತ್ತಮಾಲೆ ಹಾಕಿ, ಕಷಾಯ ಧರಿಸಿದ್ದಾಗಲೂ ಶ್ರೀಕಂಠಪ್ಪನವರು ಅತ್ತ ಸುಳಿಯಲಿಲ್ಲ, ಇಂತಹ ಚಟುವಟಿಕೆಯೆಲ್ಲ ಅವರ ರಾಜಕಾರಣದ ಶೈಲಿಗೆ ಹೊರತಾಗಿದ್ದವು.

ಚಿಕ್ಕಮಗಳೂರು ಲೋಕಸಭಾ ಸ್ಥಾನ ಈ ಹಿಂದೆ ಮೂಡಿಗೆರೆ ಕಡೆಯ ಎಸ್ಟೇಟ್ ಮಾಲೀಕರ ಸ್ವತ್ತಾಗಿತ್ತು. ಡಿ.ಬಿ. ಚಂದ್ರೇಗೌಡ, ಪುಟ್ಟೇಗೌಡ, ತಾರಾದೇವಿ, ಬಿ.ಎಲ್.ಶಂಕರ್ ಇವರೆಲ್ಲ ಸರದಿಯಂತೆ ಗೆದ್ದು ಲೋಕಸಭೆಗೆ ಹೋಗುತ್ತಿದ್ದರು. ಜೊತೆಗೆ ಅವರೆಂದೂ ಸಾರ್ವಜನಿಕರಿಗೆ ಸಿಕ್ಕಿದವರಲ್ಲ, ಆದರೆ ಶ್ರೀಕಂಠಪ್ಪ ಕಾಣಿಸಿಕೊಂಡ ಮೇಲೆ ಅವರೆಲ್ಲಾ ಮೂರು ಬಾರಿ ಲೋಕಸಭಾಸ್ಥಾನ ಬಿಟ್ಟುಕೊಡಬೇಕಾಯ್ತು, ಇದಕ್ಕೆ ಮೊದಲ ಕಾರಣವೆಂದರೆ ಶ್ರೀಕಂಠಪ್ಪನವರ ಸಜ್ಜನಿಕೆ ಮತ್ತು ಸರಳತೆ. ಕರೆದರೆ ಯಾರ ಮನೆಗಾದರೂ, ಯಾವ ಸಭೆಗಾದರೂ ಬರುತ್ತಿದ್ದ ಅವರು ಮುಂದೂ ಕೂಡ ಗೆಲ್ಲುವವರಾಗಿದ್ದರು. ಆದರೆ ಈಗ ಚಿಕ್ಕಮಗಳೂರು ಕ್ಷೇತ್ರವೇ ಹೊರಟುಹೋಗಿದೆ. ಶ್ರೀಕಂಠಪ್ಪನವರೂ ಕಾಲವಾಗಿದ್ದಾರೆ.

ಕೆಲವಾರು ದಿನಗಳಿಂದ ಅನಾರೋಗ್ಯದಿಂದಿದ್ದ ಶ್ರೀಕಂಠಪ್ಪ ಕಡೆಗೆ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ದಾಖಲಾದಾಗ ಮನಮೋಹನ್ ಸಿಂಗ್ ವಿಶ್ವಾಸ ಮತ ಯಾಚಿಸಿದ್ದರು. ಶ್ರೀಕಂಠಪ್ಪ ಹೋಗಲಾಗದ್ದನ್ನೇ ಅನುಮಾನಿಸಿದ್ದ ಕೆಲ ಬಿಜೆಪಿಗಳು ಅರೆ ಮನಸ್ಸಿನಿಂದ ಟೀಕಿಸಿದ್ದದು. ಅವರಿಗೆಲ್ಲ ಈ ಸಾವು ಸತ್ಯಸಂಗತಿಯನ್ನು ಮನವರಿಕೆ ಮಾಡಿಕೊಟ್ಟಿರಬಹುದು.

ಬಿಜೆಪಿಗಳನ್ನು ಭೇಟಿಯಾಗಿ ಮಾತನಾಡಿಸುವುದೆಂದರೆ ಅದೊಂದು ರೀತಿಯ ಗಬ್ಬುವಾಸನೆ ಜನಗಳನ್ನು ಭೇಟಿಯಾದಂತೆ. ಆದರೆ ಶ್ರೀಕಂಠಪ್ಪನವರನ್ನು ಎಷ್ಟು ಬಾರಿ ಸಂಧಿಸಿದರೂ ಕೂಡ ಅವರು ಕೃಷಿ ವಿಷಯ ಬಿಟ್ಟರೆ, ಈ ದೇಶವನ್ನಾಳಿದ ಒಳ್ಳೆಯ ರಾಜಕಾರಣಿಗಳ ವಿಷಯ ಮಾತನಾಡುತ್ತಿದ್ದರು.

ನಿಜಲಿಂಗಪ್ಪ, ಕಡಿದಾಳು ಮಂಜಪ್ಪ, ದೇವರಾಜ

ಸಶಸ್ತ್ರ ಹೋರಾಟದ ಪ್ರಭಾವ ಕರ್ನಾಟಕದಲ್ಲಿ ಆ ಮಾಣದಲ್ಲಿ ಕಡಿಮೆ ಇತ್ತು. ಮಲೆನಾಡು ಸೀಮೆಗಂತೂ ಈ ರೀತಿಯ ಹೋರಾಟ ಹೊಸದಾದುದು. ಆದರೆ ಮಾವೋವಾದಿ ಚಳವಳಿ ಅಲ್ಲಿ ಬೇರುಬಿಟ್ಟಿದೆ. ಜನರು ದನ್ನು ಒಪ್ಪಿಕೊಂಡು ಕಾಪಾಡುತ್ತಿರುವುದರಿಂದಲೇ ಅವರ ಸ್ತ್ರ ದಳಗಳು ಉಳಿಯಲು ಸಾಧ್ಯವಾಗಿರುವುದು. ಈ ಳವಳಿ ಇರುವ ಮಲೆನಾಡು ಭಾಗದಲ್ಲಿ ದೊಡ್ಡ ಂಟಕವಾಗಿ ಬಂದ ಒಕ್ಕಲೆಬ್ಬಿಸುವಿಕೆಗಳು, ಅರಣ್ಯ ಲಾಖೆಯ ದೌರ್ಜನ್ಯಗಳು ಸದ್ಯಕ್ಕೆ ನಿಂತಿವೆ. ಭೂಮಾಲೀಕರ ೋಷಣೆಗಳು ಇಂದು ಕಡಿಮೆ ಆಗಿವೆ. ಕೂಲಿ ದರ 5-30 ರಿಂದ 80-100 ರೂಪಾಯಿಗಳಿಗೇರಿದೆ ಂಬುದಾಗಿ ಅಲ್ಲಿನ ಜನರು ಹೇಳುತ್ತಾರೆ. ಈ ಚಳವಳಿಯ ವೇಶ ಆಗಿರದಿದ್ದರೆ ಇದೆಲ್ಲಾ ಸಾಧ್ಯ ಆಗುತ್ತಿರಲಿಲ್ಲ ಂಬುದು ಹಲವರ ಅಭಿಪ್ರಾಯ ಕೂಡ ಹೌದು. ಕ್ಸಲೈಟ್ ಚಳವಳಿಯನ್ನು ಮಟ್ಟಹಾಕಲು 70 ರ ದಶಕದ ್ಯೋತಿ ಬಸುವಿನಿಂದ ಹಿಡಿದು ಇಲ್ಲಿಯವರೆಗೂ ಾಡಬಹುದಾದ ಎಲ್ಲಾ ಪ್ರಯತ್ನಗಳನ್ನೂ ನಡೆಸುತ್ತಲೇ ದ್ದಾರೆ. ಅಲ್ಪ ಅವಧಿಯ ಹಿನ್ನಡೆಗಳನ್ನು ಅನುಭವಿಸಿರು ್ದು ನಿಜವಾದರೂ, ಕೆಲವು ಸಂಘಟನಾ ತಪ್ಪುಗಳನ್ನು ಾಡಿರುವುದು ಕೂಡ ಹೌದಾದರೂ ಅವೆಲ್ಲವನ್ನೂ ರಿಪಡಿಸಿಕೊಳ್ಳುತ್ತಾ ಸಾಗುತ್ತಿರುವುದನ್ನಂತೂ ನಾವು ೋಡಬಹುದು.

ಮಾವೋವಾದಿ ಚಳವಳಿಯ ಇನ್ನೊಂದು ವಿಶೇಷತೆ ಂದರೆ ತಪ್ಪುಒಪ್ಪುಗಳನ್ನು ಸಮೀಕ್ಷೆ ನಡೆಸಿ ವಿಮರ್ಶಾತ್ಮಕ ಾಗಿ ನೋಡಿಕೊಂಡು ತಿದ್ದಿಕೊಳ್ಳುತ್ತಾ ಸಾಗುವ ಪರಿಪಾಠ. ಂತಹ ಸಮೀಕ್ಷಾ ವರದಿಗಳು, ಗುರುತಿಸಿಕೊಳ್ಳುವ ಂಶಗಳನ್ನು ಅವಲೋಕನ ಮಾಡುವುದು ಆಸಕ್ತಿಕರ ಾಗಿರುತ್ತದೆ. ಈ ರೀತಿಯ ಸಂಘಟನಾ ಪ್ರಾಮಾಣಿಕತೆ, ದ್ಧತೆ, ನಿಸ್ವಾರ್ಥತೆ, ಪ್ರಾಣಗಳನ್ನೇ ಪಣಕ್ಕಿಡುವ ದೃಢತೆ ರುವುದರಿಂದಾಗಿಯೇ ಮಾವೋವಾದಿ ಚಳವಳಿ ಳೆಯುತ್ತಿದೆ, ಭ್ರಷ್ಟಗೊಂಡಿಲ್ಲ. ಇಂದು ನಕ್ಸಲೈಟರ ್ರಾಮಾಣಿಕತೆ ಹಾಗೂ ಬದ್ಧತೆಯ ಬಗ್ಗೆ ಸಾಮಾನ್ಯ ನರಿಗೆ ಹಾಗೂ ಜನಪರ ಶಕ್ತಿಗಳಿಗೆ ಪ್ರಶ್ನೆ ಇಲ್ಲ.

ಇದನ್ನೆಲ್ಲ ನೋಡಿದಾಗ ನಕ್ಸಲೈಟರು ಕಾಡಿನ ಂಧರ್ವರಾಗಿದ್ದುಕೊಂಡು ಇದೆಲ್ಲಾ ಸಾಧಿಸಲು ಸಾಧ್ಯವೆ ಂಬ ಪ್ರಶ್ನೆ ಬರುತ್ತದೆ. ಡಾ. ವಾಸುರವರು ತಮ್ಮ ೇಖನದಲ್ಲಿ ಉಲ್ಲೇಖಿಸಿರುವುದನ್ನು ನೋಡಿದಾಗ ವಾಸ್ತವಕ್ಕೆ ೂರವಾದುದು ಎನಿಸುತ್ತದೆ.

ಹಾಗೆಂದಾಗ ಈ ಚಳವಳಿ ಬಗ್ಗೆ ವಿಮರ್ಶಾತ್ಮಕವಾಗಿ ರಬಾರದು ಎಂಬುದಲ್ಲ. ನಾನು ಹೇಳುತ್ತಿರುವುದು ಲ್ಲಾ ಚಳವಳಿಗಳಂತೆ ನಕ್ಸಲೈಟ್ ಚಳವಳಿ ಬಗ್ಗೆ ಖಂಡಿತ ಮರ್ಶಾತ್ಮಕವಾಗಿರಬೇಕು. ಆದರೆ ಅದು ವಾಸ್ತವಕ್ಕೆ ರುದ್ಧವಾಗಿರಬಾರದು. ಯಾಕೆಂದರೆ ಈ ದೇಶದ ದಲಿತರು, ದಿವಾಸಿಗಳು, ಮಹಿಳೆಯರು ಸೇರಿದಂತೆ ಶೋಷಿತರ ಂದು ಪ್ರಬಲ ಶಕ್ತಿಶಾಲಿ ಧ್ವನಿಯಾಗಿ ಮಾವೋವಾದಿ ಳವಳಿ ನಿಂತು ಬೆಳೆಯುತ್ತಿದೆ ಎಂಬುದನ್ನು ಮರೆಯ ಾರದು. ಇಲ್ಲದಿದ್ದಲ್ಲಿ ಅಂತಹ ವಿಮರ್ಶೆಯು ಲೂಟಿ ಾಡುವವರಿಗೆ, ಶೋಷಣೆ ಮಾಡುವವರಿಗೆ, ಜನರ ರೋಧಿಗಳಿಗೆ ಮಾತ್ರ ಅನುಕೂಲ ಮಾಡುತ್ತದೆಯೆ ೂರತು ಸಾಮಾನ್ಯ ಜನರಿಗಂತೂ ಅಲ್ಲ.

■ ರಂಗರಾಜ್

ರಸು, ಲಾಲ್‌ಬಹದ್ದೂರ್ ಶಾಸ್ತ್ರಿ
ಹಮಗಳನ್ನೇ ಸುತ್ತುತ್ತಿದ್ದ ಅವರು.
ಜಪೇಯಿಯನ್ನು ಬಹುವಾಗಿ ಮೆಚ್ಚಿದ್ದರು.
ದು ಬಿಟ್ಟರೆ ಪ್ರಸ್ತುತ ಭಾರತದ ಸಮಸ್ಯೆಗಳಾದ
ರಡೀಕರ್, ಗೋಳ್ವಾರ್ಕರ್ ಸಾವರಕರ್ ಬಗ್ಗೆ
ಂದೂ ಮಾತನಾಡಲಿಲ್ಲ. ಅವರೆಲ್ಲಾ
ಸಂತಕುಮಾರ್ ಕಡೆಯವರೆಂಬಂತೆ ತಾತ್ಸಾರ
ಾಡಿಬಿಟ್ಟಿದ್ದರು.

ಮುಸ್ಲಿಮರ ಮದ್ರಸಾಗಳ ಬಗ್ಗೆ ಕೆಟ್ಟ
ುತೂಹಲ ಹೊಂದಿದ್ದ ಶ್ರೀಕಂಠಪ್ಪ
ಮುಸ್ಲಿಮರು ನಮ್ಮ ಜೊತೆ ಸೇರಬೇಕು
ಿ. ದೂರ ಹೋದ್ರೆ, ಅವರಿಗೆ ಕಷ್ಟ"
ಂದು ಗೊಣಗುತ್ತಿದ್ದರು. ಮಗ
ಾಗುವುದನ್ನು ಕಣ್ತುಂಬಿಕೊಂಡು ಕಾಲವಾದ
ಡೆಯುಂತೆ ಟಿ.ಟಿ. ರವಿ ಎಂಬಾತನ ಹುಂಬ
ಗಳನ್ನು ನೋಡುತ್ತಾ ನೋವಿನಿಂದಲೇ
ಸಿದುಕೊಳ್ಳಿದ ಶ್ರೀಕಂಠಪ್ಪನವರು
ಹೇಳುತ್ತಿದ್ದ ಅಜ್ಜ, ಎಲ್ಲಾ ಕಾರ್ಯಾಲಯ
ಳಾಗುತ್ತಿರುವ ಸಜ್ಜನರು.

■ ವರದಿಗಾರ

ಭಯೋತ್ಪಾದನೆ, ಬುದ್ಧಿಜೀವಿಗಳು ಮತ್ತು ಬಿಜೆಪಿ

ಕುಖ್ಯಾತ ಆದಿ ಉಡುಪಿ ಬೆತ್ತಲೆ ಪ್ರಕರಣದ ತೀರ್ಪು ಪ್ರಕಟವಾದ ದಿನ ಉಡುಪಿಯ ತ್ವರಿತ ನ್ಯಾಯಾಲಯದ ಆವರಣದಲ್ಲಿ ಎಂದಿಗಿಂತ ಹೆಚ್ಚು ಜನ ಸೇರಿದ್ದರು. ಈ ತೀರ್ಪಿನ ಬಗ್ಗೆ ಯಾರಿಗೂ ಅಂತಹ ಕುತೂಹಲವೇನೂ ಇರಲಿಲ್ಲ. 'ಕೇಸು ಬಿದ್ದು ಹೋಗುತ್ತದೆ' ಎನ್ನುವುದು, ಪೊಲೀಸರು ಪ್ರಕರಣಕ್ಕೆ ಸಂಬಂಧಿಸಿದ ದೂರು ದಾಖಲಿಸಿಕೊಂಡಾಗಲೇ ಗೊತ್ತಾಗಿ ಹೋಗಿತ್ತು. ತಮ್ಮ ಮೂಗಿನ ಅಡಿಯಲ್ಲೇ ನಡೆದ ಒಂದು ಅಪರಾಧದ ಕುರಿತ ಪ್ರಥಮ ಮಾಹಿತಿಯನ್ನು (FIR) ಪೊಲೀಸರು ದಾಖಲಿಸಿದ್ದು ಅದರ ಫೋಟೋ ಪತ್ರಿಕೆಗಳಲ್ಲಿ ಪ್ರಕಟವಾದ ಮೇಲೆ-ಅಂದರೆ ಘಟನೆ ನಡೆದ ಮೂರು ದಿನಗಳ ನಂತರ!

ಕರಾವಳಿಯ ಹೆಮ್ಮೆಯ ಪತ್ರಿಕೆ 'ಉದಯವಾಣಿ' ಈ ಪ್ರಕರಣದಲ್ಲಿ ಎಲ್ಲರ ಕಣ್ಣೆದುರಿಗೇ ಬೆತ್ತಲಾಯಿತು. ಆದಿ ಉಡುಪಿಯಲ್ಲಿ ನಡೆದ ಅಮಾನುಷ ಘಟನೆಯನ್ನು ಪ್ರತಿಭಟಿಸಿ ಉಡುಪಿಯಲ್ಲಿ ನಡೆದ ಬೃಹತ್ ಮೆರವಣಿಗೆಯ ಬಗ್ಗೆ ಆ ಪತ್ರಿಕೆ ಹಸಿ ಸುಳ್ಳುಗಳನ್ನೇ ಹೇಳಿದ್ದಲ್ಲದೆ, ಮೆರವಣಿಗೆಯಲ್ಲಿದ್ದ ಕೆಲವರು ಪಾಕಿಸ್ತಾನದ ಧ್ವಜ ಹಿಡಿದಿದ್ದರು ಎಂದು "ಫೋಟೋ ಪುರಾವೆ" ಸಮೇತ ಪ್ರಕಟಿಸಿಬಿಟ್ಟಿತು. ವಾಸ್ತವವಾಗಿ ಅದು ಎಲ್ಲೆಡೆ ದರ್ಗಾಗಳ ಮೇಲೆ ಹಾರಿಸ ಲಾಗುವ ಹಸಿರು ಧ್ವಜ ವಾಗಿತ್ತು. ಆ ಬಗ್ಗೆ ಪತ್ರಿಕೆ ತನ್ನ ಮುಂದಿನ ಸಂಚಿಕೆಯ ಮುಖಪುಟದಲ್ಲೇ ಕ್ಷಮೆಯಾಚಿ ಸಿದ್ದೂ ಆಯಿತು.

ಈ ಪ್ರಕರಣದ ವಿಚಾರಣೆಯನ್ನು ನ್ಯಾಯಾಲಯ ಹೇಗೆ ನಡೆಸುತ್ತದೆ ಎಂಬುದರ ಬಗ್ಗೆ ನನಗೆ ಕುತೂಹಲವಿತ್ತು. ಆದಿ ಉಡುಪಿ ಬೆತ್ತಲೆ ಪ್ರಕರಣ, ಕಾನೂನಿನ ದೃಷ್ಟಿಯಿಂದ ಮಾತ್ರವಲ್ಲ, ಸಹಜ ನ್ಯಾಯದ ದೃಷ್ಟಿಯಿಂದಲೂ ಒಂದು ಘೋರ ಅಪರಾಧವಾಗಿತ್ತು. ಕಾನೂನಿನ ದೃಷ್ಟಿಯಲ್ಲಿ ಅಪರಾಧವಾಗಿರುವ ಎಲ್ಲ ಕೃತ್ಯಗಳೂ- ಉದಾಹರಣೆಗೆ ಭಾರತದಲ್ಲಿ ರಸ್ತೆಯ ಬಲಭಾಗದಲ್ಲಿ ಡ್ರೈವ್ ಮಾಡುವುದು-ನೈತಿಕ ಅಪರಾಧಗಳಲ್ಲ. ಆದರೆ ಆದಿ ಉಡುಪಿಯಲ್ಲಿ ಅಂದು ನಡೆದ ಘಟನೆ, ಕಾನೂನಿನ ಉಲ್ಲಂಘನೆಯಷ್ಟೇ ಆಗಿರಲಿಲ್ಲ. ಅದೊಂದು ಪಾಪ ಕೃತ್ಯವೂ ಆಗಿದ್ದಿತು. ನ್ಯಾಯಾಲಯ ಅದರ ನ್ಯಾಯ ನಿರ್ಣಯವನ್ನು ಹೇಗೆ ನಡೆಸುತ್ತದೆ ಎಂದು ತಿಳಿಯಲು, ನಾನು ಆ ಕೇಸಿನ ಹಿಯರಿಂಗು ಇದ್ದ ದಿನಗಳಂದು ನ್ಯಾಯಾಲಯದಲ್ಲಿ ಹಾಜರಾಗುತ್ತಿದ್ದೆ.

ಕೇಸಿನ ಪರವಾಗಿ ವಾದಿಸಬೇಕಾಗಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್, ವಿಚಾರಣೆಯ ಉದ್ದಕ್ಕೂ ಒಂದಲ್ಲ ಒಂದು ಫೈಲು ಮಗುಚಿ ಹಾಕುತ್ತ ಕಾಲಹರಣ ಮಾಡಿದ್ದು, ಘಟನೆಯ ಬಗ್ಗೆ ಸಾಕ್ಷಿ ಹೇಳಲು ಕಟಕಟೆಗೆ ಬಂದ ಪೊಲೀಸರು ಕಾಟಾಚಾರಕ್ಕೆ ಎಂಬಂತೆ ಸಾಕ್ಷಿ ಹೇಳಿ ಘಟನೆಗೆ ಪ್ರತ್ಯಕ್ಷ ಪ್ರಮಾಣಗಳೇ ಇಲ್ಲದಂತೆ ನೋಡಿ ಕೊಂಡದ್ದು, ಕೇಸಿನ ವಿಚಾರಣೆ ಇದ್ದ ದಿನಗಳಂದು ನ್ಯಾಯಾಲಯಕ್ಕೆ ಹಾಜರಾಗದ ಸಾಕ್ಷಿಗಳನ್ನು ನ್ಯಾಯಾಧೀಶರು ತರಾಟೆಗೆ ತೆಗೆದುಕೊಳ್ಳುವ ನಟನೆ ಮಾಡುತ್ತಿದ್ದುದು, ಕಟಕಟೆಯಲ್ಲಿ ನಿಂತು ಸಾಕ್ಷಿ ಹೇಳುತ್ತ ಭಾವಾ ವೇಗಕ್ಕೆ ಒಳಗಾದ ಹಾಜಬ್ಬ ಅವರ ಪತ್ನಿಗೆ ನ್ಯಾಯಾಧೀಶರು "ಇದು ಕೋರ್ಟು. ಕೇಳಿದ ಪ್ರಶ್ನೆಗೆ ಮಾತ್ರ ಉತ್ತರಿಸಬೇಕು" ಎಂದು ಗದರಿಸಿದ್ದು-ಹೀಗೆ ಈ ವಿಚಾರಣೆಯ ಹಲವು ಚಿತ್ರಗಳು ನನ್ನ ಮನಸ್ಸಿನಲ್ಲಿ ಕೂತು ಬಿಟ್ಟಿವೆ.

ಉಡುಪಿಯ ತ್ವರಿತ ನ್ಯಾಯಾಲಯದಲ್ಲಿ ತಾ. 29.7.08 ರಂದು ಈ ಪ್ರಕರಣದ ತೀರ್ಪು ಪ್ರಕಟವಾಗುವುದಕ್ಕೆ ಎರಡು ಗಂಟೆಗೆ ಮೊದಲೆ ಕೇಸರಿಧ್ವಜ, ಪಟಾಕಿ ಮಾಲೆಗಳ ಸಮೇತ ಹಾಜರಿದ್ದ ಭಾಜಪ ವೀರರಲ್ಲಿ ಇಬ್ಬರು ನಗರಸಭಾ ಸದಸ್ಯರೂ ಸೇರಿದಂತೆ ಸುಮಾರು ನೂರು ಜನರಿದ್ದರು. ಅವರಲ್ಲಿ ಕೆಲವರು, ನನ್ನೆದುರಿಗೇ ನನ್ನ ಕುರಿತು ಆಡಿಕೊಂಡರು, ಅಶ್ಲೀಲವಾಗಿ ಬೈದರು; ಹಂಗಿಸಿದರು. ಇನ್ನು ಕೆಲವರು, ಬದಿಗೆ ನಿಂತು, "ಅವ ಎಲ್ಲಿಂದ ಬಂದದ್ದಂತೆ? ಇಲ್ಲಿಗೆ ಯಾಕೆ ಬಂದ?" ಎಂದು ಮುಂತಾಗಿ ನನಗೆ ಕೇಳುವಂತೆ ವಿಚಾರಿಸಿಕೊಳ್ಳುತ್ತಿದ್ದರು. ಒಬ್ಬ ಮಧ್ಯವಯಸ್ಕರು ಗಂಭೀರವಾಗಿ, "ನೀವು ಇಲ್ಲಿಗೆ ಯಾಕೆ ಬಂದದ್ದು? ಬಾಂಬ್ ಬ್ಲಾಸ್ಟ್ ಆದಲ್ಲಿಗೆ ನೀವು ಯಾಕೆ ಹೋಗುವುದಿಲ್ಲ? ಅಲ್ಲಿ ಯಾಕೆ ಧರಣಿ ಮಾಡುವುದಿಲ್ಲ? ನೀವು ಹಿಂದುವಾ?" ಎಂದು ನನ್ನನ್ನು ಪ್ರಶ್ನಿಸಿದರು. ಅವರ ಬಳಿ ಇದ್ದ ಯುವಕರೊಬ್ಬರು, "ಛೇ ಛೇ ನೀವು ಎಂತ ಮಾತಾಡುವುದು? ಅವರು ಹಿಂದೂ ಮಾರಾಯ್ರೇ, ಈಗ ಅವರು ಸನ್ಮೊಟ್ಟಿಗೆ ಟೆರರಿಸ್ಟ್ ವಿರುದ್ಧ ಧರಣಿಗೆ ಬರುತ್ತಾರೆ, ಅಲ್ಲವಾ? ಬರ್ತೀರಿ ಅಲ್ಲವಾ?" ಎಂದು ನನ್ನನ್ನು ಅರ್ಧ ರಮಿಸುವ, ಅರ್ಧ ಹಂಗಿಸುವ ಧ್ವನಿಯಲ್ಲಿ ಕೇಳಿದರು. ಆ ಯುವಕರಿಗೆ ನನ್ನ ಅರ್ಧದಷ್ಟೂ ಪ್ರಾಯವಾಗಿರಲಿಲ್ಲ! ನನ್ನ ಪರಿಚಯವೂ ಇರಲಿಲ್ಲ. ಹೀಗೆ ಅಲ್ಲಿದ್ದವರ ವಿಧವಿಧವಾದ ಮೂದಲಿಕೆಯ ವಾಗ್ಬಾಣಗಳಿಂದ ಕಂಗಾಲಾಗಿ, ನನ್ನ ಎದುರಾಳಿಗಳ ತರ್ಕವನ್ನು ಸ್ವಲ್ಪ ಮನಸ್ಸಿನೊಳಗೆ ಬಿಟ್ಟುಕೊಂಡು, "ನನಗಾದರೂ ಇಲ್ಲಿಗೆ ಬರುವ ಕೆಲಸ ಏನಿದ್ದಿತು?" ಎಂದು ಮುಂತಾಗಿ ಯೋಚಿಸುತ್ತ ತೀರ್ಪು ಹೊರಬಿದ್ದು ಈ ವೀರರೆಲ್ಲ ಜಾಗ ಖಾಲಿ ಮಾಡುವವರೆಗೆ ನಾನು ಕೋರ್ಟಿನ ಆವರಣದಲ್ಲೇ ನಿಂತಿದ್ದೆ.

"ನೀವು ಬಾಂಬ್ ಬ್ಲಾಸ್ಟ್ ಆದಲ್ಲಿ ಯಾಕೆ ಹೋಗುವುದಿಲ್ಲ? ಅದರ ವಿರುದ್ಧ ಯಾಕೆ ಪ್ರತಿಭಟನೆ ಮಾಡುವುದಿಲ್ಲ?"- ಇದು ಬಿಜೆಪಿಯವರು ತಮ್ಮನ್ನು ವಿರೋಧಿಸುವ ಎಲ್ಲರಿಗೂ ಕೇಳುವ ಪ್ರಶ್ನೆ. ಈ ಪ್ರಶ್ನೆಯ ವರಸೆಯಲ್ಲೇ ನೀವು ಭಯೋತ್ಪಾದನೆಯ ಬಗ್ಗೆ ನಿಷ್ಕ್ರಿಯರಾಗಿದ್ದೀರಿ ಅಥವಾ ಅದರ ಪರವಾಗಿದ್ದೀರಿ ಎಂದು ಆರೋಪಿಸುವ ಹುನ್ನಾರವೂ ಅಡಗಿದೆ. ಉಡುಪಿಯ ತ್ವರಿತ ನ್ಯಾಯಾಲಯದಲ್ಲಿ ಅಂದು ನಾನು ಎದುರಿಸಿದ್ದು, ಬಿಜೆಪಿಯ ಈ ಮಾಮೂಲಿ ಬ್ಲ್ಯಾಕ್‌ಮೇಲ್ ತಂತ್ರವನ್ನೇ. ಕೆಲವು ಜನಪ್ರಿಯ ಪತ್ರಿಕೆಗಳೂ ಈಗ ಬಿಜೆಪಿಯನ್ನು ವಿರೋಧಿಸುವ ಬುದ್ಧಿಜೀವಿಗಳಿಗೆ ಇದೇ ವರಸೆಯಲ್ಲಿ ಸವಾಲು ಹಾಕುತ್ತಿವೆ. ಉದಾಹರಣೆಗೆ ಈ ವಾರದ 'ಹಾಯ್ ಬೆಂಗಳೂರು' ಪತ್ರಿಕೆಯ ಸಂಪಾದಕೀಯದಲ್ಲೇ ಕರ್ನಾಟಕದ ಬುದ್ಧಿಜೀವಿಗಳನ್ನು "ಬೆಂಗಳೂರಿನಲ್ಲಿ ಬಾಂಬ್ ಸ್ಫೋಟವಾಗುವಾಗ ನೀವು ಏನು ಮಾಡುತ್ತಿದ್ದಿರಿ" ಎಂದು ತರಾಟೆಗೆ ತೆಗೆದುಕೊಳ್ಳಲಾಗಿದೆ.

ರವಿ ಬೆಳಗೆರೆ ಸಾರಥ್ಯದಲ್ಲಿ...

ಹಾಯ್ ಬೆಂಗಳೂರ್!

ಇದು ಪ್ರತಿ ವಾರದ ಅಚ್ಚರಿ

ಸಂಪಾದಕರು ತನ್ನ ಈ ಬರಹದಲ್ಲಿ ಕನ್ನಡದ ಯಾವ ಲೇಖಕನ ಹೆಸರನ್ನೂ ಕಾಣಿಸದೆ ಇದ್ದರೂ, ಗಣಿಗಾರಿಕೆಯನ್ನು ವಿರೋಧಿಸುವವರು, ದತ್ತಪೀಠದ ಬಗ್ಗೆ ಹೇಳಿಕೆ ಕೊಡುವವರು ಎಂದು ಮುಂತಾದ 'ನಾಮವಿಶೇಷಣ'ಗಳನ್ನು ಬಳಸಿರುವುದರ ಜೊತೆಗೆ ದೇವನೂರು ಮಹದೇವ ಅವರ ಫೋಟೋ ಕೂಡ ಹಾಕಿರುವುದರಿಂದ ಅವರು ಯಾರ ಯಾರ ಬಗ್ಗೆ ಹೇಳುತ್ತಿದ್ದಾರೆ ಎಂದು ಊಹಿಸಬಹುದು ಅಥವಾ ಓದುಗರ ಊಹೆಗೆ ಏನನ್ನೂ ಉಳಿಸಿಲ್ಲ ಎಂದೂ ಹೇಳಬಹುದು. ಬೆಂಗಳೂರು ಮತ್ತು ಅಹ್ಮದಾಬಾದ್‌ಗಳಲ್ಲಿ ಬಾಂಬ್ ಸ್ಫೋಟ ನಡೆಸಿದವರು ಯಾರು ಎಂಬ ಬಗ್ಗೆಯೂ ಸಂಪಾದಕರು ನಮ್ಮ ಊಹೆಗೆ ಏನೂ ಬಿಟ್ಟಿಲ್ಲ. ಈ ಭಯೋತ್ಪಾದಕರ ಹೆಸರು ಇತ್ಯಾದಿಗಳನ್ನು ಅವರು ತಮ್ಮ ಸಂಪಾದಕೀಯದಲ್ಲಿ ಕಾಣಿಸದೆ ಇದ್ದರೂ ಅವರು ಮುಸ್ಲಿಮರು ಎಂಬುದನ್ನು ಸೂಚ್ಯವಾಗಿ ಆದರೆ ಸ್ಪಷ್ಟವಾಗಿ (ಪತ್ರಿಕಾ ಬರವಣಿಗೆಯಲ್ಲಿ ಮಾತ್ರ ಇದು ಸಾಧ್ಯ) ತಿಳಿಸಿದ್ದಾರೆ. ಅವರ ಈ ಗ್ರಹಿಕೆ ನೂರಕ್ಕೆ 99 ಪಾಲು ಸತ್ಯವೇ ಇದ್ದೀತು. ಆದಾಗ್ಯೂ ಕನ್ನಡದ ಲೇಖಕರ ವಿರುದ್ಧ ಅವರು ಮಾಡಿರುವ ಆಪಾದನೆ, ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ.



1. ಭಯೋತ್ಪಾದಕರೆಲ್ಲರೂ ಮುಸ್ಲಿಮರಾಗಿದ್ದರೂ, ಮುಸ್ಲಿಮರೆಲ್ಲರೂ ಭಯೋತ್ಪಾದಕರಲ್ಲ; ಭಯೋತ್ಪಾದನೆಯನ್ನು ಬೆಂಬಲಿಸುವವರೂ ಅಲ್ಲ. ಹಾಗಾಗಿ ಬುದ್ಧಿಜೀವಿಗಳೇ ಆಗಲಿ ಸಾಮಾನ್ಯ ಪ್ರಜೆಗಳೆ ಆಗಲಿ "ಭಯೋತ್ಪಾದನೆಯನ್ನು ಪ್ರತಿಭಟಿಸುವುದು" ಎಂದರೆ ನಿರ್ದಿಷ್ಟವಾಗಿ ಏನು ಅರ್ಥ?
2. ಭಯೋತ್ಪಾದಕರ ಹೆಸರು ವಿಳಾಸಗಳು ನಿಖರವಾಗಿ ಗೊತ್ತಾಗುವವರೆಗೆ ಅವರ ಇಡೀ ಸಮುದಾಯವನ್ನೇ ಸಂಶಯ ದೃಷ್ಟಿಯಿಂದ ನೋಡುವುದು ಭಯೋತ್ಪಾದನೆಯ ವಿರುದ್ಧ ಪ್ರತಿಭಟನೆ ಎನ್ನಿಸಿಕೊಳ್ಳಬಹುದೋ?
3. ಭಯೋತ್ಪಾದನೆಯ ದುಷ್ಕೃತ್ಯಗಳನ್ನು ಪಾಕಿಸ್ತಾನ ಅಥವಾ ಬಾಂಗ್ಲಾದೇಶದ ಪ್ರಜೆಗಳೇ ನೇರವಾಗಿ ನಡೆಸಿದ್ದ ಪಕ್ಷದಲ್ಲಿ ಅಥವಾ ಆ ಪ್ರಜೆಗಳು ಸ್ಥಳೀಯ ಮುಸ್ಲಿಮರ ನೆರವಿನೊಂದಿಗೆ ನಡೆಸಿದ್ದಲ್ಲಿ ಅಥವಾ ಪೂರ್ತಿಯಾಗಿ ಸ್ಥಳೀಯ ಮುಸ್ಲಿಮ್ ಪ್ರಜೆಗಳೇ ನಡೆಸಿದ್ದಲ್ಲಿ-ಈ ಮೂರು ಆಪಾದನೆಗಳೂ ಕೇಳಿ ಬರುತ್ತಿವೆ. ಬುದ್ಧಿಜೀವಿಗಳು ಯಾರ ವಿರುದ್ಧ ಪ್ರತಿಭಟಿಸ ಬೇಕು?

ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾದವರನ್ನು ಸರ್ಕಾರ ಪತ್ತೆಹಚ್ಚಿ ಶಿಕ್ಷಿಸಿದಾಗ ಕನ್ನಡದ ಯಾವ "ಮುಸ್ಲಿಮ್ ಪರ" ಬುದ್ಧಿಜೀವಿಯೂ ಅದನ್ನು ವಿರೋಧಿಸಿಲ್ಲ. ಕೊಯಮತ್ತೂರು ಮತ್ತು ಮುಂಬಯಿ ಬಾಂಬ್ ಸ್ಫೋಟದ ಅಪರಾಧಿಗಳಿಗೆ (ಎಲ್ಲರೂ ಮುಸ್ಲಿಮರು) ಶಿಕ್ಷೆ ಆದಾಗ ಬುದ್ಧಿಜೀವಿಗಳು ಬಿಡಿ, ಭಾರತದ ಮುಸ್ಲಿಮರೇ ಅದನ್ನು ಪ್ರತಿಭಟಿಸಲಿಲ್ಲ.

> 'ಹಾಯ್ ಬೆಂಗಳೂರ್' ಜರಿಯುವ ಕನ್ನಡದ "ಬುದ್ಧಿಜೀವಿಗಳು" ಮತ್ತು ಕೋಮು ಸೌಹಾರ್ದ ವೇದಿಕೆಯಂತಹ ಸಂಘಟನೆಗಳು, ಗಣಿಗಾರಿಕೆಯನ್ನೇ ವಿರೋಧಿಸಲಿ ಅಥವಾ ಬಾಬಬುಡನ್ ಗಿರಿಯಲ್ಲಿ ಸಂಘ ಪರಿವಾರದ ಹಸ್ತಕ್ಷೇಪವನ್ನೇ ಪ್ರಶ್ನಿಸಲಿ ಅಥವಾ ಆದಿ ಉಡುಪಿ ಬೆತ್ತಲೆ ಪ್ರಕರಣವನ್ನೇ ಪ್ರತಿಭಟಿಸಲಿ, ನಾವೆಲ್ಲರೂ ಎತ್ತಿ ಹಿಡಿಯುತ್ತಿರುವುದು ಕಾನೂನಿನ ಆಳ್ವಿಕೆ ಮತ್ತು ಕಾನೂನಿನ ಎದುರು ಎಲ್ಲರೂ ಸಮಾನರು ಎಂಬ ಮೌಲ್ಯವನ್ನು.

ಆದರೆ 1992-93 ರ ಮುಂಬಯಿ ಗಲಭೆಗಳು ಹಾಗೂ ಗುಜರಾತ್ 2002 ರ ಹಿಂಸಾಕಾಂಡದ ಅಪರಾಧಿಗಳಿಗೆ ಯಾಕೆ ಇನ್ನೂ ಶಿಕ್ಷೆ ಆಗಿಲ್ಲ? ಮುಂಬಯಿ ಗಲಭೆ ಕುರಿತ ಶ್ರೀಕೃಷ್ಣ ಆಯೋಗದ ವರದಿ ಅಪರಾಧಿಗಳು ಎಂದು ಹೆಸರಿಸಿರುವ ಬಿಜೆಪಿ/ಶಿವಸೇನೆಯ ರಾಜಕಾರಣಿಗಳು ಮತ್ತು ಪೊಲೀಸ್ ಅಧಿಕಾರಿಗಳಲ್ಲಿ ಇದುವರೆಗೆ ಮಧುಕರ್ ಸರ್‌ಪೋತ್‌ದಾರ್ ಎಂಬ ಶಿವಸೇನೆಯ ಮಾಜಿ ಸಂಸತ್ ಸದಸ್ಯರೊಬ್ಬರಿಗೆ ಮಾತ್ರ ಮುಂಬಯಿ ಹೈಕೋರ್ಟ್ ಶಿಕ್ಷೆ ನೀಡಿದೆ. ಅದು ಕೂಡಾ ಸಾಂಕೇತಿಕವಾಗಿ! ಇದು ಯಾಕೆ ಹೇಗೆ?

ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬ ಸಂವಿಧಾನದ ತತ್ವ ಯಾಕೆ ಮುಸ್ಲಿಮರಿಗೆ ಮತ್ತು ಅಂತಹ ಇತರ ಅಂಚಿನಲ್ಲಿರುವ ಸಮುದಾಯಗಳಿಗೆ ಅನ್ವಯವಾಗುವುದಿಲ್ಲ? ಹೀಗೆ ಪ್ರಶ್ನಿಸುವುದು ಕೂಡ ಭಯೋತ್ಪಾದನೆಗೆ ಪ್ರೋತ್ಸಾಹವೋ? 'ಹಾಯ್ ಬೆಂಗಳೂರ್' ಜರಿಯುವ ಕನ್ನಡದ "ಬುದ್ಧಿಜೀವಿಗಳು" ಮತ್ತು ಕೋಮು ಸೌಹಾರ್ದ ವೇದಿಕೆಯಂತಹ ಸಂಘಟನೆಗಳು, ಗಣಿಗಾರಿಕೆಯನ್ನೇ ವಿರೋಧಿಸಲಿ ಅಥವಾ ಬಾಬಬುಡನ್ ಗಿರಿಯಲ್ಲಿ ಸಂಘ ಪರಿವಾರದ ಹಸ್ತಕ್ಷೇಪವನ್ನೇ ಪ್ರಶ್ನಿಸಲಿ ಅಥವಾ ಆದಿ ಉಡುಪಿ ಬೆತ್ತಲೆ ಪ್ರಕರಣವನ್ನೇ ಪ್ರತಿಭಟಿಸಲಿ, ನಾವೆಲ್ಲರೂ ಎತ್ತಿ ಹಿಡಿಯುತ್ತಿರುವುದು ಕಾನೂನಿನ ಆಳ್ವಿಕೆ ಮತ್ತು ಕಾನೂನಿನ ಎದುರು ಎಲ್ಲರೂ ಸಮಾನರು ಎಂಬ ಮೌಲ್ಯವನ್ನು.

ಈ ನಿಲುವನ್ನು ಪ್ರತಿಪಾದಿಸಲು ಪ್ರತಿಸಲವೂ "ನಾವು ಭಯೋತ್ಪಾದನೆಯನ್ನು ವಿರೋಧಿಸುತ್ತೇವೆ" ಎಂಬ ಪದಾ ಸೇರಿಸಬೇಕಾ? ನಮ್ಮ ಊರುಗಳಲ್ಲಿ, ನಮ್ಮ ಹಾಗೆಯೇ ಸಂಸಾರವಂದಿಗರಾಗಿ ಬಾಳುವೆ ನಡೆಸುವ ಮುಸಲ್ಮಾನರ ವಿರುದ್ಧ ನಮ್ಮ ಕಣ್ಣೆದುರೇ ಎಂತಹ ಹಿಂಸೆ ನಡೆದರೂ "ಚಲ್ತಾ ಹೈ" ಎಂಬ ಧೋರಣೆ, ಆದರೆ ಕಾಣದ, ವಿಳಾಸವೂ ಪತ್ತೆಯಾಗದ ಭಯೋತ್ಪಾದಕರ ವಿರುದ್ಧ ಆಕ್ರೋಶ-ಇದು ಜನಮರುಳು ಪತ್ರಿಕೋದ್ಯಮದಲ್ಲಿ ಗೆಲ್ಲಬಹುದು; ಆದರೆ ಎಂದಿಗೂ ಭಯೋತ್ಪಾದನೆ ಮತ್ತು ಹಿಂಸೆಗಳ ವಿರುದ್ಧದ ದನಿ ಆಗಲಾರದು.

■ ಜಿ. ರಾಜಶೇಖರ

ವಚನ ತಿದ್ದಕ್ಕೆ ಅದೇನು ಕುಯೆಂಪು ಕವನನೆ!

ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ಈ ಎಡೂರಪ್ಪಾಕಿಂಗಾದಾ?" ಎಂದ ಉಗ್ರಿ.

"ಅವುನೇನಾಗಿದ್ದನ್ಲ? ಮುಖ್ಯಮಂತ್ರಿಯಾಗಿ ರಾಜ್ಯ ಆಳತ ಇಲವೆ?"

"ಆಳಕ್ಕು ಬತ್ತಾಯಿಲವಲ್ಲ ಮಾವ? ಸರಕಾರಿ ಕ್ಯಲಸ ಮಾಡೋ ಜನ ಸರಿಯಾಗಿ ಕ್ಯಲಸ ಮಾಡಲಿಲ್ಲ ಅಂದ್ರೆ ರಜ ಹಾಕಿ ಮನಿಗೋಗಿ ಅಂದವುನೆ."

"ಜಗಮಂಡ್ರ ಕೈಲಿ ಏಗಕ್ಯಾಗದೆ ಅಂಗಂದಿರಬೌದು."

"ಸರಿ, ರಜ ಹಾಕಿ ಮನಿಗೋಯ್ತರೆ ಅನ್ನು, ಅವುರು ರಜಕೇಳಕ್ಕೆ ಅಂತ ಬಂದಾಗ ಮೇಲಧಿಕಾರಿ ರಜ ಕೊಡಕ್ಯಾಗದಿಲ್ಲ ಅನ್ನಂಗಿಲ್ಲ, ಮುಖ್ಯಮಂತ್ರಿನೆ ರಜಹಾಕಿ ಅಂದಮ್ಯಾಲೆ ನಿಂದೇನಯ್ಯ ಕೊಸರು ಅಂತರೆ. ಆಗ ಮುಚಗಂಡು ರಜಕೊಡ್ತೇಬೇಕು. ರಜತಗಂಡಾಸಾಮಿ, ಲಂಚದ ದುಡ್ನ ಜೋಡಿಸಿಗಂಡು ಯಂಗಿದ್ರು ಮಳಿಗಾಲ, ಹೆಡತಿ ಮಕ್ಕಳ ಜ್ವತೆ ಪ್ರವಾಸ ಹೋಗಿ ಬತ್ತನೆ. ಅಲ್ಲಿಗೆ ಏನಾಯ್ತೇಳು?" ಎಂದು ಉಗ್ರಿ ಕಾಳ ಮಾವನನ್ನು ದುರುಗುಟ್ಟದ. ತುಸು ಯೋಚಿಸಿದ. ಕಾಳಮಾವ ಗಂಭೀರವಾಗಿ,

"ಮಾತ ಸರಿಯಾಗಾಡಬೇಕು" ಎಂದ.

"ಅದಾಳಬಿದ್ದೋಗ್ಲಿ, ಪಾಪ ಅವುನು ಹುಟ್ಟಾಣಕೆನೆ ಅಂಗೆ ಹಿಂದೆಮುಂದೆ ನೋಡದೆ ಮಾತಾಡಿಬುಡ್ತನೆ. ಅವತ್ತು ವಳ್ಳೆ ರೇಷ್ಮೆ ಸೀರೆಯ ಬೆಂಕಿಗಾಕಿದನಲ್ಲ ಹೇಳು."

"ರೇಸಮೆ ಸೀರೆ ಬೆಂಕಿಲಿ ಸುಟ್ನೆ?"

"ಊ ಕಣ ಮಾವ. ನಾನೆ ನನ್ನ ಕಣ್ಣಾರ ನೋಡಿದೆ."

"ಅವುನೆಡ್ತಿದೇನೊ. ಯಾರು ಉಡದುಬ್ಯಾಡ ಅಂತ ಬೆಂಕಿ ವಳಿಕಾಕಿರಬೌದು" ಎಂದ ಸೀರ.

"ಥೂ, ಅವುನೆಡ್ತಿದು ಅಲ್ಲ ಯಾರದೂ ಅಲ್ಲ, ವನ್ನಂತ ವಸ ಸೀರೆ ಕಣಮಾವ, ಅಂಗೆ ಮಿಂಚದು."

"ನನಿಕೊಟ್ಟದ್ರೆ ನಾನಾರ ಉಟಗತಿದ್ದೆ" ಎಂದು ಜುಮ್ಮಿ ನಕ್ಕಳು.

"ನಿನಿಕ್ವೊಡಕ್ಕೆ ನೀನೇನು ಸೋಬಕ್ಕನೇನೆ? ಸೀರೆ ಸುಡುವಾಗ ಅವುಳು ಜ್ವತೆಲೆ ಇದ್ಲು."

"ಕೆಲವುರು ಅಂಗೆಮಾಡಿಬುಡ್ತರೆ ಕಂಧ್ಯ. ನನ್ನೆಡ್ತಿ ಸೀರೆಯ ಇನ್ನಾರು ಉಡುಬಾರ್ದು, ಉಟ್ಟಗಂಡಿರದ ನೋಡಿದ್ರೆ ಅವುಳ ನೆನಪು ಬತ್ತದೆ ಅಂತ ಸುಟ್ಟಾಕ್ತರೆ. ಅಂಗೆ ಎಡತಿಸತ್ತ ಎಡೂರಪ್ಪ ಸೀರೆ ಸುಟ್ಟಿರಬೇಕು ಬುಡ್ರ ಹೋಗ್ಲತ್ತಗೆ" ಎಂದ ಸೀರ.

"ಥೂ, ನಿಮಿಗ್ಯಾರೇಳ್ತರೆ ಹೋಗ್ರೊ ಅತ್ತಗೆ. ಎಡೂರಪ್ಪ ಕೊಲ್ಲೂರು ದೇವಸ್ಥಾನಕ್ವೋಗಿ ಯಜ್ಞ ಮಾಡಿಸಿ, ಅಲ್ಲಿ ಬೆಂಕಿವಳಿಕೆ ಸೀರೆ ಹಾಕಿದ. ಬೆಂಕಿ ವಗೆ ಹಾಕಿ ಯಜ್ಞ ಮಾಡದಿದ್ರೆ ಮಾಡಿಕಳ್ಳಿ, ಅದರ್ವಳಿಕೆ ಸೀರೆ ಹಾಕದೇನೊ ಮಾವ? ಕನಿಷ್ಠ ಐದಾರು ಸಾವುರ್ರು ಪಾಯಿನ ಸೀರೆ ಅದು. ಸರ್ಕಾರದ ದುಡ್ಡಲವೆ?"

"ದುಡ್ಡಿನ ಮಾತಂಗಿರ್ಲಿ, ಸೀರೆ ಸುಟ್ರೆ ಸಿಕ್ಕತೇನ್ಲ?" ಎಂದಳು ಜುಮ್ಮಿ.

"ಯೆಡೂರಪ್ಪೇನು ವಸದಾಗಿ ಮಾಡಿಲ್ಲ ಬುಡ್ರ. ದ್ಯಾವೇಗೌಡನ ಮಗ ಕುಮಾರಸ್ವಾಮಿನು ಮಾಡಲಿಲ್ವೆ? ಅವುರಪ್ಪ ಮಾಡಲಿಲ್ವೆ? ಬುಡು, ಏನೋ ಆಗಬಾರದ್ದಾಯ್ತಿತ್ತೇನೊ, 'ಮಾಡಬಾರ್ದ ಮಾಡ್ಯವುರೆ" ಎಂದ ಸೀರ.

"ಅಲ್ಲಾ, ಎಡೂರಪ್ಪ ಲಿಂಗಾಯಿತ್ರೋನಾಗಿ ಬ್ಯಾಂಬ್ರು ಮಾಡೊ ಯಜ್ಞ ಮಾಡುಸ್ತನಲ್ಲ, ಇದಕೇನೇಳನಾ?" ಎಂದ ಉಗ್ರಿ.

"ಯಜ್ಞ ಯಾಗ ಯಲ್ಲಾ ಸುರುಮಾಡಿಕಂಡವುರೆ ಕಂಧ್ಯ ಈಗ. ಸತ್ತನಾರಾಯಣನ ಪೂಜೆಯ ನಮ್ಮೋರೆಲ್ಲಿ ಮಾಡ್ತಿದ್ರೂ? ಬರೀ ಬ್ಯಾಂಬ್ರೆ ಅಲವೆ ಮಾಡತ್ತಿದ್ದೊರು? ಈಗ ನಮ್ಮ ಜಾತಿ ಆಪಿಸಿಯಲ್ಲಗಳೂ ಮಾಡ್ತರೆ, ಇದಕೇನೇಳ್ತೀ?"


"ಏನು ಹೇಳಂಗಿಲ್ಲ, ಹೋಗಿ ಉಂಡು ಬತ್ತಾಯಿರದೆ" ಎಂದ ಉಗ್ರಿ.

"ಉಣ್ಣಕ್ಕೆ ಏನೋ ಒಂದು ಮಾಡಿಕತ್ತರೆ ಬುಡಿರ್ಲ ಅತ್ತಗೆ. ಉಪ್ಪು ಸಪ್ಪೆ ಇಲ್ಲದ ಮಾತ ಆದೇನಾಡ್ತಿರಿ" ಎಂದು ಕಾಳಮಾವ ಹೇಳುವಾಗ ಹಠಾತ್ತನೆ ಬಂದ ವಾಟಿಸ್ಸೆ,

"ಲೇ ಚಿಕ್ಕಣ್ಣ ಏನಯ್ಯ ಇದು ನಿಮ್ಮ ಜನಾಂಗದ ಸ್ವಾಮಿ ಹೋಗಿ ಎಡೂರಪ್ಪನಿಗೆ ಸನ್ಮಾನ ಮಾಡ್ಯವುನಲ್ಲ? ಇಟೀಸ್ ಸೇಂ ಟು ಯುವರ್ ಕಮ್ಯುನಿಟಿ ಕಣೊ" ಎಂದ.

"ಮಾಡಿದ್ರೇನಾಯ್ತು ಬುಡೊ" ಎಂದ ಚಿಕ್ಕ.

"ರಿಯಲಿ ಇಟೀಸ್ ಸೇಂ. ಎಡೂರಪ್ಪ ಯಲ್ಲಾ ಸ್ವಾಮಿಗಳ ಮಠಕ್ಕೂ ಹೋಗಿ, ಕಾಲಿಗೆ ಬಿದ್ದು ಇವುನೇ ಸನ್ಮಾನ ಮಾಡಿ ಬರುವಾಗ ನಿಮ್ಮ ಸ್ವಾಮಿ ತಾನೇ



ಹೋಗದೇನ್ಲೊ? ಯಂಥಾ ಪೂಲಿಷ್‌ಗಳೊ?"

"ಬರಕ್ಯಾಗದಿಲ್ಲ ಅಂದನೇನೊ, ಅದ್ಕೆ ಇವೇ ಹೋಗಿದ್ದವೇನೊ."

"ಅಂಗಲ್ಲ ಚಿಗಪ್ಪ, ರಾಜಕಾರಣಿ ಹುಡಿಕ್ಯಂಡು ಜಗದ್ಗುರು ಹೋದಾ ಅಂದ್ರೆ ಆವುನಿನ್ಯಂಥಾ ಜಗದ್ಗುರು ಅಂತ?" ಎಂದು ವಾಟಿಸ್ಸೆ ನಕ್ಕ.

"ಜಗದ್ಗುರಿ ಇರಬೇಕು ಕಣೊ" ಎಂದ ಉಗ್ರಿ.

"ರಿಯಲಿ ಜಗತ್ ಕುರಿನೆ ಅವುನು. ಜಗದ್ಗುರು ಪುಲ್ಲಿಂಗ ಅನ್ನದಾದ್ರೆ ಜಗದ್ಗುರಿ ಸ್ತ್ರೀಲಿಂಗ. ಈ ನಮ್ಮ ಜಗದ್ಗುರಿ ಮಾತೆಮಾದೇವಿ ಹೊಸ ಕೇಸ್ ಗೊತ್ತಾಯ್ತ? ಜಗದ್ಗುರಿ ಮ್ಯಾತೆ ಮಾದೇವಿ ಅಕ್ಕಮಾದೇವಿ ವಚನನೆ ತಿದ್ದಿಮಡಿಗಿದ್ದಳಂತೆ."

"ಸರಿಯಾಗಿರಲಿಲ್ಲವೇನೊ, ತಿದ್ಯವುಳೆ ಬುಡು" ಎಂದ ಸೀರ.

"ಚಿಗಪ್ಪ, ವಚನ ತಿದ್ದದು ಅಂದ್ರೇನು ಅಂತ ತಿಳಕಂಡೆ? ಕುವೆಂಪು ಕವನ ತಿದ್ದಿದಂಗಲ್ಲ"

"ಕುಯೆಂಪು ಕವನ ಯಾರು ತಿದ್ದಕ್ಯೋಗಿದ್ರೂ?" ಎಂದ ಉಗ್ರಿ.

"ಇದೇನೊ ಉಗ್ರಿ ಇಷ್ಟು ಜಲ್ದಿ ಮರತ ನೀನು? ಕುಯೆಂಪು ಕವನ ನಾಡಗೀತೆ ಮಾಡುವಾಗ ಅದರಲ್ಲಿ ಶಂಕರ, ರಾಮನುಜ, ವಿದ್ಯಾರಣ್ಯ, ಬಸವೇಶ್ವರರಿಹ ದಿವ್ಯಾರಣ್ಯ ಅಂತ ಇತ್ತು ಕೇಳಿದ್ಯಾ?"

"ಕೇಳದೇನು, ಮಿಡ್ಳಿಸ್ಕೂಲಲ್ಲಿ ಅದೇ ಅಲವೇನೊ ಪ್ರೇಯರ್ರು?"

"ಹೌದಲವೆ? ಇದೇ ವನ್ನಾವರದ ಸಂಪತ್ಕುಮಾರ ಚಾರ್ ರಾಗವಾಗಿ ಹೇಳಿಕೊಡೋರು. ಅಂತ ಪ್ರಾಸವಾಗಿದ್ದ ಸಾಲಿಗೆ ಮದ್ವಾಚಾರಿನೂ ಸೇರಿಸಿ ಅಂತ ಹಟ ಹಿಡಿದ."

"ಯಾರೂ?"

"ಯಾರಪ್ಪಾ ಅವುನೂ, ಕುಳ್ಳಗೆ, ತ್ಯಳ್ಳಗೆ, ಬಲರಾಮನ ಗೋವಿನತರ ಅವುನಲ್ವೊ, ಮರತೆಬುಟ್ಟೆ ನೋಡು."

"ಪೇಜಾವರ?"

"ನೋಡವ್ವುನು. ಕುವೆಂಪು ಕವನದ ವಳಿಕೆ ಮದ್ವಾಚಾರಿ ಹೆಸರ ಸೇರಿಸಿ ಅಂತ ಹಠ ಹಿಡಿದ. ಥೇಟ್ ನಿಮ್ಮವ್ವನಂಗಿದ್ದ ಎಸ್ಸೆಂ ಕೃಷ್ಣ ಸೇರಿಸೇಬುಟ್ಟ. ಈಗ ಕುವೆಂಪು ಕವನದ್ವಳಿಕೆ ಮದ್ವಚಾರಿ ಸೇರಿಕಂಡು ಅಸಂಬದ್ಧವಾಗ್ಯದೆ."

"ಸರಿಯಾಗೇ ಅದಲ್ವೊ?"

"ಎಲ್ಲಿ ಸರಿಯಾಗದೊ? ಶಂಕರ ಮಧ್ವರ ರಾಮಾನುಜ ಬಸವೇಶ್ವರ ಅಂದ್ರೆ ಸರಿಯಾಯ್ತದ ಹೇಳು? ಕುವೆಂಪು ತುಂಬ ಓದಿಕಂಡು ಯೋಚನೆಮಾಡಿ ಕೈಬಿಟ್ಟದ್ದ ಮದ್ವಾಚಾರಿನೆ ನೀವು ಸೇರಿಸಿರುವಾಗ ಇನ್ನು ಮಾತೆಮಾದೇವಿ ಬುಡ್ತಳ? ಅವುಳು ಸೇರಿಸಿದ್ಲತ್ತಗೆ."

ಸಂಕಟ ಬಂದಾಗ ಶಾನುಭೋಗ

ಅಣಕ

■ ಎಚ್.ಎಲ್. ಕೇಶವಮೂರ್ತಿ

'ದೇವರೇ ಬಂದರೂ ಈ ದೇಶವನ್ನು ರಕ್ಷಿಸಲಾರ'

ಇದನ್ನು ಹೇಳಿದ್ದು ಪಾಶ್ಚಾತ್ಯ ಕಿಡಿಗೇಡಿಗಳಲ್ಲ, ದೈವದ್ರೋಹಿಗಳೂ ಅಲ್ಲ, ಸಾಕ್ಷಾತ್ ಸುಪ್ರೀಂಕೋರ್ಟ್!

'ಬಾರಲೋ ರಂಗ' ಎಂಬುದಾಗಿ ಕಷ್ಟಕಾಲದಲ್ಲಿ ಕರೆಯುವಂತಿಲ್ಲ, ಸಂಕಟ ಬಂದಾಗ ವೆಂಕಟರಮಣನನ್ನು ನೆನೆಯುವಂತಿಲ್ಲ, ಅವನು ಪ್ರತ್ಯಕ್ಷ ಆದರೂ ಪರಿಹಾರ ಮಾತ್ರ ಸೊನ್ನೆ!


ಸಿಗಬಾರದೆ ನೊಂದ ಜೀವಿಗಳಿಗೆ ಕೊಂಚ ಸಮಾಧಾನ? ಹಾಗಾದರೆ ಕರೆಯುವುದು ಯಾರನ್ನ? ಯಾರಿಂದ ಸಿಗುವುದು ನೆಮ್ಮದಿ?

ಆಧುನಿಕ ಶಾನುಭೋಗರನ್ನ! ಅರ್ಥಾತ್ ಗುಮಾಸ್ತರನ್ನ!

ಹಿಂದಿನ ಕಾಲದ ಶಾನುಭೋಗರ ಗುಣ ಅವಗುಣಗಳೆಲ್ಲ ಮೈಗೂಡಿಸಿಕೊಂಡಿರುವವರು ಇವರು. ಇವರು ಹೇಳಿದ್ದೇ ವೇದ ವಾಕ್ಯ ಹಾಕಿದ್ದೇ ಲಕ್ಷ್ಮಣರೇಖೆ. ಆ ಗೆರೆಯನ್ನು ಮೀರಲು ಯಾವ ಆಡಳಿತಗಾರನೂ ಮುಂದೆ ಬರಲಾರ. ಪಕ್ಷ ಯಾವುದೇ ಆಡಳಿತ ನಡೆಸುತ್ತಿರಬಹುದು. ಹಿನ್ನೆಲೆ ಆಡಳಿತಗಾರರು ಮಾತ್ರ ಇವರೇ!

ಈ ಸರ್ವಕಾಲೀನ ಸತ್ಯ ಸುಪ್ರೀಂಕೋರ್ಟಿನ ಗಮನಕ್ಕೆ ಬಂದದ್ದು ಇತ್ತೀಚೆಗೆ.

ಕೆಲವು ಪ್ರಭಾವಿ ವ್ಯಕ್ತಿಗಳು ಅನಧಿಕೃತವಾಗಿ ಸರ್ಕಾರಿ ವಸತಿಗೃಹಗಳಲ್ಲಿದ್ದಾರೆ. ಅವರನ್ನು ತೆರವುಗೊಳಿಸಿ ಎಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಬಂದಿತು. "ಕೂಡಲೆ ತೆರವು ಗೊಳಿಸಿ" ಎಂದಿತು ನ್ಯಾಯಾಲಯ. 'ತೆರವುಗೊಳಿಸ್ತೀವಿ' ಎಂದಿತು ಸರ್ಕಾರ. ಅರ್ಜಿದಾರನಿಗೆ ತನ್ನ ಮನವಿಗೆ ಮನ್ನಣೆ ಸಿಕ್ಕಿತು ಎಂಬ ಹರ್ಷ. ನ್ಯಾಯಾಲಯಕ್ಕೆ ತಾನೇ ಸುಪ್ರೀಮ್ ಎಂಬ ಹೆಮ್ಮೆ. ನ್ಯಾಯಾಲಯದ ಆದೇಶ ಪರಿಪಾಲಕ ಸರ್ಕಾರ ಎಂಬ ಹೆಗ್ಗಳಿಕೆ ಸರ್ಕಾರಕ್ಕೆ.



ಕೂಡಲೆ ತೆರವುಗೊಳಿಸುವಂತೆ ನೋಟೀಸು ಜಾರಿ ಮಾಡಿ ಸರ್ಕಾರ ತನ್ನ ಬದ್ಧತೆ ತೋರಿಸಿತು. ಇದೆಲ್ಲ ಮಾಮೂಲಿ ಎಂದು ಭಾವಿಸಿದ ಅನಧಿಕೃತ ವಾಸಿಗಳು ಅದಕ್ಕೆ ಕಸದಬುಟ್ಟಿ ಕಾಣಿಸಿದರು. ವಸತಿಗೃಹಗಳು ತೆರವು ಆಗಲೇ ಇಲ್ಲ! ಸಾರ್ವಜನಿಕ ಹಿತರಕ್ಷಿಸುವವರು ಮತ್ತೆ ನ್ಯಾಯಾಲಯದ ಮೆಟ್ಟಿಲು ಹತ್ತಿದರು.

ನ್ಯಾಯಾಲಯದ ನಿಂದನೆ! ಅದು ಕೆರಳಿ ಕೇಳಿತು- 'ಯಾಕೆ ಇನ್ನೂ ತೆರವು ಗೊಳಿಸಿಲ್ಲ?'

ಸರ್ಕಾರ ತೆರವುಗೊಳಿಸಲು ನೋಟೀಸ್ ಜಾರಿ ಮಾಡಿದೆ. ಆದರೂ ಅವರು ತೆರವುಗೊಳಿಸಿಲ್ಲ. ಬಲವಂತವಾಗಿ ಹೊರಹಾಕಲು ಕಾನೂನುತೊಡಕು. ತನ್ನ ಅಸಹಾಯಕತೆಯನ್ನು ತೋಡಿಕೊಂಡಿತು ಸರ್ಕಾರ.

'ಕಾನೂನಿಗೆ ತಿದ್ದುಪಡಿ ತನ್ನಿ' ನ್ಯಾಯಾಲಯ.

'ತರುತ್ತೇವೆ' ಸರ್ಕಾರ.

ಮತ್ತೆ ಅದೇ ರಾಗ. ತಿದ್ದುಪಡಿ ತರಲಿಲ್ಲ, ಯಾಕೆ ತರಲಿಲ್ಲ ಅಂದರೆ 'ಈಗಿರುವ ಕಾನೂನಿನ ಅಡಿಯಲ್ಲೇ ತೆರವುಗೊಳಿಸಲು ಅವಕಾಶ ಇದೆ. ತಿದ್ದುಪಡಿಯ ಅವಶ್ಯಕತೆ ಇಲ್ಲ' ಎಂಬ ಗುಮಾಸ್ತನ ಶರಾ! ಇದನ್ನು ತಿಳಿದಾಗ ನ್ಯಾಯಾಧೀಶರ ಬಾಯಿಂದ ಹೊರಬಂದ ಉದ್ಗಾರ ಇದು.

ನಮ್ಮ ಘನ ಕರ್ನಾಟಕ ಸರ್ಕಾರ ಏನಾದರೂ ಮಾಡಿ ದೇವರನ್ನು ಒಲಿಸಿಕೊಂಡು ಆತನಿಂದಲೇ ಉತ್ತಮ ಆಡಳಿತ ನಡೆಸಲು ತೀರ್ಮಾನಿಸಿದಂತೆ ತೋರುತ್ತಿದೆ. ಆದುದರಿಂದಲೇ ಏನೋ ಆಡಳಿತ ಸೂತ್ರವನ್ನು ಹಿನ್ನೆಲೆ ಆಡಳಿತಗಾರರಿಗೆ ವಹಿಸಿ ಅವರು ತೀರ್ಥಯಾತ್ರೆ ಮಾಡುತ್ತಾ ದೇವರನ್ನು ಒಲಿಸಿಕೊಳ್ಳುವ ಯತ್ನದಲ್ಲಿರುವಂತಿದೆ!

ಬಜೆಟ್ ಮಂಡಿಸಿದ ತಕ್ಷಣವೇ ಯಡೂರಪ್ಪನವರು ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಹೋದರು. ಬೆಳಗಿನ ಜಾವ ಮೂರು ಗಂಟೆಯಿಂದ ಆರು ಗಂಟೆಯವರೆವಿಗೆ ದರ್ಶನ ಮಾಡಿ ರಾಜ್ಯದ ಜನತೆಗೆ ಶುಭವಾಗಲೆಂದು ಬೇಡಿಕೊಂಡರು. ನಂತರ ಬಂದಿತು ನೋಡಿ ಸೂರ್ಯಗ್ರಹಣ. ಕನ್ನಡದ ಸಕಲೆಂಟು ಟಿವಿ ಚಾನೆಲ್‌ಗಳೂ ಜನರ ಹಿತವನ್ನು ಗಮನಿಸಿ, ಈ ಗ್ರಹಣದಿಂದ ಆಗಬಹುದಾಗ ಅನಾಹುತಗಳನ್ನು ಸಾದ್ಯಂತವಾಗಿ ವಿವರಿಸಿದವು. ಮುಖ್ಯಮಂತ್ರಿಗಳ ಆಸ್ಥಾನ ಜೋಯಿಸರೂ ಇದನ್ನೇ ಬಿತ್ತರಿಸಬೇಕು. ಕರ್ನಾಟಕದ ಕಲ್ಯಾಣಕ್ಕಾಗಿ, ಗ್ರಹಣದೋಷದಿಂದ ಜನರನ್ನು ಮುಕ್ತಗೊಳಿಸುವ ಘನ ಉದ್ದೇಶದಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹಲವು ಸಹವರ್ತಿಗಳೊಡನೆ ಕೊಲ್ಲೂರಿನ ಮೂಕಾಂಬಿಕೆ, ಉಡುಪಿಯ ಶ್ರೀಕೃಷ್ಣ ಹಾಗೂ ಘಾಟಿ ಸುಬ್ರಹ್ಮಣ್ಯ ಅವರುಗಳಿಗೆ ಹೋಮ ಹವನ ನೆರವೇರಿಸಿದರು. ಸಂಭವಿಸಬಹುದಾದ ಭಯಂಕರ ಅನಾಹುತಗಳಿಂದ ರಾಜ್ಯವನ್ನು ಪಾರು ಮಾಡಿದರು!

ಒಳ್ಳೆಯ ಉದ್ದೇಶಗಳಿಗೆ ನೂರಾರು ಅಡಚಣೆಗಳು ಬರುವುದು ಸಾಮಾನ್ಯ ಸಂಗತಿಯೇ ಆಗಿದೆ. ಇದನ್ನು ಹೀಯಾಳಿಸುವವರ ಸಂಖ್ಯೆಗೇನೂ ಕಡಿಮೆ ಇಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ದೇವತಾ ಕಾರ್ಯಗಳನ್ನು ಸರ್ಕಾರಿ ವೆಚ್ಚದಲ್ಲಿ ಮಾಡುವುದು ಅಸಂವಿಧಾನಿಕ ಕ್ರಿಯೆ ಎನ್ನುವ ಪಾಷಂಡಿಗಳಿಗೂ ಕೊರತೆ ಇಲ್ಲ. ಹೀಗೆ ಕಾಲಹರಣ ಮಾಡುತ್ತಿರುವವರು ಮುಖ್ಯಮಂತ್ರಿ ಆಗಿರುವುದರ ಬದಲು ಯಾವುದಾದರೂ ಮಠದ ಸ್ವಾಮಿಗಳಾಗಿದ್ದರೆ ಮೇಲಾಗಿತ್ತು ಎನ್ನುವ ಧೂರ್ತರೂ ಇದ್ದಾರೆ. ಮುಖ್ಯಮಂತ್ರಿಗಳು ಹೋಮಹವನ ಮಾಡಿದ್ದು ಅವರ ಸ್ವಂತದ ಉದ್ಧಾರಕ್ಕೆ ಅಲ್ಲ! ರಾಜ್ಯದ ಜನರ ಕಲ್ಯಾಣಕ್ಕಾಗಿ! ಆದುದರಿಂದ ಜನರ ಹಣವನ್ನು ಇದಕ್ಕಾಗಿ ಬಳಸುವುದು ಅಪರಾಧ ಅಲ್ಲ!

ಬೇರೆಯವರ ಮಾತು ಒತ್ತಟ್ಟಿಗಿರಲಿ. ಮುರುಘಾಮಠದ ಶಿವಮೂರ್ತಿ ಶರಣರೂ ಗ್ರಹಣ ಎಂಬುದು ಪ್ರಕೃತಿ ಸಹಜವಾದುದು; ಇದರಿಂದ ಕೆಡುಕು ಉಂಟಾಗುತ್ತದೆ ಎಂದು ಭಾವಿಸುವುದು, ಅದರ ಪರಿಹಾರಾರ್ಥ ಹೋಮಹವನ ಮಾಡುವುದು ಅಜ್ಞಾನ

"ಅವುಳೇನು ಸೇರಿಸಿದ್ಳೊ?"

"ಅವುಳಿಗೆ ಲಿಂಗಾನಂದ ಅಂತ ದಬ್ಬ ಗುರು ಇದ್ನು, ಅವುನು ಬಹಳ ನಿದ ಮಯಖಾಗಿದ್ನ. ಅದರಲ್ಲೂ ಮ್ಯಾತೆ ಮಾದೇವಿ ಇದ್ದತಲಿದ್ರೆ ಭಾಳ ುಷಿಯಾಗಿರತಿದ್ನ. ಪರಗ್‌ಜಾಂಪಲ್ ಶೋಭಾ ಕರಂದ್ಲಾಜೆ ಎಡೂರಪ್ಪನ ತೆ ಇದ್ರೆ ಎಡೂರಪ್ಪ ಎಷ್ಟು ಪ್ರಸನ್ನನಾಗಿರತನೋ, ಅದೇ ರೀತಿ ಂಗಾನಂದನೂ ಇದ್ನ. ಅವುನು ಸತ್ತಮ್ಯಾಲೆ ಮಾತೆಮಾದೇವಿಗೆ ನೋವು ಡಿಯಕ್ಕಾಗಲಿಲ್ಲ. ಅದ್ಕೆ ಏನು ಮಾಡಿದ್ಲಪ್ಪ ಅಂದ್ರೆ......"

"ಗುಡಿ ಕಟ್ಟಿದ್ಲೇನ್ಲ?" ಎಂದಳು ದುಮ್ಮಿ.

"ತಡಿಯಕ್ಕ ಹೇಳಗಂಟ. ಯಾಕೊ ನೀನು ಇತ್ತೀಚೆಗೆ ಮ್ಯಾತೆ ಮಾದೇವಿತರನೆ ದ್ಯಿ."

"ನಾನೇನಾದಕ್ಕೋಗಿದ್ದೇ?"

"ಏನೂ ಆದಕ್ಕೋಗಿಲ್ಲ. ಸ್ವಲುಪ ಮಾತಲ್ಲಿ ಡೋಂಟ್‌ಕೇರ್ ತರ ಾತಾದ್ತಿ. ಮ್ಯಾತೆಮಾದೇವಿನೂ ಅಂಗೆ ಮಾತಾದ್ತಳೆ."

"ಮುಂದಕೇಳೊ ಅತ್ಲಗೆ" ಎಂದ ಉಗ್ರಿ.

"ಅದೇ ಕಣೊ, ಲಿಂಗಾನಂದರು ಲಿಂಗೈಕ್ಯರಾದ್ರು. ಆಗ ಈ ್ಯಾತೆಮಾದೇವಿ ಬಸವಣ್ಣನ ವಚನ ತಗಂಡು ಕಡೇ ಸಾಲಿಗೆ ಅವುನೆಸರು ರದ್ನ್ಲು ಬಸಾಕಿದ್ಲು."

"ಅದಳೆಕತೆ ಆಲವೇನೊ. ಅಂತ ಕ್ಯಲಸ ಮಾಡಿದ್ಕೆ ಕೋರ್ಟ್ಗೆ ಿಕ್ಕುಗಿತಲ್ಲೊ."

"ಮಕ್ಕುಗುದ್ರು ಸೀಟಗಂಡು ಈಗ ತಿರಗ ಅಕ್ಕಮಾದೇವಿ ವಚನನೆ ದ್ದಿಬುಟ್ಟವುಳಲ್ಲ ಹೇಳು."

"ಏನು ತಿದ್ವವುಳೆ?"

"ಅದೇ, ಹಳೆ ಗಿರಾಕಿ ಲಿಂಗದೇವನ ಹೆಸರ ಸೇರಿಸ್ಯವುಳೆ."

"ತಗ್ಗಳಪ್ಪ ಇದು ಒಂತರ ಚಾಪ್ಟೆಯಾ" ಎಂದ ಸೀರ.

"ಚಾಪ್ಟೆನೆ ಚಿಗಪ್ಪ. ಬೇಕಾದ್ರೆ ತಾನೆ ಬೇರೆ ವಚನ ಬರದು ಸೇರುಸ್ಬಿ ಲವೇನೊ ಉಗ್ರಿ?"

"ಊ ಅಂಗೂ ಮಾಡಬವುದಪ್ಪ, ಯಂಗಿದ್ರೂ ಅವುಳಿಗೆ ಬರಿಯೋ ಕ್ತಿ ಅದೆ. ಕತೆ ಕಾದಂಬರಿನೂ ಬರಿತಳೆ ಅಂದಮ್ಯಾಲೆ ವಚನನೂ ರಿಬವುದಲ್ಲಾ."

"ಏನು ಬರದಳೂ?"

"ಮನುಸು ಮಾಡಿದ್ರೆ ಅದೂ ಈಜಿ ಕಣೊ,

"ಎಲ್ಲಿ ಮರೆಯಾದೆ ಲಿಂಗದೇವ
ಓ ಹಳ್ಳ ಕೊಳ್ಳಗಳೆ,
ಬಾರೆ ಬುಗುಲುಗಳೆ
ಮೋಟು ಮರಗಳೆ ಗಣೆದೂಳ ಶಿಖರಗಳೆ
ಎನ್ನ ಲಿಂಗದೇವನನ್ನ ಕಾಣಿರ
ಮಾತೆ ಮಹಾದೇವಿ ಪ್ರಿಯನನ್ನು ಕಂಡಿರಾ.'

ಅಂತ ಬರಿಬವುದಪ್ಪ" ಎಂದು ವಾಟಿಸ್ದೆ ನಕ್ಕ.

"ಅವುಳು ಸಿಕ್ಕಿದ್ರೆ ಅಂಗಂತ ಹೇಳೊ" ಎಂದ ಉಗ್ರಿ. ■

ಬೌಧ್ಯದ ಪರಮಾವಧಿ ಎಂದು ಕರೆದಿರುವುದು ಶೋಚನೀಯ! ವೈಚಾರಿಕ ುನೋಭಾವ, ವೈಜ್ಞಾನಿಕ ಪ್ರವೃತ್ತಿ ಬೆಳೆಸಬೇಕಾದ ಕಾಲದಲ್ಲಿ ಒಂದು ಾಜ್ಯದ ಮುಖ್ಯಮಂತ್ರಿಯೇ ಹೀಗೆ ಮಾಡುತ್ತಿರುವುದು ಆತಂಕಕಾರಿ ೆಳವಣಿಗೆ ಎಂದು ಹೇಳಿರುವುದು ದುಃಖದಾಯಕವಾಗಿದೆ! ಒಬ್ಬ ುಠಾಧೀಶರು ಇಂತಹ ಆತಂಕಕಾರಿ ಹೇಳಿಕೆ ನೀಡಿದ್ದರೂ ಸಹ ಉಳಿದ ಲ್ಲ ಮಠಾಧೀಶರು ಗಣನೆಗೇ ತೆಗೆದುಕೊಳ್ಳದೆ ಇರುವುದನ್ನು ಗಮನಿಸಿದಾಗ, ುಖ್ಯಮಂತ್ರಿಗಳ ಹೋಮ, ಹವನ, ತೀರ್ಥಯಾತ್ರೆಗಳಿಗೆ ಬೆಂಬಲ ರುವುದು ಎಂದೇ ಭಾವಿಸಬಹುದಾಗಿದೆ!

ಆದರೂ ಶಿವಮೂರ್ತಿ ಶರಣರ ಅದ್ವೈವಿಕ ನಿಲುವು ಇತರೆ ಮಠಗಳಿಗೂ ಬ್ಬಬಹುದೆಂಬ ಆತಂಕ ಮೂಡುತ್ತಿದೆ. ಇದುವರೆವಿಗೂ ನಾಗರಪಂಚಮಿಯ ವಸ ನಾಗರಕಲ್ಲುಗಳಿಗೆ, ಹುತ್ತಗಳಿಗೆ ತಣಿ ಎರೆದು ಪೂಜಿಸುತ್ತಿದ್ದುದು ಂಪ್ರದಾಯ. ಆದರೆ ದಾವಣಗೆರೆಯ ವಿರಕ್ತಮಠದ ಸ್ವಾಮಿಗಳು ಇದನ್ನು ಡೆಯಲು ಮುಂದಾಗಿರುವುದು ಖಂಡನೀಯ! ಹುತ್ತಗಳಿಗೆ, ಕಲ್ಲು ಾಗರಗಳಿಗೆ ಹಾಲು ಎರೆಯಬೇಡಿ. ಅದೇ ಹಾಲನ್ನು ಬಡಮಕ್ಕಳಿಗೆ ೀಡಿ ಎಂದು ಬೋಧಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ! ಾರತೀಯ ಹಬ್ಬಗಳು ಅಂಧ ಶ್ರದ್ಧೆಯ ಕೂಪಗಳಾಗದೆ ವೈಚಾರಿಕತೆಯ ೇರುಪರ್ವತ ಆಗಲಿ ಎಂದು ಹೇಳಿರುವುದು ನಮ್ಮ ಸಂಸ್ಕೃತಿಯನ್ನೇ ಅವಹೇಳನ ಮಾಡಿದಂತಾಗಿದೆ!

ಒಂದೇ ಸಮಾಧಾನದ ಸಂಗತಿ ಎಂದರೆ ಇಂತಹ ಮಠಾಧಿಪತಿಗಳ ಾತು ಮನಸ್ಸಿನ ಆಳಕ್ಕೆ ಇಳಿಯದಂತೆ ಸುದ್ದಿ ಮಾಧ್ಯಮಗಳು ನಿರಂತರವಾಗಿ ಪ್ರಯತ್ನಿಸುತ್ತಾ ಯಶಸ್ಸಿನ ಹಾದಿ ಹಿಡಿದಿರುವುದು!

ನಾಗಪಂಚಮಿ!

ಸರ್ದಾರ್‌ಜಿ ದಂಪತಿಗಳು. ಪತಿಯ 'ದಂ'ಗೆ ಅವಕಾಶ ಕೊಡದ ಜಾಣೆ ಹೆಂಡತಿ.

ಒಂದು ಬೆಳಿಗ್ಗೆ, ಸರ್ದಾರ್‌ಜಿ ಎದ್ದು ಕುಳಿತಿದ್ದ. ಶುಚಿರ್ಭೂತೆಯಾಗಿದ್ದ ಹೆಂಡತಿ ಒನಪುವಯ್ಯಾರ ಮಾಡ್ತಾ ಸರ್ದಾರ್‌ಜಿ ಬಳಿಗೆ ಬಂದಳು. ಕೈನಲ್ಲಿ ಹಿಡಿದಿದ್ದ ಲೋಟ ಮುಂದೆ ಮಾಡಿದಳು. 'ಲೇವ್ನೋಜಿ' ಅಂದಳು. ಸರ್ದಾರ್‌ಜಿಗೆ ಆಶ್ಚರ್ಯ. ಎಂದೂ ಇಲ್ಲದವಳು ಇಂದು ನಗುನಗುತ್ತಾ ಇದ್ದಾಳೆ; ಕುಡಿಯಲು ಏನನ್ನೋ ನೀಡುತ್ತಾ ಇದ್ದಾಳೆ!

'ಏನೇ ಅದು?' ಕೇಳಿದ.

'ಹಾಲು.'

'ಅದೇನು ಇವತ್ತು ಯಾವತ್ತೂ ಇಲ್ಲದ್ದು?'

'ಇವತ್ತು ನಾಗಪಂಚಮಿ ಅಲ್ವ ಅದ್ಕೆ' ಅಂದಳು ಆಕೆ! ■

ರಾಜಲಕ್ಷ್ಮಿ ಎನ್.ರಾವ್

ಮರೆಯುವ ಮುನ್ನ



■ ಪಿ. ಲಂಕೇಶ್ -ನವೆಂಬರ್ 4, 1990

ರಾಜಲಕ್ಷ್ಮಿ ಎನ್. ರಾವ್ ಅವರನ್ನು ನಾನು ನೋಡಿಲ್ಲ. ಎತ್ತರಕ್ಕೆ, ನಸುಗಪ್ಪಾಗಿ, ತುಂಬ ಜೀವತುಂಬಿದ ಉಕ್ಕಿನ ದಿಟ್ಟತನದ ಹುಡುಗಿ ಎಂದು ನನ್ನ ಗೆಳೆಯರು ಹೇಳುತ್ತಾರೆ. ಈಕೆ ಮದುವೆಯಾದರು, ಮಗಳು ಪಡೆದರು-ಎಲ್ಲವನ್ನೂ ಬಿಟ್ಟು ಹೃಷಿಕೇಶಕ್ಕೆ ಹೊರಟುಹೋದರು. ಸನ್ಯಾಸಿನಿಯಾದರೆ? ಬರೀ ನಿರ್ಲಿಪ್ತರಾದರೆ?

ಇವೆಲ್ಲವಕ್ಕಿಂತ ಮುಖ್ಯ ಸಮಸ್ಯೆ: ರಾಜಲಕ್ಷ್ಮಿ ಅದೇಕೆ ಕತೆ ಬರೆಯುವುದನ್ನೇ ಬಿಟ್ಟುಬಿಟ್ಟರು? ನಿರ್ಲಿಪ್ತತೆಯಲ್ಲಿ, ಒಬ್ಬಂಟಿತನದಲ್ಲಿ ಕತೆ ಬರೆಯುವ ಸಂತೋಷ ಸಿಗುತ್ತದೆಯೆ? ಬರೆಯುವ ಬಗ್ಗೆ, ಬದುಕುವ ಬಗ್ಗೆ ತೀರಾ ವ್ಯಾಮೋಹಿಯಾದ ನನಗೆ ಕತೆ ಬರೆಯುವುದನ್ನು ಬಿಡಲಾಗುತ್ತಿಲ್ಲ; ಬರೆಯದಿದ್ದರೆ ನನ್ನಲ್ಲಿ ತಳಮಳ ಶುರುವಾಗುತ್ತದೆ. ಅಂದರೆ ನಿಜವಾದ ಅರ್ಥ, ಬದುಕದಿದ್ದರೆ ನನ್ನಲ್ಲಿ ಕಸಿವಿಸಿಯಾಗುತ್ತದೆ. ಬದುಕು, ಬರಹ ಎರಡೂ ಒಟ್ಟಿಗೇ ಹೋಗುತ್ತವೆ.

ನನ್ನ ಬಗ್ಗೆ ಒಂದು ಸಣ್ಣ ಗುಟ್ಟು ಬಿಟ್ಟುಕೊಡುತ್ತೇನೆ. ಟಿಪ್ಪಣಿ ಮಾಡಿಕೊಳ್ಳದೆ ನನಗೆ ಭಾಷಣ ಮಾಡುವುದಕ್ಕೇ ಆಗುವುದಿಲ್ಲ, ಹಾಗೆಯೇ ಟಿಪ್ಪಣಿ ಇಲ್ಲದೆ ಬರೆಯಲಾಗುವುದಿಲ್ಲ, ಬರೆಯುತ್ತ ಬರೆಯುತ್ತ ವಿಷಯ ಸ್ಪಷ್ಟವಾಗುತ್ತ ಹೋಗುತ್ತವೆ. ಚೆನ್ನಾಗಿ ಬರೆದಾಗ ಅರ್ಥಪೂರ್ಣವಾಗುತ್ತಾ ಹೋಗುತ್ತವೆ.

ರಾಜಲಕ್ಷ್ಮಿ ಬರೆಯದೇ ಇದ್ದದ್ದು ನಿಜಕ್ಕೂ ಆಶ್ಚರ್ಯಕರ.

*****

ರಾಜಲಕ್ಷ್ಮಿ ಎನ್. ರಾವ್; ಸುಮಾರು ಇಪ್ಪತ್ತೆರಡು ವರ್ಷದ ಹಿಂದೆ ಕತೆ ಬರೆಯುತ್ತಿದ್ದ ಹೆಣ್ಣುಮಗಳು. ನಾನು ಆಗತಾನೆ ಇಂಗ್ಲಿಷ್ ಆನರ್ಸ್ ಸೇರಿದ್ದೆ; ಅಷ್ಟರಲ್ಲಾಗಲೇ ಈ ರಾಜಲಕ್ಷ್ಮಿಯವರ 'ಸಂಗಮ' ಎಂಬ ಕಥಾಸಂಕಲನ ಹೊರಬಂದಿತ್ತು. ಈ ಸಂಕಲನದ ಹನ್ನೆರಡು ಕತೆಗಳಲ್ಲಿ ಎರಡೇ ಎರಡು ಚೆನ್ನಾಗಿವೆ. ಒಂದು 'ವೈಶಾಖ ಶುದ್ಧ ಪೂರ್ಣಿಮೆ', ಇನ್ನೊಂದು 'ಆವೇ ಮರೀಯ'. ಎರಡೂ ಪ್ರೇಮ ಕತೆಗಳು. ಈ ಕತೆಗಳು ಏಕೆ ಚೆನ್ನಾಗಿವೆ ಎಂದು ಕೇಳಿಕೊಳ್ಳುತ್ತಲೇ ಹಲವಾರು ವಿಷಯಗಳು ಹೊಳೆಯತೊಡಗಿದವು. 'ವೈಶಾಖ ಶುದ್ಧ ಪೂರ್ಣಿಮೆ'ಯಲ್ಲಿ ವಿಜಯಾ ಎಂಬ ಹುಡುಗಿ ಚಂದ್ರಶೇಖರ ಎಂಬ ಹುಡುಗನನ್ನು ಸಂಧಿಸಿ, ಅವನಲ್ಲಿ ಅನುರಕ್ತಳಾಗಿ, ಆತ ಕೂಡ ಅವಳಿಗೆ ಒಲಿದು... ಹೈದ್ರಾಬಾದಿಗೆ ಹೋಗುತ್ತಾನೆ. ಅಲ್ಲಿ ರಜಾಕಾರ್ ಗಲಾಟೆಯಲ್ಲಿ ಸಿಡಿದ ಗುಂಡು ಅಕಸ್ಮಾತ್ತಾಗಿ ಅವನಿಗೆ ತಾಗಿ ಸತ್ತುಹೋಗುತ್ತಾನೆ. ನಿರೀಕ್ಷಿಸಿದಂತೆ ವಿಜಯಾ ಖಿನ್ನಳಾಗಿ ಅತೀವ ನೋವನ್ನು ಅನುಭವಿಸುತ್ತಾಳೆ. ದಿನಗಳೆದಂತೆ ಅವನ ನೆನಪೇ ಅವಳನ್ನು ಪರಿವರ್ತಿಸಿ ಹೊಸ ಅನುಭವಕ್ಕೆ, ಹೊಸ ಸಂಬಂಧಕ್ಕೆ ಅಣಿಗೊಳಿಸುತ್ತದೆ, ಇದು ಕತೆ.

ಹುಡುಗ, ಹುಡುಗಿ, ಪ್ರೇಮ, ಸಾವು, ವಿರಾಮ.... ತೀರಾ ಸಾಮಾನ್ಯ ಘಟನೆ. ಆದರೆ ಈ ಕತೆ ಮಾಸದಿರಲು ಕಾರಣಗಳಿವೆ. ನಮ್ಮ ಕತೆ ಬರೆಯುವ ಹುಡುಗರು ಕತೆ ಯಾಕೆ ಹಳಸಿಲ್ಲ, ಮಾಸಿಲ್ಲ ಎಂದು ಕೇಳಿಕೊಂಡರೆ ಕತೆಯ ಗುಟ್ಟು ಹೊಳೆಯುತ್ತದೆ.

*****

ನನಗೆ ವಿಚಿತ್ರವಾಗಿ ಕಾಣುವ ಪ್ರಶ್ನೆ, ಈ ವಿಜಯಾ ತನ್ನ ಪ್ರಿಯಕರ ಚಂದ್ರಶೇಖರನಿಂದ ಆಗಲಿ ಮತ್ತೆ ಜೀವ ಪಡೆದು, ಬದುಕಿನ ಬಗ್ಗೆ ಹುಮ್ಮಸ್ಸು ಪಡೆದು ಹೊಸ ಸಂಬಂಧಕ್ಕಾಗಿ ಹಂಬಲಿಸುವುದು ವಾಸ್ತವಕ್ಕೆ ಎಷ್ಟು ಹತ್ತಿರ ಎಂಬುದು. ಹುಡುಗ ಹೋಗುತ್ತಾನೆ. ಹುಡುಗ ಬರುತ್ತಾನೆ ಎನ್ನುವಷ್ಟು ಸರಳವಾಗಿದ್ದರೆ ಇದೆಲ್ಲ ವ್ಯಭಿಚಾರಕ್ಕೆ ಹತ್ತಿರ ಬರುತ್ತದೆ. ಆದರೆ ಚಂದ್ರಶೇಖರನ ನೆನಪು ಮಾಸುತ್ತಿದ್ದರೂ ಆತನ ನೆನಪೇ ಅವಳನ್ನು ಹೊಸ ಅನುಭವಕ್ಕೆ ಕಾತರಿಸುವಂತೆ ಮಾಡುವುದು; ಸತ್ತವನು ಮರೆವು ಸೇರಿ ಇದ್ದ ಜೀವನ ನಮ್ಮನ್ನು ಆವರಿಸುವುದು. ಈ ಸರಳ ಸತ್ಯವನ್ನು ಅರಿಯದ ನಮ್ಮ ಅನೇಕ ಸಾಹಿತಿಗಳು ವಾಸ್ತವದಿಂದ ದೂರ ಉಳಿಯುತ್ತಾರೆ; ರಾಜಲಕ್ಷ್ಮಿಯವರ ಕತೆಯ ವೈಶಿಷ್ಟ್ಯ ಇಲ್ಲಿದೆ.

ಇದರಷ್ಟೇ ಮುಖ್ಯ ಪ್ರಶ್ನೆ ಕೃಷ್ಣ ಹೇಗೆ ಪ್ರೇಮಿ, ಕೀಚಕ ಹೇಗೆ ವ್ಯಭಿಚಾರಿ? ಕೃಷ್ಣನನ್ನು ದೇವರೆಂದು ಕರೆದು ಈ ಪ್ರಶ್ನೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ, ಆತ ನಿಜವಾದ ಮನುಷ್ಯನಾಗಿದ್ದರಿಂದಲೇ ದೇವರ ಶಕ್ತಿ ಪಡೆದು ಎಲ್ಲರ ವಿಶ್ವಾಸ ಪಡೆಯುತ್ತಾನೆ. ಕೃಷ್ಣ ಸಾವಿರಾರು ಜನರನ್ನು ಪ್ರೀತಿಸುವುದು, ಪ್ರೇಮಿಸುವುದು, ಕಾಮಿಸುವುದರಲ್ಲಿ ಸ್ವಾರ್ಥ, ನೀಚತನವಿಲ್ಲ; ಆತನ ಪ್ರೀತಿಗೆ ಚಿತ್ರವಿಚಿತ್ರ ಮಜಲುಗಳೇ ಇವೆ. ಕೃಷ್ಣನ ನೋಟದಿಂದ ಸಾರ್ಥಕ ಪ್ರೇಮ ಪಡೆದವರೂ, ಸ್ಪರ್ಶದಿಂದ ಇದನ್ನು ಪಡೆದವರೂ ಈತನ ಮಾನವೀಯತೆ ಮತ್ತು ಔದಾರ್ಯದಿಂದ, ಕೊಡುವ ಬಗೆಯಿಂದ ತೃಪ್ತರಾಗುತ್ತಾರೆ. ಸ್ವಾರ್ಥ, ಸಣ್ಣತನವಿದ್ದಲ್ಲಿ ಮಾತ್ರ ವ್ಯಭಿಚಾರದ ಗವಟು ಶುರುವಾಗುತ್ತದೆ; ಪ್ರೀತಿಗಾಗಿ ಹಂಬಲಿಸುವ ಜಗತ್ತಿನಲ್ಲಿ, ಕಾಮ ನಿಃಸ್ವಾರ್ಥ ಮಿಲನವಾಗಿ ಮಾರ್ಪಾಟಾಗುತ್ತದೆ. ಕೀಚಕನದು ದಾಹ; ಪ್ರೇಮಿಸಿದ ವ್ಯಕ್ತಿಗಿಂತಲೂ ತನ್ನನ್ನೇ ಪ್ರೀತಿಸಿಕೊಳ್ಳುವ ಸಣ್ಣತನ. ಇಲ್ಲಿ ಪ್ರೀತಿ ಎನ್ನುವುದು ಅಹಂಕಾರ. ಈ ಸಂಬಂಧದಲ್ಲಿ ಕ್ರೌರ್ಯ, ಪತನ, ವಿನಾಶಗಳೆಲ್ಲ ಇರುತ್ತವೆ.

ಇದೆಲ್ಲ ಸರ್ವವೇದ್ಯವಾದ್ದರಿಂದ... ಕೃಷ್ಣ ಪ್ರೇಮಿಯಾದರೆ ಅರ್ಜುನ ಕೂಡ ಪ್ರೇಮಿಯೇ ಎಂಬ ಪ್ರಶ್ನೆಯನ್ನು ಎತ್ತಿಕೊಳ್ಳಲು ಭಾಷಣಗಳಾಗಲಿ, ಚರ್ಚೆಯಾಗಲಿ ಸಾಕಾಗುವುದಿಲ್ಲ, ಕೃಷ್ಣನ ಪ್ರೇಮ, ಅರ್ಜುನನ ಚಂಚಲತೆಯನ್ನು ವರ್ಣಿಸಲು ಕತೆ ಅಥವಾ ಕಾವ್ಯದ ಹಂದರವೇ ಬೇಕಾಗುತ್ತದೆ. ಇದು ಕುತೂಹಲಕರ. ಕೃಷ್ಣನ ಪ್ರೇಮ, ಕೀಚಕನ ಕಾಮ, ಅರ್ಜುನನ ಚಂಚಲತೆ-ಇವೆಲ್ಲವನ್ನು ಮನುಷ್ಯ ಮಾತ್ರ ಗ್ರಹಿಸಿ ತಿಳಿದುಕೊಳ್ಳಬೇಕಾಗುತ್ತದೆ. ಅತ್ಯಂತ ಕೆಳಗಿನ ಸ್ತರದಲ್ಲಿ ಇದೆಲ್ಲ ಸಜ್ಜನಿಕೆ, ಅಭಿರುಚಿ, ಸ್ನೇಹ ಎಂಬ ಮಾತುಗಳಲ್ಲಿ ವಿವರಿತವಾಗುತ್ತವೆ. ನಿಜವಾಗಿಯೂ ಅಭಿರುಚಿಯುಳ್ಳ ವ್ಯಕ್ತಿ ಕೀಚಕನಂತೆ ವರ್ತಿಸಲಾರ, ಹಾಗೆಯೇ ತನ್ನ ವ್ಯಕ್ತಿತ್ವಕ್ಕೆ ಹೊಂದದ ಕೃಷ್ಣನ ಔದಾರ್ಯವನ್ನು ಅಭಿನಯಿಸಲಾರ.

ಈ ಸಂಬಂಧದಲ್ಲಿಯೇ ಮದಾಂ ಬಾವರಿ ಮತ್ತು ಅನ್ನ ಕರೇನಿನಾ, ಅಹಲ್ಯೆ ಮತ್ತು ದ್ರೌಪದಿಯರೆಲ್ಲ ನಮ್ಮ ಮನಸ್ಸು ಕೆಣಕತೊಡಗುತ್ತಾರೆ.

ಮರಳುಗಾಡು ಮತ್ತು ನಾನು

ಸುರಿವ ಬೆಂಕಿ ಕಾದ ಮರಳು
ಮಧ್ಯೆ ಸಾಗಿರುವ ಒಂಟೆ ನಾನು
ನನ್ನಲ್ಲಿಯ ಜೀವಜಲ ಹೀರಲು ಹೊಂಚುಹಾಕಿದ್ದಾರೆ
* * * *
ಅವರ ಮನವೆಂಬ ಮರಳುಗಾಡಲ್ಲಿ
ಅಲೆಯುತ್ತಿದ್ದೇನೆ ಅಂತಃಕರಣದ ಓಯಸಿಸ್‌ಗಳೂ
ಬತ್ತಿ ಹೋಗಿವೆ
* * * *
ದೂರ ನಕ್ಷತ್ರಗಳ ಜಾಡು ಹಿಡಿದು
ಹೊರಟಿರುವ ನನಗೆ
ಕಾಲಕೆಳಗಿನ ಕುಸಿವ ಮರಳಿನ ಭಯ
* * * *
ಕುಣಿವ ಬಿಸಿಲಿಗೆ ಕಾದ ಕಾವಲಿಯಾದ
ಮರಳು, ಹಾಲು ಹೊಳೆ ಹರಿಸಿ ತಂಪಾಗಿಸಿದೆ
ಬೆಳದಿಂಗಳ ಇರುಳು
* * * *
ಮರಳುಗಾಡಿನಲ್ಲಿ ಮೂಡಿದ ಹೆಜ್ಜೆ
ಗುರುತುಗಳು
ಬಿರುಗಾಳಿಗೆ ಅಳಿಸಿಹೋಗಿವೆ

■ ಡಾ.ಸಿ. ರವೀಂದ್ರನಾಥ್, ಮೈಸೂರು



‘ಸಂಬಂಧಪಟ್ಟವರ ಗಮನಕ್ಕೆ.....’

ಮೊನ್ನೆ ಶಿವಸುಂದರ್ ಹೇಳಿದ ಒಂದು ಪ್ರಸಂಗ ಬಹಳ ತಮಾಷೆಯಾಗಿತ್ತು. ಅವರು ವಿಜಯನಗರದಲ್ಲಿ ಹೋಗುತ್ತಿದ್ದಾಗ ಒಂದು ವಾಲ್‌ಪೋಸ್ಟರ್ ಕಾಣಿಸಿತಂತೆ ಅದರಲ್ಲಿ,

ಸಂಬಂಧಪಟ್ಟವರ ಗಮನಕ್ಕೆ


“ನಾನು ಒಂದು ಸಿನಿಮಾ ಕತೆ ಬರೆದಿದ್ದೇನೆ. ರಜನಿಕಾಂತ್, ದರ್ಶನ್ ಹಾಕಿಕೊಂಡು ಈ ಸಿನಿಮಾ ತೆಗೆದರೆ ಸಿಲ್ವರ್ ಜುಬಿಲಿ ಗ್ಯಾರಂಟಿ. ನನ್ನ ಷರತ್ತಿಗೆ ಒಪ್ಪುವುದಾದರೆ ಕೂಡಲೆ ಸಂಪರ್ಕಿಸಿ....ನನ್ನ ಸಿನಿಮಾ ಸೋತರೇ ನನ್ನನ್ನು ಈ ರಾಜ್ಯದಿಂದಲೇ ಗಡಿಪಾರು ಮಾಡಿ...” ಎಂಬಿತ್ಯಾದಿ ಸ್ಟೇಟ್‌ಮೆಂಟ್ ಇದ್ದ ಪೋಸ್ಟರ್ ಅದು. ಅದನ್ನು ನೋಡಿದ ಕೂಡಲೇ ಖ್ಯಾತ ನಿರ್ಮಾಪಕ-ನಿರ್ದೇಶಕರು ತನ್ನ ಅಡ್ರೆಸ್ ಹುಡುಕಿಕೊಂಡು ಓಡಿ ಬರುತ್ತಾರೆಂಬ ಕಲ್ಪನೆ ಆತನಿಗಿರುವಂತಿತ್ತು.

ಮೇಲ್ನೋಟಕ್ಕೆ ಇದರಲ್ಲಿ ಬಹಳ ತಮಾಷೆ ಕಾಣುತ್ತೆ ನಿಜ. ಆದರೆ ಸಿನಿಮಾ ವ್ಯಾಮೋಹಕ್ಕೆ ಬಿದ್ದಿರುವವರಂತೂ ಸೀರಿಯಸ್ಸಾಗೆ ಇಂಥ ಪ್ರಯತ್ನ ಮಾಡುತ್ತಿರುತ್ತಾರೆ. ಈಗ ಕೋಟಿಗಟ್ಟಲೆ ಬಂಡವಾಳ ಕೇಳುವ ಒಂದು ಸಿನಿಮಾಗೆ ಕತೆ-ಚಿತ್ರಕತೆ ಹೇಗೆ ರೆಡಿ ಮಾಡುತ್ತಾರೆ, ಡೈಲಾಗ್, ಸೀನ್‌ಗಳನ್ನು ಹೇಗೆ ಜೋಡಿಸುತ್ತಾರೆಂಬ ತಲೆಬುಡಗಳೇ ಸಿನಿಮಾ ಪ್ರಪಂಚದ ಹೊರಗಿರುವವರಿಗೆ ತಿಳಿದಿರುವುದಿಲ್ಲ. ಆದರೂ ಏನೇನೊ ಕಲ್ಪಿಸಿಕೊಂಡು ನಾಲ್ಕಾರು ಪುಟ ಕತೆ ಅಂತ ಬರೆದಿಟ್ಟುಕೊಂಡು ಗಾಂಧಿನಗರದಲ್ಲೋ ಅಥವಾ ನಿರ್ದೇಶಕರ ವಿಳಾಸ ಪತ್ತೆಹಚ್ಚಿ ಪ್ರಾಣ ತಿನ್ನುತ್ತಿರುತ್ತಾರೆ.

ಒಂದು ಸಾರಿ ಹೀಗಾಯಿತು...

ಥೇಟ್ ಉಪೇಂದ್ರ ಗೆಟಪ್‌ನಲ್ಲಿದ್ದ 20 ವರ್ಷದ ಹುಡುಗನೊಬ್ಬ ಸೀದಾ ಮೆಟ್ಟಿಲೇರಿ ನಮ್ಮ ಆಫೀಸಿನೊಳಗೆ ಬಂದು “ಕವಿತಾ ಮೇಡಂ ಇದ್ದಾರಾ?” ಅಂದ. ಅವನ ಕೈಯಲ್ಲಿ ಒಂದಷ್ಟು ಹಾಳೆಗಳಿದ್ದವು. ಅಷ್ಟರಿಂದಲೇ ಅಪಾಯ ಅರ್ಥಮಾಡಿಕೊಂಡ ನಾವುಗಳು ‘ಅವರು ಇವತ್ತು ಆಫೀಸ್‌ಗೆ ಬಂದಿಲ್ಲ’ ಅಂತ ಸುಳ್ಳು ಹೇಳಿ ಮ್ಯಾನೇಜರ್ ರಾಜು ಕಡೆ ಕಳಿಸಿದೆವು.

‘ಹೇಳಿ ಏನ್ ವಿಷಯ?’ ಅಂತ ರಾಜು ಕೇಳುತ್ತಿದ್ದಂತೆ ಆ ಉಪೇಂದ್ರಾವತಾರಿಗೆ ಅದೇನು ಅನುಮಾನವಾಯಿತೊ ಏನೊ, ತನ್ನ ಅಮೂಲ್ಯ ಕತೆಯನ್ನು ಹತ್ತಾರು ಜೇಬುಗಳಿದ್ದ ಪ್ಯಾಂಟಿನ ಒಂದು ಜೇಬಿಗೆ ತುರುಕಿಕೊಂಡ. ನಂತರ “ಮೇಡಂಗೇಳಿ ಸಾರ್, ಅವಾರ್ಡ್... ಅವಾರ್ಡ್ ಗ್ಯಾರಂಟಿ. ಅಂತ ಕತೆ ಬರ್‌ದಿದ್ದೀನಿ” ಅಂದ. ಅಷ್ಟರಲ್ಲಿ ಅವನ ಗೆಟಪ್ಪು, ಕ್ರಾಪು ನೋಡಿದ್ದ ನಮಗೆ ಈ ಮಾತು ಕೇಳಿದ ಮೇಲಂತೂ ಆತನ ಪೆದ್ದುತನದ ಮಟ್ಟ ಗೊತ್ತಾಗಿತ್ತು. ಕಷ್ಟಪಟ್ಟು ಅವನನ್ನು ಬೀಳ್ಕೊಡಲು ಯತ್ನಿಸುತ್ತಿದ್ದಾಗಲೇ ಆತ “ಇನ್ನೊಂದ್ಸಾರಿ ಯೋಚ್ನೆ ಮಾಡಿ ನೋಡಿ, ಮೇಡಂ ಗಮನಕ್ಕೆ ತನ್ನಿ’ ಎಂದೇನೇನೊ ಹೇಳುತ್ತಾ ಮೆಟ್ಟಿಲಿಳಿದು ಹೋದ.



ಇದೆಲ್ಲಕ್ಕಿಂತ ತಮಾಷೆ ನಡೆದದ್ದು ಮೊನ್ನಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ. ಅದೊಂದು ದಿನ ಪ್ರಜಾವಾಣಿ ತಿರುವಿ ಹಾಕುತ್ತಿದ್ದಾಗ ‘ಸಂಬಂಧಪಟ್ಟವರ ಗಮನಕ್ಕೆ’ ಅಂತ ಇನ್ನೊಂದು ಜಾಹೀರಾತು ಕಾಣಬೇಕೆ!

ಶ್ರೀನಿವಾಸು ಎಂಬ ಎಂಬಿಎ ಪದವೀಧರ “ರಾಜಕೀಯ ಪಕ್ಷಗಳೇ ನನ್ನ ಪ್ರತಿಭೆ ಗಮನಿಸಿ. ನನಗೆ ಟಿಕೆಟ್ ಕೊಟ್ಟು ಸಮಾಜ ಸೇವೆಗೆ ಅವಕಾಶ ಮಾಡಿಕೊಡಿ....” ಎಂದೆಲ್ಲಾ ಗೋಗರೆದಿದ್ದ.

ಈತನಿಗೆ ಯಾರೂ ಕರೆದು ಟಿಕೆಟ್ ಕೊಡಲಿಲ್ಲ ಅನ್ನೋದು ಬೇರೆ ವಿಷಯ. ಆದರೆ ಈ ಜಗತ್ತು ಹೇಗೆ ನಡೀತಿದೆ ಅನ್ನೋದೆ ಗೊತ್ತಿರದ ಈ ಮುಗ್ಧ-ಪೆದ್ದರು ಸಂಬಂಧಪಡದಿರುವವರ ಗಮನಕ್ಕೆ ಇಂತದ್ದನ್ನೆಲ್ಲಾ ಯಾಕೆ ತರುತ್ತಾರೊ ಏನೊ!

ಬಾಂಬು-ಬುದ್ಧಿಜೀವಿ

ಬೆಂಗಳೂರಿನಲ್ಲಿ ಸರಣಿ ಬಾಂಬ್ ಸ್ಫೋಟ ನಡೆದ ಮೇಲೆ ಕರ್ನಾಟಕದ ಬುದ್ಧಿಜೀವಿಗಳು ಮುಸ್ಲಿಮರನ್ನು ಯಾಕೆ ಖಂಡಿಸಲಿಲ್ಲ ಅಂತ ಒಂದು ಕ್ವೆಶ್ಚನ್ ಮಾರ್ಕ್ ಕೇಳಿಬಂದಿದೆ.

ಸರಿ ಕಣಯ್ಯ.... ಬಾಂಬ್ ಸ್ಫೋಟ, ಹಿಂಸೆ ಖಂಡಿಸೋಣ ಆದರೆ ಅದನ್ನು ಮುಸ್ಲಿಮರೇ ಮಾಡಿದ್ದಾರೆನ್ನಲು ಸಾಕ್ಷಿ ಎಲ್ಲಿದೆ, ಭಜರಂಗಿಗಳೇ ಆ ಕೆಲಸ ಮಾಡಿರಲಿಕ್ಕೂ ಸಾಕಲ್ಲವೇ ಅಂತ ಇನ್ನೊಂದು ರಿಮಾರ್ಕೂ ಇದೆ.

ಅದಿರಲಿ... ಹೀಗೆ ಪ್ರಶ್ನೆ ಕೇಳುವವರ ಹಿಂದಿನ ಯಜಮಾನಿಕೆಯ, ದರ್ಪದ ಧೋರಣೆಯ ಬಗ್ಗೆ ಯೋಚಿಸಿ ನೋಡಿ.

ಎಲ್ಲಿ ಏನೋ ಅನಾಹುತವೊ, ಹಿಂಸೆಯೋ ಸಂಭವಿಸಲಿ... ಆಗೆಲ್ಲಾ ನಮ್ಮ ಪ್ರಗತಿಪರರು, ಬುದ್ಧಿಜೀವಿಗಳು ಮಾತ್ರ ಪ್ರತಿಕ್ರಿಯಿಸಲೇಬೇಕು. ಪದೇಪದೇ ತಮ್ಮ ದೇಶಪ್ರೇಮ ಸಾಬೀತುಪಡಿಸುತ್ತಲೇ ಇರಬೇಕು. ಒಂದು ವೇಳೆ ತಮ್ಮ ನಿಲುವನ್ನು ಹೇಳಿದ ಮೇಲೂ ಚಡ್ಡಿ ದಿನಪತ್ರಿಕೆಗಳು ಬೇಕಂತಲೇ ನಿರ್ಲಕ್ಷಿಸಿ ಪ್ರಕಟಿಸದೆ ಗೊಂದಲ ಮೂಡಿಸಿದರೂ ಅದಕ್ಕೂ ಪಾಪ ಬುದ್ಧಿಜೀವಿಗಳೇ ಹೊಣೆ....!

ಹೇಗಿದೆ ಈ ಖಾಜಿ ನ್ಯಾಯ?

ಇಲ್ಲಿ ಇನ್ನೊಂದು ವಿಚಾರವಿದೆ. ಭಯೋತ್ಪಾದನೆ ಅಂದರೆ ಬರೀ ಬಾಂಬ್ ಸ್ಫೋಟ ಮಾತ್ರಾನಾ?

ಮೊನ್ನೆ ಆದಿ ಉಡುಪಿ ಬೆತ್ತಲೆ ಪ್ರಕರಣದ ಆರೋಪಿಗಳು ಬಿಡುಗಡೆಯಾದ ಮೇಲೆ “ಇನ್ನು ಮುಂದೆ ಬೀದಿಬೀದಿಗಳಲ್ಲಿ ಆದಿಉಡುಪಿ ತರದ ಘಟನೆ ನಡೆಸುತ್ತೇವೆ” ಅಂತ ಚಡ್ಡಿಗಳು ಕಿರುಚಿಕೊಂಡಿದ್ದಾರೆ. ಇದು ಭಯೋತ್ಪಾದನೆ ಅಲ್ಲವಾ? ಈ ಮಾತು ಕೇಳಿದ ಮೇಲೂ ಒಂದೇ ಒಂದು ಖಂಡನಾ ಹೇಳಿಕೆ ಕೊಡದೆ ತಮ್ಮ ಜನಿವಾರ ನೀವಿಕೊಂಡು ಸುಮ್ಮನಿದ್ದಾರಲ್ಲ ಈ ದೇಶಭಕ್ತರು ಇದಕ್ಕೇನು ಹೇಳುತ್ತೀರಿ?

ಚಿಡಿ ಚಿತ್ರಗಳು

• ಈಶ

ಕನಕಗೋಪುರ ಕೆಡವಿದಾಗ, ಕಂಬಾಲಪಲ್ಲಿ ದುರಂತ ನಡೆದಾಗ, ಬ್ರಾಹ್ಮಣ ಮಠಗಳಲ್ಲಿ ಶೂದ್ರ ಭಕ್ತರಿಗೊಂದು ಊಟ, ವಿಪ್ರರಿಗೊಂದು ಊಟ ಹಾಕುತ್ತಿರುವಾಗ ನೀವು ಖಡಾಖಂಡಿತವಾಗಿ ಖಂಡಿಸುವುದಿಲ್ಲ ಯಾಕೆ ಐನೋರೆ?

ಮೇಲ್ಜಾತಿ ಹಿಂದೂಗಳು ಬೆಂಡಗೇರಿ ಯಲ್ಲಿ ದಲಿತರಿಗೆ ಕಕ್ಕ ತಿನ್ನಿಸುತ್ತಿದ್ದಾಗ ನಿಮ್ಮಂಥೋರು ಪ್ರೆಸ್ ಕ್ಲಬ್‌ನಲ್ಲಿ ಕಬಾಬು ತಿನ್ನುತ್ತಾ ಕೂತಿದ್ದಿರಿ. ಬಾಬರಿ ಮಸೀದಿ ಬೀಳಿಸಿದಾಗ, ಗುಜರಾತ್‌ನಲ್ಲಿ ನರಮೇಧ ನಡೆದಾಗ, ಆರೆಸ್ಸೆಸ್‌ನವರು ಶಿವಕಾಶಿ ನಾಂದೇಡನಲ್ಲಿ ಬಾಂಬ್ ಹಾಕಿದಾಗ, ಸತಿ ಹೆಸರಿನಲ್ಲಿ ವಿಧವೆಯರನ್ನು ಜೀವಂತ ಸುಡುತ್ತಿರುವಾಗ...

ನೀವದನ್ನು ಅವತ್ತೂ ಖಂಡಿಸಲಿಲ್ಲ, ಇವತ್ತೂ ಖಂಡಿಸುವುದಿಲ್ಲ.... ಯಾಕೆ ಅಂತ ಕೇಳಬಹುದಾ?

ನಿಮ್ಮ ಮೂಗಿನ ನೇರಕ್ಕೆ ನಾವೂ ಮಾತನಾಡಿದರೆ ಮಾತ್ರ ನಿಮ್ಮಗಳಿಗೆ ಹಿತಾನುಭವ ಆಗುತ್ತದೆ. ಅದರ ಬದಲಾಗಿ ಸ್ವಂತ ಅಭಿಪ್ರಾಯವಿಟ್ಟುಕೊಂಡರೆ ತೊಣಚಿ ಹೊಕ್ಕಂತಾಡುತ್ತೀರಲ್ಲ ಯಾಕೆ ಅಂತ!

ಇದೇ ತರದ ಇನ್ನೊಬ್ಬನಿದ್ದಾನೆ. ಒಂದಿಷ್ಟು ಹಡಬೆ ದುಡ್ಡು ಬಿಕರಿಗೆ ಸಿದ್ಧರಿರುವ ಕೆಲ ಹುಡುಗರನ್ನು ಜೊತೇಲಿಟ್ಟುಕೊಂಡು, ಆಗಾಗ್ಗೆ ಕೂಗು ಹಾಕುತ್ತಿರುತ್ತಾನೆ. ಹಾಗೆ ಕಿರುಚಿಕೊಂಡ ತಕ್ಷಣ ಇಡೀ ರಾಜ್ಯದ ಪ್ರಗತಿಪರರು, ಬುದ್ಧಿಜೀವಿಗಳು ತನ್ನ ಹಿಂದೆ ನಿಲ್ಲಬೇಕೆಂದು ನಿರೀಕ್ಷಿಸುತ್ತಿರುತ್ತಾನೆ.


ಹೊಣೆಯರಿತ ಯಾರೂ ವಿವೇಚನೆ ಬದಿಗಿಟ್ಟು ಕರೆದವರ ಹಿಂದೆ ಓಡಿಹೋಗುವುದಿಲ್ಲ, ಚಡ್ಡಿ ಅಜೆಂಡಾಗಳ ತಾಳಕ್ಕೆ ಗೌಡರ ರಾಗಕ್ಕೆ ಎಲ್ಲರೂ ಕುಣಿಯಲಾಗುವುದಿಲ್ಲ, ಇಲ್ಲಿ ದೇಶಭಕ್ತಿಯೋ, ಪ್ರಗತಿಪರತೆಯೋ ಯಾರಪ್ಪನ ಸೊತ್ತು ಅಲ್ಲ, ಯಾರೋ ಕೆಲವರು ಗುತ್ತಿಗೆ ಹಿಡಿದಿರುವ ದಂಧೆಯೂ ಅಲ್ಲ... ಸರೀನಾ?

ರಾಮಸೇತು ಕಟ್ಟಿದವರು.... ಕಟ್ಟಲಿಲ್ಲ ಯಾಕೆ?

ಇದು ಕೆಲವರಿಗೆ ಕಿಡಿಗೇಡಿತನ ಅನ್ನಿಸಬಹುದು. ಈಗ ರಾಮಸೇತು ಗಲಾಟೆ ನಡೆದಿದೆಯಷ್ಟೇ. ಈ ಸೇತುವೆ ಇತ್ತೋ ಇಲ್ಲವೊ ಬೇರೆ ಮಾತು ಬಿಡಿ. ಆದರೆ ಆ ರಾಮಭಕ್ತ ಕಪಿಗಳು ಅಂದು ಅಷ್ಟು ಆಳವಾದ ಸಮುದ್ರದಲ್ಲಿ ಮೈಲುಗಟ್ಟಲೆ ಉದ್ದದ ಸೇತುವೆ ಕಟ್ಟುವ ಬದಲಾಗಿ ಸಿಂಪಲ್ಲಾಗಿ ದೋಣಿಗಳನ್ನು ರೆಡಿ ಮಾಡಿಕೊಂಡು ಲಂಕೆಗೆ ಹೋಗಬಹುದಾಗಿತ್ತಲ್ಲವಾ?

ಪುಷ್ಪಕ ವಿಮಾನಗಳಲ್ಲಿ ಓಡಾಡುತ್ತಿದ್ದ, ಪರ್ವತಗಳನ್ನೇ ಕಿತ್ತು ಕೇಕ್‌ನಂತೆ ಕೈಲಿಟ್ಟುಕೊಂಡು ಹಾರಿಬರುತ್ತಿದ್ದ ವೀರರಿಗೆ ದೋಣಿ ತಯಾರಿಸಬಹುದೆಂಬುದು ಹೊಳೆಯಲಿಲ್ಲವಾ?

ಅದೂ, ರಾಮ ಅಯೋಧ್ಯೆ ತ್ಯಜಿಸಿ ವನವಾಸಕ್ಕೆ ಹೊರಟಾಗ ಒಮ್ಮೆ ಸರಯೂ ನದಿಯನ್ನು ದೋಣಿಯಲ್ಲೇ ದಾಟಿದನೆಂಬ ಕತೆಯೂ ಇರುವಾಗ?



ಸ್ಪಷ್ಟೀಕರಣ



ಮಾನ್ಯರೆ,

ದಿ. 30.7.2008 ರ ‘ಲಂಕೇಶ್’ ವಾರ ಪತ್ರಿಕೆಯಲ್ಲಿ ಪ್ರಕಟವಾದ ‘ಸತ್ಯಭಾಮ ಎಂಬ ಸರ್ವಾಧಿಕಾರಿಣಿ!’ ಸುದ್ದಿಯ ಬಗ್ಗೆ..

ನನ್ನ ಸ್ಪಷ್ಟೀಕರಣ ಈ ಕೆಳಕಂಡಂತಿದೆ.

* ನಾನು ದಿ. 2.7.2008 ರಿಂದ ಕೊಳ್ಳೇಗಾಲ ಉಪವಿಭಾಗಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಇಂದಿನವರೆಗೆ 61RA ಪ್ರಕರಣಗಳನ್ನು ಇತ್ಯರ್ಥಪಡಿಸಿರುತ್ತೇನೆ.
* ದಿ. 31.7.2007 ರಂದು 80 ಕ್ಕೂ ಅಧಿಕ ಓವರ್ ಲೋಡ್ ತುಂಬಿದ್ದ ಮರಳು ಲಾರಿಗಳ ಮೇಲೆ ಕ್ರಮ (ಓವರ್‌ಲೋಡ್ ಎಂಬ concept ಅದುವರೆವಿಗೂ ಬರೀ ದಾಖಲೆಗಳಲ್ಲಿ ಮಾತ್ರ ಇತ್ತೆಂಬುದು ನನ್ನ ಭಾವನೆ)
* ಆಗಸ್ಟ್ ತಿಂಗಳಲ್ಲಿ ‘ಭರಚುಕ್ಕಿ ಜಲಪಾತೋತ್ಸವ’ವನ್ನು ಯಶಸ್ವಿಯಾಗಿ ನಿರ್ವಹಿಸಿದೆ.
* ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಗ್ರಾಮದ ಸ.ನಂ. 1ರಲ್ಲಿ (ಭರಚುಕ್ಕಿ ಜಲಪಾತ ಇರುವ ಜಾಗ) ಅನಧಿಕೃತ ವ್ಯಕ್ತಿಗಳು RTC ಯಲ್ಲಿ ಅನಧಿಕೃತವಾಗಿ ಎಂಟ್ರಿ ಪಡೆದಿದ್ದುದನ್ನು ಸರ್ವೆ ಹಾಗೂ ಇನ್ನಿತರೆ ಕಂದಾಯ ದಾಖಲೆಗಳನ್ನು ಪರಿಶೀಲಿಸಿ 13,60 ಎಕರೆ 25 ಸೆಂಟನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಂಡಿರುತ್ತೇನೆ.
* ಹೊರ ರಾಜ್ಯದವರು, ಹೊರ ಜಿಲ್ಲೆಯವರು ಕ್ರಯಕ್ಕೆ ಪಡೆದಿರುವ ಭೂ ಸುಧಾರಣಾ ಕಾಯಿದೆ ಉಲ್ಲಂಘಿಸಿರುವವರ ಅಂದರೆ 110 ಕ್ಕೂ ಅಧಿಕ ಉಲ್ಲಂಘನೆ ಪ್ರಕರಣಗಳು ಹಾಗೂ 600 ಎಕರೆಗೂ ಅಧಿಕ ವಿಸ್ತೀರ್ಣವನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಂಡಿರುತ್ತೇನೆ.
* ಕರಿಕಲ್ಲು ಲಾರಿಗಳ, ಮರಳು ಲಾರಿಗಳ ಮೇಲೆ ಕ್ರಮ ಜರುಗಿಸಿ 1 ಲಕ್ಷಕ್ಕೂ ಅಧಿಕ ದಂಡ ವಸೂಲಿ ಮಾಡಿದ್ದು (ನೇರವಾಗಿ) ಪೊಲೀಸ್, ಮತ್ತಿತರ ಇಲಾಖೆಗಳಿಂದ ಹಲವಾರು ಬಾರಿ ಕ್ರಮ ಜರುಗಿಸುವಂತೆ ಮಾಡಿ (ಪರೋಕ್ಷವಾಗಿ) ಸರ್ಕಾರದ ಖಜಾನೆ ತುಂಬಿರುತ್ತದೆ.

ಇನ್ನು ನಾನು ದಲಿತ ವಿರೋಧಿ ಎಂಬ ಬಗ್ಗೆ,

ನಾನು ಹಿಂದುಳಿದ ಗೊಲ್ಲ ಜನಾಂಗದಿಂದ ಬಂದವಳು, ನಿಷ್ಠುರವಾಗಿ ಕೆಲಸ ಮಾಡುವಾಗ ಜಾತಿ-ಕುಲವೆಂದು ನೋಡಲಾಗುವುದೆ?

ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಸಾರ್ವಜನಿಕ ಹಣವನ್ನು ಲೂಟಿ ಹೊಡೆಯುವುದು, PTCL ಪ್ರಕರಣಗಳಲ್ಲಿ ಕೋಟ್ಯಂತರ ಕೊಳ್ಳೆ ಹೊಡೆದಿರುವುದು, ಮಧುಗಿರಿಯಲ್ಲಿ 80 ಲಕ್ಷದ ಮನೆ ಇವ್ಯಾವುದೂ ನಿಜವಲ್ಲ.

ಎಲ್ಲಾ ದಂಧೆಯವರನ್ನು ಎದುರು ಹಾಕಿಕೊಂಡು ನಾನಿಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ. ಮಹಿಳೆ ಎಂದೂ ಅಬಲೆಯಲ್ಲ ಎಂಬುದನ್ನು ನಾನಿಲ್ಲಿದ್ದುಕೊಂಡು ಸಾಧಿಸಿ ತೋರಿಸಿದ್ದೇನೆ. ಕೊಳ್ಳೇಗಾಲ ಉಪವಿಭಾಗವೆಂದರೆ ಮೂಗು ಮುರಿಯುವ ನನ್ನ ಸಹಪಾಠಿಗಳಿಗೆ ಕೊಳ್ಳೇಗಾಲದಲ್ಲಿ ಕೂಡ ಕೆಲಸ ನಿರ್ವಹಿಸಬಹುದೆಂದು ತೋರಿಸಿದ್ದೇನೆ.

ನೀವು ಮಾಡಿರುವ ಪ್ರತಿಯೊಂದು ಆರೋಪಗಳಿಗೂ ದಾಖಲೆ ಸಮೇತ ನನ್ನ ಸ್ಪಷ್ಟೀಕರಣ ನೀಡಿರುತ್ತೇನೆ. ಈ ದಾಖಲೆಗಳನ್ನು ನಿಧಾನವಾಗಿ ಪರಿಶೀಲಿಸಿ ಸತ್ಯ ಸಂಗತಿ ಮನನ ಮಾಡಿಕೊಳ್ಳಿ.

ಇಂತಿ ನಿಮ್ಮ ವಿಶ್ವಾಸಿ,
ಸಿ. ಸತ್ಯಭಾಮ
ಉಪವಿಭಾಗಾಧಿಕಾರಿ, ಕೊಳ್ಳೇಗಾಲ

ಲಿಂಗಾಯತರು ಗಣಪತಿ ಪೂಜೆ ಮಾಡುವುದು ತಪ್ಪು

ಒಂದು ಪತ್ರ

ಗಣಪತಿ ಹಬ್ಬದಲ್ಲಿ ತಮ್ಮ ಮನೆಮಠ, ಪಡಸಾಲೆ, ಬೀದಿಗಳಲ್ಲಿ ಗಣಪತಿ ಕೂರಿಸುವ ಮೂಲಕ ಕೆಲವು ಲಿಂಗಾಯತರು ಬಸವ ತತ್ವಗಳಿಗೆ ಅಪಚಾರವೆಸಗುತ್ತಿದ್ದಾರೆ. ಲಿಂಗಾಯತರು ಗಣಪತಿ, ಗೌರಿ, ಸರಸ್ವತಿ, ಲಕ್ಷ್ಮಿ, ಮಾರಿ, ದೇವಿ, ಗಂಗೆ, ಆಯುಧ, ಗೋವು, ಹೊಸ್ತಿಲು, ಬನ್ನಿ, ನವಗ್ರಹ, ನಾಗ ಮುಂತಾದ ಅನ್ಯದೈವಗಳನ್ನು ಪೂಜಿಸುವುದು ಅತ್ಯಂತ ವೈಚಾರಿಕವಾದ ಲಿಂಗಾಯತ ಧರ್ಮಸಮ್ಮತವಲ್ಲ.

ಲಿಂಗಾಯತರು ತಮ್ಮ ದೇಹವನ್ನೇ ದೇವಾಲಯ ಮಾಡಿ, ಇಷ್ಟಲಿಂಗವನ್ನು ಕೊರಳಲ್ಲಿ ಧರಿಸಿ, ದೇವಸ್ಥಾನಗಳನ್ನು ಕಟ್ಟಿಸದೆ, ಅನ್ಯದೈವಗಳನ್ನು ಪೂಜಿಸದೆ, ಹೋಮಹವನಾದಿಗಳನ್ನು ಮಾಡದೆ, ದೇವಸ್ವರೂಪಿಗಳಾದ ಗುರುಲಿಂಗಜಂಗಮರನ್ನು ಮಾತ್ರ ಪೂಜಿಸಬೇಕೆಂಬುದು ಲಿಂಗಾಯತ ಧರ್ಮ ಸಿದ್ಧಾಂತ.

ಗಣಪತಿ ಪೂಜೆ ಮಾಡಬೇಕೆಂಬ ನಂಬಿಕೆ ಸಾಂಪ್ರದಾಯಿಕ ಹಿಂದೂಗಳಲ್ಲಿರುವುದು ನಿಜ. ಆದರೆ ಅದು ಲಿಂಗಾಯತ ಧರ್ಮೀಯರಿಗೆ ಅನ್ವಯಿಸುವುದಿಲ್ಲ, ಏಕೆಂದರೆ, ಆಯಾ ಧರ್ಮದ ಗಣಪತಿ ಬೇರೆ ಬೇರೆ ಇರುತ್ತಾರೆ. ‘ಗಣ’ ಎಂದರೆ ಸಮಾಜ ಅಥವಾ ಸಮೂಹ, ‘ಪತಿ’ ಎಂದರೆ ಒಡೆಯ ಅಥವಾ ಗಂಡ, ‘ಗಣಪತಿ’ ಎಂದರೆ ಇಲ್ಲಿ ಸಮಾಜದ ಒಡೆಯ ಎಂದರ್ಥ. ಹೀಗಾಗಿ ಲಿಂಗಾಯತರ ‘ಗಣಪತಿ’ ಬಸವಣ್ಣನವರೇ ವಿನಾ ಕಾಲ್ಪನಿಕ ದೇವತೆ ಗಣಪತಿಯಲ್ಲ.

ಸೃಷ್ಟಿ ಮಾಡಲು ಒಬ್ಬ ಬ್ರಹ್ಮ, ಪಾಲನೆ ಮಾಡಲು ಇನ್ನೊಬ್ಬ ವಿಷ್ಣು ಲಯ ಮಾಡಲು ಮತ್ತೊಬ್ಬ ಶಿವ ಬೇಕಿಲ್ಲ, ವಿಘ್ನಗಳನ್ನು ಪರಿಹರಿಸು ಎಂದು ಗಣಪತಿಯನ್ನು, ವಿದ್ಯೆಯನ್ನು ಕೊಡು ಎಂದು ಸರಸ್ವತಿಯನ್ನು, ಹಣವನ್ನು ಕೊಡು ಎಂದು ಲಕ್ಷ್ಮಿಯನ್ನು, ಮಳೆಯನ್ನು ಕೊಡು ಎಂದು ವರುಣನನ್ನು... ಹೀಗೆ ಭಿನ್ನಭಿನ್ನವಾಗಿ ಪೂಜಿಸಿದರೆ, ಅದು ಬಹುದೇವತೋಪಾಸನೆಯಾಗಿ, ಏಕದೇವೋಪಾಸನೆ ಬೋಧಿಸುವ ಲಿಂಗಾಯತ ಧರ್ಮ ತತ್ವಕ್ಕೆ ವಿರುದ್ಧವಾಗುವುದು. ಜಗತ್ತಿಗೆಲ್ಲ ದೇವನು ಒಬ್ಬನೇ. ಅವನೇ ಸೃಷ್ಟಿಸ್ಥಿತಿಲಯಗಳನ್ನು ನಿರ್ವಹಿಸಬಲ್ಲ, ಅವನೇ ವಿಘ್ನನಿವಾರಕ, ವಿದ್ಯಾದಾತ, ಧನದಾತ, ಶಕ್ತಿದಾತ. ಆದ್ದರಿಂದ ಲಿಂಗಾಯತರು ವಿವಿಧ ಕಾರಣಗಳಿಗೆ ಇತರೆ ದೇವತೆಗಳನ್ನು ಪೂಜಿಸುವುದು ತಪ್ಪು “ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ, ನಂಬಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ” ಎಂಬ ಬಸವವಾಣಿಯಂತೆ, ಸದ್ಭಕ್ತಿಯು ಪಾತಿವ್ರತ್ಯದಿಂದ ಕೂಡಿರಬೇಕು. ನಿರಾಕಾರ ಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗವನ್ನು ಅವನೇ ವಿಘ್ನನಿವಾರಕನೆಂದು, ವಿದ್ಯಾದಾತನೆಂದು, ಧನದಾತನೆಂದು, ಶಕ್ತಿದಾತನೆಂದು, ವಿಶ್ವನಿಯಾಮಕನೆಂದು ನಂಬಿ, ಪೂಜಿಸಬೇಕೆಂಬುದು ಬಸವ ಧರ್ಮದ ಕಟ್ಟಪ್ಪಣೆ.

“ಕಲ್ಲದೇವರು ದೇವರಲ್ಲ, ಮಣ್ಣದೇವರು ದೇವರಲ್ಲ ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವನೋಡಾ ಅಪ್ರಮಾಣ ಕೂಡಲಸಂಗಮದೇವಾ” ಎಂದು ಬಸವಣ್ಣನವರು ದೇವರ ಸ್ವರೂಪವನ್ನು ಹೇಳಿರುವಾಗ, ಲಿಂಗಾಯತರು ಗಣಪತಿ ಮುಂತಾದ ಅನ್ಯದೈವಗಳನ್ನು ಪೂಜಿಸಿ, ಸಮಾಜವನ್ನು ಬಸವ ಪೂರ್ವದ ಕಂದಾಚಾರದ ಕಡೆ ಒಯ್ಯುತ್ತಿರುವುದು ವಿಪರ್ಯಾಸ.


-ಸು.ಮಲ್ಲಿಕಾರ್ಜುನಪ್ಪ, ಚಾಮರಾಜನಗರ ಜಿಲ್ಲೆ

ಮತ್ತೆ ಬಂದ ಮೋಹನ



ಕೆಲವರಡು ವರ್ಷಗಳಿಂದ ತೆರೆಮರೆಯಲ್ಲಿದ್ದ ಮೋಹನ್ ಚಿತ್ರರಂಗದಿಂದ ಕಳೆದುಹೋದರೋ ಎನ್ನುವಷ್ಟು ಮೌನಿಯಾಗಿದ್ದರು. ಈಗ ಎರಡೆರಡು ಚಿತ್ರಗಳ ನಿರ್ದೇಶನದ ಜವಾಬ್ದಾರಿಯೊಂದಿಗೆ ಮೋಹನ್ ಮತ್ತೆ ಗಾಂಧಿನಗರದಲ್ಲಿ ಓಡಾಡುತ್ತಿದ್ದಾರೆ. ಇವರ ನಿರ್ದೇಶನದ ಚಿತ್ರಗಳ ಹೆಸರು 'ಕಣ್ಮಣಿ' ಮತ್ತು 'ಕೃಷ್ಣಾ ನೀ ಲೇಟಾಗಿ ಬಾರೋ....'

ಈ ಎರಡೂ ಚಿತ್ರಗಳ ಟೈಟಲ್ ಚಿತ್ತೋಹಾರಿಯಾಗಿದೆ. ಮೋಹನ್ ಮೂಲತಃ ಕಥೆ, ಚಿತ್ರಕಥೆ ಬರೆಯುವಲ್ಲಿ ನಿಸ್ಸೀಮರು. ಹೀಗಾಗಿ ಅವರದೇ ನಿರ್ದೇಶನದ ಚಿತ್ರಗಳು ಉತ್ತಮವಾಗಿರುತ್ತವೆ ಎಂಬ ನಿರೀಕ್ಷೆ ಸಹಜವಾಗಿಯೇ ಮೂಡುತ್ತದೆ. ಆದರೆ ಈತನ ಮಾತಿಗೂ ಕೃತಿಗೂ ಅಜಗಜಾಂತರ ವ್ಯತ್ಯಾಸವಿರುವುದರಿಂದ ಚಿತ್ರ ನೋಡಿದಾಗ ಬಹಳಷ್ಟು ಬಾರಿ ನಿರಾಶೆಯಾಗಿದ್ದೇ ಹೆಚ್ಚು. ಈ ಬಾರಿ ಮೋಹನ್ ಅದನ್ನೇ ರಿಪೀಟ್ ಮಾಡಲಾರರು ಎಂದು ಆಶಿಸೋಣವೇ?



ವರ್ಷದ ಮಿಲನ


ಪುನೀತ್ ರಾಜ್‌ಕುಮಾರ್ ಅಭಿನಯದ 'ಮಿಲನ' ಚಿತ್ರ ಈಗ ಇತರೆಡೆ ಯಾವ ಚಿತ್ರಮಂದಿರದಲ್ಲೂ ಕಾಣಸಿಗದಿದ್ದರೂ ಬೆಂಗಳೂರಿನ ಪಿ.ವಿ.ಆರ್. ಥಿಯೇಟರಿನಲ್ಲಿ ಬೆಳಗಿನ ದೇಖಾವೆಯಲ್ಲಿ ಪ್ರದರ್ಶನ ಕಾಣುತ್ತಿದೆ. ಇನ್ನೊಂದು ತಿಂಗಳು ಇದು ಹೀಗೇ ಮುಂದುವರೆದು ಬರುವ ಸೆಪ್ಟೆಂಬರ್ ಮೊದಲ ವಾರಕ್ಕೆ ಆ ಚಿತ್ರ ಒಂದು ವರ್ಷ ಪ್ರದರ್ಶನವನ್ನು ಕಂಡ ದಾಖಲೆ ಸ್ಥಾಪಿಸಲಿದೆ.

ಅದು ಪುನೀತ್ ವೃತ್ತಿಜೀವನದಲ್ಲಿ ಸ್ಮರಣೀಯ ಗಳಿಗೆಯಾಗಲಿದೆ. ಯಾಕೆಂದರೆ ಒಂದು ವರ್ಷ ಕಾಲ ಪ್ರದರ್ಶನ ಕಂಡ ಚಿತ್ರಗಳಲ್ಲಿ ನಟಿಸಿದ್ದ ತನ್ನ ತಂದೆ ರಾಜ್‌ಕುಮಾರ್, ಸಹೋದರರಾದ ಶಿವರಾಜ್‌ಕುಮಾರ್ ಮತ್ತು ರಾಘವೇಂದ್ರ ರಾಜ್‌ಕುಮಾರ್ ಇರುವ ಪಟ್ಟಿಗೆ ಅವರೂ ಸೇರಲಿದ್ದಾರೆ.

ಕನ್ನಡ ಚಿತ್ರರಂಗದಲ್ಲಿ ಮೊಟ್ಟ ಮೊದಲು ಒಂದು ವರ್ಷ ಭರ್ಜರಿಯಾಗಿ ಓಡಿದ್ದ ಚಿತ್ರ ಡಾ. ರಾಜ್ ಮತ್ತು ಭಾರತಿ ಅಭಿನಯದ 'ಬಂಗಾರದ ಮನುಷ್ಯ'. ಅದಾದ ನಂತರ ರಾಜ್ ನಟಿಸಿದ್ದ 'ಶಂಕರ್ ಗುರು' ಮತ್ತು 'ಜೀವನ ಚೈತ್ರ' ಚಿತ್ರಗಳೂ ಒಂದು ವರ್ಷದ ಪ್ರದರ್ಶನವನ್ನು ಕಂಡಿದ್ದವು. ಇಲ್ಲಿಯತನಕ ಯಾವ ಕನ್ನಡ ನಟನೂ ಸ್ಥಾಪಿಸದಿರುವ, ಆದರೆ ಅಣ್ಣಾವ್ರು ಸ್ಥಾಪಿಸಿದ್ದ ಅಪರೂಪದ ಹ್ಯಾಟ್ರಿಕ್ ಅದು ಎನ್ನಬಹುದು.

ರಾಜ್‌ಕುಮಾರ್ ನಂತರ '365 ಡೇಸ್' ಸಾಧನೆಯನ್ನು ಮಾಡಿದ್ದು ಅವರ ಪುತ್ರರಾದ ಶಿವರಾಜ್‌ಕುಮಾರ್ ಮತ್ತು ರಾಘವೇಂದ್ರ ರಾಜ್‌ಕುಮಾರ್. ಶಿವಣ್ಣ ನಟಿಸಿದ್ದ ಟಿ.ಎಸ್. ನಾಗಾಭರಣ ನಿರ್ದೇಶಿಸಿದ್ದ 'ಜನುಮದ ಜೋಡಿ' ಎಂಬ ಗ್ಲಾಮರ್ ರಹಿತ ಕಮರ್ಷಿಯಲ್ ಚಿತ್ರ ಒಂದು ವರ್ಷ ಓಡಿತ್ತು, ಅದೇ ಸಂದರ್ಭದಲ್ಲಿ ರಾಘವೇಂದ್ರ ರಾಜ್‌ಕುಮಾರ್ ನಾಯಕನಾಗಿ ನಟಿಸಿದ್ದ 'ನಂಜುಂಡಿ ಕಲ್ಯಾಣ' ಕೂಡಾ ಒಂದು ವರ್ಷದ ಸಂಭ್ರಮವನ್ನು ಹಲವಾರು ಕೇಂದ್ರಗಳಲ್ಲಿ ಆಚರಿಸಿತ್ತು. ಇವೆರಡೂ ರಾಜ್ ಸಂಸ್ಥೆಯಾದ ವಜ್ರೇಶ್ವರಿ ಕಂಬೈನ್ಸ್ ಕೊಡುಗೆಯಾಗಿದ್ದು 'ನಂಜುಂಡಿ ಕಲ್ಯಾಣ'ವಂತೂ ಕನ್ನಡ ಚಿತ್ರರಂಗದಲ್ಲಿ ಬಾಕ್ಸಾಫೀಸ್ ದಾಖಲೆಯನ್ನೇ ಮುರಿದಿತ್ತು.

ಇದೀಗ ಪುನೀತ್ ರಾಜ್‌ಕುಮಾರ್ ಕೂಡ ಅದೇ ಹಾದಿಯಲ್ಲಿ ಸಾಗಿ ರಾಜ್‌ಕುಮಾರ್ ಕುಟುಂಬದ ಎಲ್ಲಾ ಕಲಾವಿದರೂ '365 ಡೇಸ್' ಎಂಬ ಮ್ಯಾಜಿಕ್ ಫಿಗರ್ ಅನ್ನು ತಲುಪಿದಂತಾಗಿದೆ. ಈ ಮಧ್ಯೆ ವಿಷ್ಣುವರ್ಧನ್ ಅಭಿನಯದ 'ಯಜಮಾನ' ಮತ್ತು ಗಣೇಶ್ ಅಭಿನಯದ 'ಮುಂಗಾರು ಮಳೆ' ಚಿತ್ರ ಕೂಡಾ ಇಂತಹ ಅಪರೂಪದ ಸಾಧನೆಗೆ ಪಾತ್ರವಾಗಿದೆ.



ಗಣೇಶನ ಬೊಂಬಾಟ ಮಹರ್ಷಿಯ ದೊಂಗಾಟ

ಇದು ಗಣೇಶನ ಬೊಂಬಾಟವೋ ಅಥವಾ ಮಹರ್ಷಿಯ ದೊಂಗಾಟವೋ ಒಂದೂ ತಿಳಿಯುತ್ತಿಲ್ಲ. ಕಳೆದ ತಿಂಗಳಷ್ಟೇ ಪ್ರಜ್ವಲ್ ಅಭಿನಯದ 'ಮೆರವಣಿಗೆ' ರಿಲೀಸ್ ಆದಾಗ 'ಲಂಕೇಶ್' ಈ ತೆಲುಗು ದೊಂಗನ ಕಳ್ಳಾಟದ ಪುಟ್ಟ ಪ್ರವರವನ್ನೇ ಪ್ರಕಟಿಸಿತ್ತು

ಈಗ 'ಬೊಂಬಾಟ್' ಚಿತ್ರದ ಮೂಲಕ ಮಹರ್ಷಿ ಎಂಬ ಸಿನಿಮಾ ಸ್ಮಗ್ಲರ್‌ನ ನಿಜಬಣ್ಣ ನೂರಕ್ಕೆ ನೂರರಷ್ಟು ಬಯಲಾಗಿದೆ. ಖದೀಮ ಕಥೆಗಾರ ಮಹರ್ಷಿಯನ್ನು ತಲೆ ಮೇಲೆ ಕೂರಿಸಿಕೊಂಡು ಮೆರೆಯುತ್ತಿದ್ದ ರಾಕ್‌ಲೈನ್‌ಗೆ ಈ ಸಿನಿಮಾ ಒಳ್ಳೆಯ ಪಾಠವನ್ನೇ ಕಲಿಸಿದೆ.

ಎಂಟು-ಹತ್ತು ಲಕ್ಷ ರೂಪಾಯಿಯ ದೊಡ್ಡ ಮೊತ್ತವನ್ನು ಮಹರ್ಷಿಯ ಮೂಗಿಗೇರಿಸಿ ತಂದ 'ಬೊಂಬಾಟ್' ಕಥೆ ತೆಲುಗಿನಿಂದ ಎತ್ತುವಳಿ ಮಾಡಿದ್ದೆಂದು ಎಂಥ ಪಾಮರ ಕೂಡ ಹೇಳಬಹುದು. ಈ ಮಹರ್ಷಿ ಸ್ಟೋರಿ ರೈಟರ್ರೋ ಅಥವಾ ರೀರೈಟರ್ರೋ ಗೊತ್ತಿಲ್ಲ, ಯಾಕೆಂದರೆ ಈತ ಕಥೆ ರಚಿಸಲು ಬುದ್ಧಿ ಖರ್ಚು ಮಾಡುವುದಕ್ಕಿಂತ ಕಥೆ ಕದಿಯಲು ಕ್ರಿಮಿನಲ್ ಬುದ್ಧಿ ಉಪಯೋಗಿಸುವುದೇ ಹೆಚ್ಚು. ಯಾಕೆಂದರೆ 'ಬೊಂಬಾಟ್' ಚಿತ್ರ ಕೂಡ ಕದ್ದ ಮಾಲು. ತೆಲುಗಿನಲ್ಲಿ ಸೂಪರ್‌ಹಿಟ್ ಆದ ಸಿದ್ಧಾರ್ಥ-ಇಲಿಯಾನಾ ಜೋಡಿಯ 'ಆಟ' ಚಿತ್ರದ ಶೇ. 75ರಷ್ಟು ಭಾಗವನ್ನು ಮುಲಾಜಿಲ್ಲದೇ ಕಟಾವು ಮಾಡಿಕೊಂಡಿರುವ ಮಹರ್ಷಿ ಪ್ರೇಕ್ಷಕರ ದಿಕ್ಕು ತಪ್ಪಿಸಲು ಮತ್ತೊಂದು ಸಿನಿಮಾ 'ಪೋಕರಿ'ಯನ್ನೂ ಅಷ್ಟಿಷ್ಟು ಬಳಸಿಕೊಂಡಿದ್ದಾನೆ. ತನ್ನ ಕಳ್ಳ ಕೆಲಸವನ್ನು ಇಷ್ಟಕ್ಕೇ ಮುಗಿಸದ ಈತ ತನ್ನದೇ ಕಥೆಯಲ್ಲಿ ಬಂದಿದ್ದ ಕನ್ನಡ ಚಿತ್ರವೇ ಆದ 'ಬಿಂದಾಸ್'ನ ಕೆಲವು ಭಾಗವನ್ನೂ ಎಗರಿಸಿಬಿಟ್ಟಿದ್ದಾನೆ. ಬಹುಶಃ ಕದಿಯುವ ಭರದಲ್ಲಿ ಈ ಹಿಂದೆ 'ಪೋಕರಿ'ಯಿಂದ 'ಬಿಂದಾಸ್'ಗಾಗಿ ಕದ್ದ ಸಾಲುಗಳನ್ನು ಈ ಪುಣ್ಯಾತ್ಮ ಮರೆತಿದ್ದನೋ, ಏನೋ..




ಒಟ್ಟಾರೆ ಈ ಜನಾರ್ದನ ಮಹರ್ಷಿಗೂ ಮತ್ತು ಅಪ್ಸರಾ ಥಿಯೇಟರಿನ ಪಕ್ಕದಲ್ಲಿ ಕದ್ದ ಬೂಟುಗಳನ್ನು ತೊಳೆದು; ಪಾಲಿಶ್ ಮಾಡಿ ಮಾರುವವರಿಗೂ, ಅಲ್ಲಿಇಲ್ಲಿ ಕಳ್ಳತನ ಮಾಡಿ ಆರು ಕಾಸಿನ ವಸ್ತುವನ್ನು ಮೂರುಕಾಸಿಗೆ ಮಾರುವ ಚೋರನಿಗೂ ಯಾವುದೇ ವ್ಯತ್ಯಾಸ ಕಾಣುತ್ತಿಲ್ಲ. ಇಂಥ ದೊಂಗ ಮಹಾಶಯನನ್ನು ನಂಬಿ ಆತನ ದರಿದ್ರ ಜೋಳಿಗೆಯ ಕಥೆಗಳಿಗಾಗಿ ಲಕ್ಷಗಟ್ಟಲೆ ಹಣವನ್ನು ಚೆಲ್ಲುತ್ತಿರುವ ನಮ್ಮ ಗಾಂಧಿನಗರದ ನಿರ್ಮಾಪಕ ದೇವರುಗಳ ತಲೆಗೆ ಅದ್ಯಾವ ತೆಲುಗು ದೆವ್ವ ಮೆಟ್ಟಿಕೊಂಡಿದೆಯೋ ತಿಳಿಯುತ್ತಿಲ್ಲ.

ಎಗರಾಡಿದ್ದರು ಬಾಬು

ಆಘಾತಕಾರಿ ಮತ್ತು ಸೋಜಿಗದ ಅಂಶವೆಂದರೆ 'ಬೊಂಬಾಟ್' ಚಿತ್ರ ಆರಂಭವಾದಾಗ ಸ್ವತಃ ಡಿ. ಬಾಬು ಅವರಿಗೇ ಈ ಚಿತ್ರದ ಕಥೆ ಗೊತ್ತಿರಲಿಲ್ಲವಂತೆ. ಗಣೇಶನ ಕಾಲ್‌ಶೀಟ್ ಸಿಕ್ಕಿದ್ದೇ ತಡ; ರಾಕ್‌ಲೈನ್ ಈ ಹಳೇತಲೆಮಾರಿನ ಬಾಬು ಕೈಗೆ ನಿರ್ದೇಶನದ ಜವಾಬ್ದಾರಿ ನೀಡಿದ್ದಾರೆ. ಮಹರ್ಷಿಯೂ ಹಂತಹಂತವಾಗಿ ಕಥೆಯನ್ನು ನೀಡಿದ್ದಾನೆ. ಒಂದು ಹಂತದಲ್ಲಿ ತಾನೇ ನಿರ್ದೇಶಿಸಿದ್ದ 'ಬಿಂದಾಸ್'ನ ಕಥೆಯೇ ಇಲ್ಲಿ ಮರುಕಳಿಸುತ್ತಿರುವುದನ್ನು ನೋಡಿ ಬಾಬುಗೆ ಸತ್ಯದ ಅರಿವಾಗಿದೆ. ಇದರಿಂದ ವ್ಯಘ್ರಗೊಂಡ ಬಾಬು ಚಿತ್ರೀಕರಣದ ಸೆಟ್‌ನಲ್ಲೇ ಮಹರ್ಷಿಯ ಮೇಲೆ ಎಗರಾಡಿದ್ದರಂತೆ. 'ಏನಯ್ಯಾ ನನ್ನ ಹಿಂದಿನ ಸಿನಿಮಾಗೆ ಕೊಟ್ಟ ಕಥೆಯನ್ನೇ ಮತ್ತೆ ನನಗೇ ಕೊಡುತ್ತಿದ್ದೀಯಲ್ಲ' ಎಂದು ಹೌಹಾರಿದ್ದರಂತೆ. ಬಾಬು ಎಷ್ಟೇ ಬೊಂಬಡ ಹೊಡಕೊಂಡರೂ ಕಾಲಮಿಂಚಿಹೋಗಿತ್ತು, ಗಣೇಶನಂಥ ಗಣೇಶನ ಕಾಲ್‌ಶೀಟನ್ನು ವೇಸ್ಟ್ ಮಾಡಿಕೊಳ್ಳುವುದುಂಟಾ? ವಿಧಿಯಿಲ್ಲದೆ ಸಿನಿಮಾ ಮಾಡಿ ಮುಗಿಸಿದ್ದಾರೆ ಬಾಬು.

ಹಳ್ಳಕ್ಕೆ ಬಿದ್ದ ರಾಕ್



ರಾಕ್‌ಲೈನ್ ವೆಂಕಟೇಶ್ ತನ್ನ ಹೆಸರಿಗೆ ತಕ್ಕಂತೆ ಕನ್ನಡ ಚಿತ್ರರಂಗದ ಮಟ್ಟಿಗೆ ಧೀರನೇ ಸರಿ. ರವಿಚಂದ್ರನ್-ಹಂಸಲೇಖಾರನ್ನು ಒಂದುಗೂಡಿಸಿದ ಛಲಗಾರ ಮತ್ತು ದಿವಂಗತ ನಟಿ ಸೌಂದರ್ಯ ಒಮ್ಮೆ ಚಿತ್ರೀಕರಣಕ್ಕೆ ಬಾರದೆ ಕೈಕೊಟ್ಟಾಗ ಆಕೆಯ ಮನೆ ಮುಂದೆ ಧರಣಿ ಕುಳಿತು ನ್ಯಾಯ ಪಡೆದ ಭೂಪ. ಇಂತಹ ಮನುಷ್ಯ ಮಹರ್ಷಿಯಂಥ ಮೋಸಗಾರನಿಗೆ ಮಣೆ ಹಾಕಿದ್ದಲ್ಲದೇ "ಮಹರ್ಷಿಯವರು ಕಥೆ ಚೆನ್ನಾಗಿ ಬರೆಯದಿದ್ದರೂ ಅದನ್ನು ಚೆನ್ನಾಗಿ ಹೇಳುತ್ತಾರೆ. ಅದಕ್ಕೇ ನಾವು ಅವರ ಬಳಿ ಕಥೆಗಾಗಿ ಬೇಡಿ ನಿಲ್ಲುತ್ತೇವೆ" ಎಂಬ ನಾಚಿಕೆಗೇಡಿನ ಹೇಳಿಕೆಯನ್ನು ನೀಡಿದ್ದರು. ಆದರೆ 'ಬೊಂಬಾಟ್' ಅದಕ್ಕೆಲ್ಲ ಉತ್ತರವಾಗಿದೆಯಲ್ಲದೇ ರಾಕ್‌ಲೈನ್ ಈ ತೆಲುಗು ದೊಂಗ ತೋಡಿದ ಹಳ್ಳಕ್ಕೆ ಬಿದ್ದಿರುವುದನ್ನು ತೋರಿಸುತ್ತಿದೆ.


ಬಾಬು ಬಂಡಾಟ



ಒಂದೆಡೆ ಮಹರ್ಷಿಯ ಹಳಸಲು ಕಥೆಯೊಂದಿಗೆ ಡಿ. ಬಾಬು ಕೂಡ ತಮ್ಮ ಅದೇ ಹಳೇ ಜಮಾನಾ ಶೈಲಿಯ ನಿರ್ದೇಶನದಿಂದ ಪ್ರೇಕ್ಷಕರನ್ನು ಪರದಾಡಿಸುತ್ತಾರೆ. ಗಣೇಶ್‌ನ ತಂದೆ ಶೋಭರಾಜ್ ರೌಡಿ ಪಾತ್ರದಲ್ಲಿ ಬ್ಯಾಗ್ ಹಿಡಿದು ಮಾರ್ಕೆಟ್‌ನಲ್ಲಿ ಸಿಕ್ಕಸಿಕ್ಕವರ ಚೈನು, ಉಂಗುರಗಳನ್ನು ಪೀಕುತ್ತಾ, ರೋಲ್‌ಕಾಲ್ ಮಾಡುವ ಎಪಿಸೋಡಾಗಲಿ, ವಿಲನ್‌ಗಳ ಹಿಂದೆ ಹತ್ತಾರು ಜನ ಯೂನಿಫಾರ್ಮ್ ತೊಟ್ಟು ಫೈಟ್ ಮಾಡುವುದಾಗಲಿ ಎಲ್ಲವೂ ಬಾಬು ಇನ್ನೂ ಇಪ್ಪತ್ತೈದು ವರ್ಷಗಳ ಹಿಂದೆಯೇ ಕುಕ್ಕರಿಸಿರುವುದನ್ನು ಖಚಿತಗೊಳಿಸುತ್ತದೆ.

ಒಟ್ಟಿನಲ್ಲಿ ಇಬ್ಬರು ಹಳಸಲು ವ್ಯಕ್ತಿಗಳಿಂದ ಚಿತ್ರ ಹಳ್ಳ ಹಿಡಿದಿದೆ. 'ಬೊಂಬಾಟ' ಬಂಡಾಟದಂತೆ ಗೋಚರಿಸುತ್ತಿದೆ.

■ ಅರುಣ್ ಕುಮಾರ್.ಜಿ



ಗಣೇಶನೇ ಬೇಕಿತ್ತಾ?

ಹಾಗೆ ನೋಡಿದರೆ ಈ ಚಿತ್ರ 'ಗಣೇಶನ ಚಿತ್ರ'ವೇ ಅಲ್ಲ. ಚೆಲ್ಲಾಟದಿಂದ ಹಿಡಿದು 'ಅರಮನೆ'ಯತನಕ ಬಂದ ಗಣೇಶನ ಚಿತ್ರಗಳ ಸ್ಟೈಲೇ ಒಂದು ತೆರನಾದ್ದು. ಅಲ್ಲೇನಿದ್ದರೂ ಈತ ಬಡಬಡಾ ಮಾತನಾಡುತ್ತಾ, ತಲೆ ಕೆರೆದುಕೊಳ್ಳುತ್ತಾ, ಚೆಲ್ಲು ಚೆಲ್ಲಾಗಿ ನಟಿಸಿದ್ದ. ಈ ಬಾರಿ "ಮಾತಾಡಿ ಮಾತಾಡಿ ಮೈಯೆಲ್ಲ ಮರಗಟ್ಟಿಹೋಗಿದೆ ಸ್ವಲ್ಪ ಕೈಯಾಡಿಸುತ್ತೀನಿ" ಎಂದು ಗಣೇಶ್ ನಿರ್ಧರಿಸಿದ್ದಾನೆ.

ಅಸಲಿಗೆ 'ಬೊಂಬಾಟ್' ಚಿತ್ರದಲ್ಲಿ ಆಕ್ಷನ್ ಹೀರೋಗಳಾದ ದರ್ಶನ್ ಅಥವಾ ಸುದೀಪ್ ನಟಿಸುತ್ತಿದ್ದಿದ್ದರೆ ಕಡೇಪಕ್ಷ ಲೂಸ್ ಮಾದ ಆದರೂ ನಡೆಯುತ್ತಿತ್ತು. ಆದರೆ ಈ ಪಾತ್ರ ಗಣೇಶನಿಗೆ ಹೊಂದುವುದಿಲ್ಲ. ಅಮೂಲ್ ಬೇಬಿಯಂತೆ ಗುಂಡುಗುಂಡಾಗಿರುವ ಗಣೇಶ್ ಆರೂವರೆ ಅಡಿ ಎತ್ತರದ ವಿಲನ್‌ಗಳ ಜೊತೆ ಕಾದಾಡುವ ದೃಶ್ಯಗಳು ಆಕ್ಷನ್‌ಗಿಂತ ಕಾಮಿಡಿ ಸೀನ್‌ಗಳಂತೆ ಕಂಡರೆ ಆಶ್ಚರ್ಯವಿಲ್ಲ! ■

R B PLANKESH, Kannada Weekly Price Rs. 12/- 20-8-2008 RNI No. KARKAN2005/14648 Regd.No.KA/RNP/BGS/2036/2008-10

ಚೆಡ್ಡಿ ಕಲಾವಿದರ ಅಮೆರಿಕ ಪ್ರವಾಸ!







ಅಮೆರಿಕದ ಶಿಕಾಗೋದಲ್ಲಿ ನಡೆಯಲಿರುವ 'ಅಕ್ಕ' ವಿಶ್ವ ಕನ್ನಡ ಸಮ್ಮೇಳನಕ್ಕೆ ಕನ್ನಡ ಚಿತ್ರರಂಗದ ಬಹುದೊಡ್ಡ ತಾರಾ ದಂಡೇ ಹೊರಡುತ್ತಿರುವ ಸೂಚನೆಗಳು ಕಾಣಿಸುತ್ತಿವೆ.


ಈಗಾಗಲೇ ಗುರುಕಿರಣ್ ನೇತೃತ್ವದಲ್ಲಿ ಒಂದು ರಸಮಂಜರಿ ಕಾರ್ಯಕ್ರಮ ನೀಡುವುದು ಖಚಿತವಾಗಿದೆ. ಕಳೆದ ಬಾರಿ ನೀಡಿದ ಕಾರ್ಯಕ್ರಮದಿಂದ ಉತ್ಸಾಹಗೊಂಡಿರುವ ಗುರುಕಿರಣ್ ಈ ಬಾರಿ ತನ್ನೊಂದಿಗೆ ಪುನೀತ್ ರಾಜ್‌ಕುಮಾರ್ ಮತ್ತು ಉಪೇಂದ್ರ ದಂಪತಿಗಳನ್ನು ಕರೆದುಕೊಂಡುಹೋಗುತ್ತಿದ್ದಾರೆ. ಕಳೆದ ಬಾರಿ ಪಕ್ಕವಾದ್ಯದವರನ್ನು ಕರೆದುಕೊಂಡು ಹೋಗದ ಗುರುಕಿರಣ್ ಕಾರ್ಯಕ್ರಮ ಸಪ್ಪೆಯಾಗಿತ್ತು. ಆದ್ದರಿಂದ ಈ ಬಾರಿ ಗುರು ತನ್ನ ಸಂಪೂರ್ಣ ತಂಡದೊಂದಿಗೆ ಹೊರಟಿದ್ದಾರೆ.

ಹಿಂದೊಮ್ಮೆ "ಇನ್ನೆಂದೂ ಅಕ್ಕ ಸಂಸ್ಥೆಯ ಆಹ್ವಾನವನ್ನು ಒಪ್ಪುವುದಿಲ್ಲ" ಎಂದು ಡಂಗೂರ ಸಾರಿದ್ದ ಸಿ. ಅಶ್ವಥ್ ಈ ಬಾರಿ ಅದನ್ನು ಮರೆತು ತಮ್ಮ ಕೀರಲು ಕಂಠದೊಂದಿಗೆ ಯಾವ ಲಜ್ಜೆಯೂ ಇಲ್ಲದೆ ಹೊರಟುನಿಂತಿದ್ದಾರೆ. ಇನ್ನೊಂದೆಡೆ ಕಳೆದ ಬಾರಿ ವೀಸಾ ವಂಚಿತರಾದ ನಾಗಾಭರಣ ಅಮೆರಿಕಕ್ಕೆ ಹೋಗೋ ಉದ್ದೇಶದಿಂದಲೇ ವಿಷ್ಣುವರ್ಧನ್ ಅಭಿನಯದ 'ನಂಯಜಮಾನ್ರು' ಚಿತ್ರದ ತರಾತುರಿಯನ್ನು ಮುಗಿಸಿದ್ದಾರೆ.


ಇದರ ಹೊರತಾಗಿ ಸರಕಾರ ಕೂಡಾ ತನ್ನ ಬೊಕ್ಕಸದಿಂದ ಸ್ವಲ್ಪ ಹಣವನ್ನು ಖರ್ಚು ಮಾಡಿ ಕಲಾವಿದರನ್ನು 'ಅಕ್ಕ' ನೋಡಲು ಕಳುಹಿಸುತ್ತಿದೆ. ಫಿಲಂ ಚೇಂಬರ್‌ನ ಅಧ್ಯಕ್ಷೆ ಜಯಮಾಲಾ ಒಬ್ಬರನ್ನೇ ಉದ್ಯಮದ ಪ್ರತಿನಿಧಿಯಾಗಿ ಆಯ್ಕೆ ಮಾಡಿರುವುದು ಆಕೆಗೆ ಮುಜುಗರವಾಗಿದೆ. ಆದರೆ ಬಿಜೆಪಿ ಪಕ್ಷದ ಖೋಟಾದಲ್ಲಿ ನಿರ್ದೇಶಕ ಮಹೇಂದರ್, ಶೃತಿ, ಮದನ್ ಪಟೇಲ್ ಮತ್ತು ಮುಖ್ಯಮಂತ್ರಿ ಚಂದ್ರು... ಮುಂತಾ ದವರನ್ನು ಆಯ್ಕೆ ಮಾಡಿದ್ದಾರೆ. ಅಂತೂ ಎಂಎಲ್‌ಸಿ ಸೀಟಗಾಗಿ ಭಯಂಕರ ಪ್ರಯತ್ನ ಮಾಡಿದ ಶೃತಿ ಮತ್ತು ಮದನ್ ಪಟೇಲ್ ಈಗ ಅಮೆರಿಕ ಪ್ರವಾಸದಿಂದ ತೃಪ್ತಿಪಡಬೇಕಾಗಿದೆ.

ಚಿತ್ರರಂಗಕ್ಕೆ ಅಪಾರ ಸೇವೆ ಸಲ್ಲಿಸಿದ ಕಲಾವಿದರನ್ನು ಮರೆತು ಚುನಾವಣೆಯಲ್ಲಿ ತಮ್ಮ ಪಕ್ಷದ ಪರ ಪ್ರಚಾರ ಮಾಡಿದ ಚೆಡ್ಡಿ ಕಲಾವಿದರನ್ನು ಅಮೆರಿಕಕ್ಕೆ ಕಳುಹಿಸುತ್ತಿರುವುದನ್ನು ಪ್ರತಿಭಟಿಸುವ ಕನಿಷ್ಟ ಧೈರ್ಯ ಕೂಡಾ ನಮ್ಮ ಉದ್ಯಮದವರಿಗೆ ಇಲ್ಲದಿರುವುದು ನಾಚಿಕೆಗೇಡಿನ ವಿಷಯ. ■

ಜೊತೆಗಾರ



'ಜೊತೆ ಜೊತೆಯಲಿ' ಚಿತ್ರ ಬಾಕ್ಸಾಫೀಸಿನಲ್ಲಿ ಗೆದ್ದಾಗ ಅದರ ನಾಯಕ ಪ್ರೇಮ್ ಮತ್ತು ನಾಯಕಿ ರಮ್ಯಾಳ ಕಾಲ್‌ಶೀಟ್‌ಗಾಗಿ ಇಡೀ ಗಾಂಧಿನಗರವೇ ಪ್ರಯತ್ನ ಪಟ್ಟಿತ್ತು. ಆದರೆ ಕಳೆದ ಮೂರು ವರ್ಷಗಳಿಂದ ಇವರಿಬ್ಬರ ಕಾಲ್‌ಶೀಟ್ ಪಡೆಯುವಲ್ಲಿ ಯಾರೂ ಯಶಸ್ವಿಯಾಗಿರಲಿಲ್ಲ. ಆದರೀಗ ಅಶ್ವಿನಿ ಸಂಸ್ಥೆಯ ರಾಂಪ್ರಸಾದ್ ಇವರಿಬ್ಬರನ್ನು ಒಟ್ಟು ಸೇರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವರಿಬ್ಬರು ನಟಿಸುವ ಚಿತ್ರದ ಹೆಸರು 'ಜೊತೆಗಾರ'.



ಮತ್ತೊಬ್ಬ ಪ್ರೇಮ್‌ನನ್ನು ನಂಬಿಕೊಂಡು 'ಪ್ರೀತಿಯಾಕೆ ಭೂಮಿ ಮೇಲಿದೆ' ಮೂಲಕ ಕೋಟ್ಯಂತರ ರೂಪಾಯಿ ಕಳೆದುಕೊಂಡ ಅಶ್ವಿನಿ ರಾಮ್‌ಪ್ರಸಾದ್ ಈ ಪ್ರೇಮ್‌ನ ಮುಖಾಂತರ ಹಣವನ್ನು ಮರಳಿ ಪಡೆಯಲು ಹೊರಟಂತಿದೆ.

ಅದೇನೇ ಇರಲಿ, ಈ ಚಿತ್ರ ರಾಂಪ್ರಸಾದ್‌ಗೆ ಮಾತ್ರವಲ್ಲ ಪ್ರೇಮ್ ಪಾಲಿಗೂ ಪುನರ್‌ಜನ್ಮ ನೀಡುತ್ತದೆಯೋ ಎಂಬುದನ್ನು ಕಾದುನೋಡಬೇಕಾಗಿದೆ. ಯಾಕೆಂದರೆ 'ಜೊತೆಜೊತೆಯಲಿ' ಚಿತ್ರ ಬಾಕ್ಸಾಫೀಸಿನಲ್ಲಿ ಗೆದ್ದ ನಂತರ ಪ್ರೇಮ್ ನಟಿಸಿದ ಯಾವುದೇ ಚಿತ್ರ ಆ ಮಟ್ಟದ ಭರ್ಜರಿ ಯಶಸ್ಸು ಕಂಡಿಲ್ಲ. ಹೀಗಾಗಿ ರಾಮ್-ಪ್ರೇಮ್ ಜೋಡಿ ಸೋಲಿನ ಸರಪಳಿಯಿಂದ . ಹೊರಬರುವುದೇ? ನೋಡೋಣ.

30 ಮುಟ್ಟಿದ ರಮ್ಯಾ

ನಾಯಕಿ ರಮ್ಯಾ 30 ತಲುಪಿದ್ದಾಳೆ.

ದಿಢೀರನೆ ಈ ವಾಕ್ಯವನ್ನು ಓದಿದರೆ ಆಕೆಯ ಅಭಿಮಾನಿಗಳಿಗೆ ಖಂಡಿತ ನಿರಾಶೆಯಾಗಬಹುದು. ಆದರೆ ನಾವಿಲ್ಲಿ ಮೂವತ್ತು ಎಂದಿರುವುದು ಆಕೆಯ ವಯಸ್ಸಲ್ಲ; ಆಕೆ ಪಡೆಯುತ್ತಿರುವ ಸಂಭಾವನೆ. ಹೀಗೆ ಚಿತ್ರವೊಂದಕ್ಕೆ ಮೂವತ್ತು ಲಕ್ಷ ರೂಪಾಯಿ ಸಂಭಾವನೆ ಪಡೆಯುವ ಮುಖಾಂತರ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಅತ್ಯಂತ ದುಬಾರಿ ಕನ್ನಡದ ನಾಯಕಿ ಎಂಬ ಅಪರೂಪದ ಗೌರವಕ್ಕೆ ಈಕೆ ಪಾತ್ರಳಾಗಿದ್ದಾಳೆ.

ಸುಮಾರು ಒಂದು ದಶಕದ ಹಿಂದೆ 'ಮಾಲಾಶ್ರೀ ಜಮಾನಾ' ಗಾಂಧಿನಗರದಲ್ಲಿ ಚಾಲ್ತಿಯಲ್ಲಿದ್ದಾಗ ಚಿತ್ರವೊಂದಕ್ಕೆ ಆಕೆ ಎಂಟು ಲಕ್ಷ ರೂಪಾಯಿ ಸಂಭಾವನೆ ಪಡೆಯುತ್ತಿದ್ದುದೇ ಭಯಂಕರ ಚರ್ಚೆಗೆ ಗ್ರಾಸವಾಗಿತ್ತು. ಆದರೆ ಈಗ ಗಾಂಧಿನಗರದಲ್ಲಿ ಸಾಕಷ್ಟು ನೀರು ಹರಿದಿದೆ.... ರಮ್ಯಾ ಅಗ್ರಗಣ್ಯೆ ಎನಿಸಿಕೊಂಡಿದ್ದಾಳೆ.

ಚಿತ್ರವೊಂದಕ್ಕೆ ಮೂವತ್ತು ಲಕ್ಷ ರೂ. ಸಂಭಾವನೆ ಪಡೆಯುವಷ್ಟು ಆಕೆ ಪ್ರತಿಭಾವಂತಳೇ? ಆಕೆಯ ಬಗೆಗಿನ ಕ್ರೇಜ್‌ನಿಂದಲೇ ಚಿತ್ರ ಓಡುತ್ತದೆಯೇ?... ಹೀಗೆ ಹತ್ತಾರು ಪ್ರಶ್ನೆಗಳು ಉದ್ಭವಿಸುವುದು ಸಹಜ. ಇಂತಹ ಪ್ರಶ್ನೆಗಳು ಈ ಮಾಯಾಲೋಕದಲ್ಲಿ ಪ್ರಶ್ನೆಗಳಾಗಿಯೇ ಉಳಿಯುತ್ತವೆಯೇ ವಿನಃ ಅದಕ್ಕೆ ಉತ್ತರ ಸಿಗುವುದಿಲ್ಲ. ಆದರೆ ಒಂದು ಮಾತಂತೂ ಸತ್ಯ, ರಮ್ಯಾ ಕನ್ನಡ ಚಿತ್ರರಂಗದಲ್ಲಿ ಕಾಣಿಸಿಕೊಂಡಿರುವ ಅತ್ಯಂತ ಜಾಣ ಮತ್ತು ಚುರುಕು ಹುಡುಗಿ ಎಂಬುದರಲ್ಲಿ ದೂಸರಾ ಮಾತೇ ಇಲ್ಲ. ಆಕೆ ತನ್ನ ವೃತ್ತಿಜೀವನದ ಗ್ರಾಫ್‌ಅನ್ನು ತುಂಬ ಜಾಣ್ಮೆಯಿಂದ ಹೆಣೆಯುತ್ತಾ ಹೋಗುತ್ತಿದ್ದಾಳೆ. ಬಹುಶಃ ಇಷ್ಟೊಂದು ಜಾಣ್ಮೆ ಮತ್ತು ಜಾಗರೂಕತೆಯನ್ನು ಮಾಲಾಶ್ರೀ, ಪ್ರೇಮಾ, ಸುಧಾರಾಣಿ.... ಮೊದಲಾದವರು ತೋರಿಸಿದ್ದರೆ ಅವರು ಇಂದಿಗೂ ಚಾಲ್ತಿಯಲ್ಲಿ ಇರುತ್ತಿದ್ದರೋ, ಏನೋ?

ಉದಾಹರಣೆಗೆ ಈ ವಾರ ಬಿಡುಗಡೆಯಾಗಿರುವ ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ 'ಬೊಂಬಾಟ್' ಚಿತ್ರವನ್ನು ನೋಡಿದರೆ ರಮ್ಯಾಳ ಅಭಿಮಾನಿಗಳಿಗೆ ಶಾಕ್ ಆಗುವುದು ಖಂಡಿತ. ಯಾಕೆಂದರೆ ಇಡೀ ಚಿತ್ರದಲ್ಲಿ ಆಕೆ ಎರಡು ಹಾಡುಗಳಲ್ಲಿ ಕುಣಿದದ್ದು ಬಿಟ್ಟರೆ ಆಕೆಗೆ ಬೇರೇನೂ ಪ್ರಾಮುಖ್ಯತೆ ಇಲ್ಲವೇ ಇಲ್ಲ. ಕೇವಲ ನಾಮ್‌ಕಾವಸ್ತೆಗಾಗಿ ಮಾತ್ರ ಆಕೆ ಈ ಚಿತ್ರದಲ್ಲಿದ್ದಾಳೆ.

ಹೀಗಂತ ರಮ್ಯಾಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವೇ ಇಲ್ಲ. ಯಾಕೆಂದರೆ, ಮುಂದಿನ ವಾರ ಬಿಡುಗಡೆಯಾಗಲಿರುವ 'ಅಂತೂ ಇಂತೂ ಪ್ರೀತಿ ಬಂತು' ಆ ಚಿತ್ರದಲ್ಲಿ ನಾಯಕ ಡಮ್ಮಿಯಾಗಿದ್ದು ಇಡೀ ಚಿತ್ರವೇ 'ರಮ್ಯಮಯ'ವಾಗಿದೆ. ಆ ಚಿತ್ರ ರಮ್ಯಾಳ ನಾಮಬಲದಿಂದಲೇ ಓಡಬೇಕಾಗುತ್ತದೆ.




ಅಷ್ಟೇ ಅಲ್ಲ, ರಮ್ಯಾ ತಮಿಳು ಮತ್ತು ತೆಲುಗು ಚಿತ್ರಗಳಲ್ಲಿ ನಟಿಸಿ ಅಲ್ಲಿಯ ಚಿತ್ರಪ್ರೇಕ್ಷಕರ ಹೃದಯಕ್ಕೆ ಕಿಚ್ಚಿಡುವ ರೀತಿಯಲ್ಲಿ ತನ್ನ ಮೈಮಾಟವನ್ನು ಪ್ರದರ್ಶಿಸಿ ಸೈ ಎನಿಸಿಕೊಂಡಿದ್ದಾಳೆ. ಪರಭಾಷೆಯಲ್ಲಿ 'ಬಿಚ್ಚಮ್ಮ'ನಾಗಿ ಧಾರಾಳವಾಗಿ ಸೌಂದರ್ಯವನ್ನು ಪ್ರದರ್ಶಿಸುವ ಈ ಹುಡುಗಿ ಕನ್ನಡದಲ್ಲಿ ಮಾತ್ರ ಇನ್ನೂ ಗೌರಮ್ಮನಾಗಿಯೇ ತನ್ನ ಇಮೇಜನ್ನು ಉಳಿಸಿಕೊಂಡಿದ್ದಾಳೆ. ಈ ಮಧ್ಯೆ ರಾಜ್ ಸಂಸ್ಥೆಯ ಬ್ಯಾನರ್‌ನಲ್ಲಿ ನಿರ್ಮಿಸಿದ ಮೂರು ಚಿತ್ರಗಳಲ್ಲಿ ಪುನೀತ್ ರಾಜ್‌ಕುಮಾರ್ ಜೊತೆ ನಟಿಸಿ ರಮ್ಯಾ ಹ್ಯಾಟ್ರಿಕ್ ದಾಖಲೆ ಮಾಡಿದ್ದಾಳೆ. ಅಪ್ಪು ಜೊತೆ ಮೂರು ಚಿತ್ರಕ್ಕೆ ಈ ತನಕ ಬೇರೆ ಯಾವ ನಾಯಕಿಯೂ ರಿಪೀಟ್ ಆಗಿಲ್ಲ. ಈ ಮೂರೂ ಚಿತ್ರಗಳು (ಅಭಿ, ಆಕಾಶ್ ಮತ್ತು ಅರಸು) ಬಾಕ್ಸಾಫೀಸಿನಲ್ಲಿ ಯಶಸ್ಸು ಕಂಡಿದ್ದರಿಂದ ಈಕೆಯ ವರ್ಚಸ್ಸು ವೃದ್ಧಿಯಾಯಿತು.

ಈ ಮಧ್ಯೆ ರಮ್ಯಾ ಕಮರ್ಷಿಯಲ್ ಚಿತ್ರಗಳಿಂದ ಸ್ವಲ್ಪ ದೂರ ಬಂದು ಕಲಾತ್ಮಕ ಚಿತ್ರಗಳಲ್ಲಿ ನಟಿಸುವ ಮೂಲಕ ತನ್ನ ಅಭಿರುಚಿಯನ್ನು ಪ್ರದರ್ಶಿಸಿದ್ದಾಳೆ. ಟಿ.ಎನ್. ಸೀತಾರಾಮ್ ಅವರ 'ಮೀರಾ ಮಾಧವ ರಾಘವ' ಚಿತ್ರ ಅದಕ್ಕೊಂದು ಪುಟ್ಟ ಉದಾಹರಣೆ. ಈಗಲೂ ಮುಖಕ್ಕೆ ಬಣ್ಣ ಹಚ್ಚದೇ ಕಲಾತ್ಮಕ ಚಿತ್ರವೊಂದರಲ್ಲಿ ನಟಿಸಲು ತಯಾರಿದ್ದೇನೆ ಎಂದು ಹೇಳುವ ಮುಖಾಂತರ 'ಮೂವತ್ತಕ್ಕಿಂತ' ಮರ್ಯಾದೆ ಮುಖ್ಯ ಎಂಬುದನ್ನು ಪರೋಕ್ಷವಾಗಿ ಹೇಳಿದಂತಿದೆ.


ಇದೀಗ 'ಜೊತೆಜೊತೆಯಲಿ' ಚಿತ್ರದ ನಾಯಕ ಪ್ರೇಮ್ ಜೊತೆ ಮತ್ತೊಂದು ಹೊಸ ಚಿತ್ರಕ್ಕೆ ರಮ್ಯಾ ಸಹಿ ಹಾಕಿದ್ದಾಳೆ. ಹಾಗೆಯೇ ವೈಭವ್ ಥಿಯೇಟರ್ ಮಾಲೀಕರ ಮಗನ ಆರಂಗೇಟ್ರಂ ಚಿತ್ರಕ್ಕೆ ಈಕೆಯೇ ನಾಯಕಿ ಎಂಬುದು ಕೇಳಿಬರುತ್ತಿದೆ. ಹೀಗೆ ಹೊಸಬರಿಗೆ ಸಾಥಿಯಾಗಿ ಹಳಬರಿಗೆ ಸಾಟಿಯಾಗುತ್ತಾ ರಮ್ಯಾ ತನ್ನ ವೃತ್ತಿಜೀವನದಲ್ಲಿ ಒಂದೊಂದೇ ಮೆಟ್ಟಿಲನ್ನು ಏರುತ್ತಿದ್ದಾಳೆ. ಈಗಾಗಲೇ ಹಲವಾರು ವಾದ, ವಿವಾದ, ಜಗಳ, ಕೋಳಿಜಗಳ, ಮುನಿಸುಗಳಿಂದಲೇ ಈಕೆ ಫೇಮಸ್ ಆಗಿದ್ದರೂ ಆಕೆಯ ಬೇಡಿಕೆಗೆ ಮಾತ್ರ ಕುತ್ತು ಆಗಿಲ್ಲ. ಹೀಗೆ ಜಾಣತನದಿಂದ ಆಕೆ ತನ್ನ ವೃತ್ತಿಜೀವನ ರೂಪಿಸಿಕೊಂಡಿರುವುದರಿಂದಲೇ ವಯಸ್ಸು ಮೂವತ್ತಾಗುವ ಮೊದಲೇ ಮೂವತ್ತು ಲಕ್ಷ ಸಂಭಾವನೆ ಪಡೆಯಲು ಸಾಧ್ಯವಾಗಿದೆ. ಇದು ರಮ್ಯಾಳ ರಮ್ಯ ಸಂಭಾವನಾ ಕತೆ...!

■ ಶೆಣೈ



ಮೆಂಟಲ್ ಎಬಿಲಿಟಿ
ಲೇಖಕರು ಎ.ಎನ್. ಅಂಜನಪ್ಪ
ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕ
ಮೆಂಟಲ್ ಎಬಿಲಿಟಿಗೆ ಸಂಬಂಧಿಸಿದ
ಸಮಗ್ರ ಮಾರ್ಗದರ್ಶನ ನೀಡಬಲ್ಲ
ಕನ್ನಡದ ಮೊಟ್ಟಮೊದಲ ಪುಸ್ತಕ

ಅಭ್ಯರ್ಥಿಗಳ ಅಪಾರ ಮೆಚ್ಚುಗೆ
ಪಡೆಯುತ್ತಿರುವ ಪುಸ್ತಕ
ಪೋಲೀಸ್ ನೇಮಕಾತಿ
ಪರೀಕ್ಷಾ ಕೈಪಿಡಿ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate,